ಹೋಟ್ಟುಗಳು ಇವೆ. ಈ ಸಭೆಯಲ್ಲಿ ಎರಡು ಬಾರಿ ಬಂಡಿರತಕ್ಕ ಅವಿಶ್ವಾಸ ನಿರ್ಣಯಗಳ ವಸ್ತು ಹಾಗಿದೆ. ಆ ಬೇಡಿಕೆಗೆ ಉತ್ತರವಾಗಿ ಸರಕಾರದವರು ಇಂತಹ ಒಂದು ಶ್ವೇತ ಪತ್ರವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಪ್ರತ್ಯೇಕವಾಗಿ ಸಭೆ ಪರಿಶೀಲನೆ ಮಾಡಬೇಕು. ಇದಕ್ಕೆ ಸಾಕಷ್ಟು ಸಮಯಬೇಕು. ಇದರಮೇಲೆ ಸರಕಾರದವರು ಏನು ಹೇಳುತ್ತಾರೆ? ನಾವು ಆಪಾದನೆಗಳನ್ನು ಮಾಡಿರುವುದರ ಬಗ್ಗೆ ನ್ಯಾಯ ವಿಚಾರಣೆಯನ್ನು ಮಾಡುತ್ತಾರೆಯೋ ಅಥವಾ ಶ್ವೇತ ಪತ್ರವೇ ಕೊನೆಯ ಮಾತೇ? ಅವರು ಇದನ್ನು ಸ್ಪಷ್ಟಪಡಿಸಬೇಕು. ಶ್ವೇತ ಪತ್ರದ ಚರ್ಚೆಯನ್ನು ಈ ಡಿಮ್ಯಾಂಡ್ ಚರ್ಚೆಯಲ್ಲಿ ಸೇರಿಸಬಾರದು ಎಂದು ನನ್ನ ವಿನಂತಿ.

Mr. SPEAKER.—I am only telling the Hon'ble Members the exact position. When the Power Demand is there and is going to be discussed and already discussed by one of the members thoroughly during the General Discussion on the budget, the point is whether there should be a separate discussion on the Sharavathy White Paper. Of course, it is entirely for the House to decide and not for me to decide. If we take more time for these demands, the time left over will be encroached upon. The Appropriation Bill has to be introduced on the 30th and passed by this House and it has to go to the Council by the 31st instant where it has to be passed. So far as I am concerned, I am agreeable to any suggestion that the House makes. I want the opinion of the House. The House allotted four hours for this demand accepting the report of the Business Advisory Committee.

Sri S. NIJALINGAPPA (Chief Minister).—What the chair has said is correct.

Mr. SPEAKER.—One of the Whips and some members want more time for Forest and Social Welfare. The Hon'ble Ministers will require two hours. Out of four hours, if they take two hours, what is left for the members ?

Sri S. NIJALINGAPPA.—I will ask the Ministers to be brief.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದರೆ).—ಡಿಮ್ಯಾಂಡುಗಳ ಬಗ್ಗೆ ಮಾತನಾಡುವಾಗ ಸಮಯಾವಕಾಶವನ್ನು ತಾವು ಮೊಟಕು ಮಾಡಬಾರದು.

Sri S. SIVAPPA.—Sir, you wanted to know the opinion of the House regarding allotment of separate time for the discussion of the White Paper on Sharavathy. You know, Sir, what an amount of interest it has aroused in the State. It is a unique project and as such it should be dealt with separately.

Mr. SPEAKER.—I leave it to the House. I am concerned with the demands before the House now.

BUDGET ESTIMATES FOR 1964-65.

Demands—Nos. 27, 38 and 51.

(Debate continued.)

† **ಶ್ರೀ ಎಸ್. ಸುಬ್ಬಯ್ಯ ನಾಯಕ್** (ಸೂಳ್ಯ).—ಮಾನ್ಯ ಅಧ್ಯಕ್ಷರೇ, ನಾನು ನನ್ನ ಮಾತ್ರ ನಾಡುತ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್‌ಗಳಿಗಾಗಿ ಪ್ರತ್ಯೇಕ ಬ್ಲಾಕನ್ನು ಕೊಡಲಾಗದಿದ್ದರೆ ಸೆಂಟ್ರಲ್ ಗವರ್ನಮೆಂಟಿನವರಿಂದ 86 ಸಾವಿರ ರೂಪಾಯಿಗಳಷ್ಟು ಸಹಾಯದಿಂದ ಮಾಡಿರುವ ಒಂದು ಕಾಲೋನಿ ಇದೆ, ಅಲ್ಲಿಗೆ ಎಲ್ಲ ಸವಲತ್ತುಗಳನ್ನೂ ಕೊಡಬೇಕೆಂದು ನಾನು ಇಚ್ಛಿಸುತ್ತೇನೆ.

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಅನೇಕ ಕಾಟೇಜ್ ಇಂಡಸ್ಟ್ರೀಸ್ ಇವೆ. ಜೇನ್ನೊಣ ಸಾಕುವುದು, ಬೆತ್ತದ ಕೆಲಸ, ಪಶುಪಾಲನೆ ಮುಂತಾದುವುಗಳಿಗೆ ಎಲ್ಲ ಸೌಲಭ್ಯ ಒದಗಿಸಿಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಮಿಲ್ಚ್ ಕೌ ಗೋಸ್ಕರ 85 ರೂಪಾಯಿ ಒದಗಿಸಿದ್ದಾರೆ. ಇಷ್ಟು ಹಣ ಸಾಕಾಗುವುದಿಲ್ಲವಾದ್ದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಬಾಬಿಗೆ ಇನ್ನೂ ಹೆಚ್ಚು ಹಣ ಒದಗಿಸಬೇಕು ಎಂದು ಹೇಳುತ್ತೇನೆ. ಇದಲ್ಲದೆ ಅವರಿಗೆ ಬೇಕಾಗುವ ಎಲ್ಲ ಉಪಕರಣಗಳನ್ನು ಒದಗಿಸಿಕೊಡಬೇಕಾದುದು ಅಗತ್ಯ.

ಇನ್ನೊಂದು ವಿಷಯ. ಹರಿಜನ ಗಿರಿಜನರಿಗಾಗಿ ಒಂದ ಆಶ್ರಮ, ಶಾಲೆ, ನಿರಾಶ್ರಿತರ ಸ್ಕೂಲು ಪ್ರಾರಂಭ ಮಾಡುವಾಗ್ಗೆ ಅಧಿಕಾರಿಗಳು ಬಂದು ತಮಗೆ ಅನುಕೂಲವೆಂದು ಕಂಡು ಬಂದ ಸ್ಥಳದಲ್ಲಿ ಪ್ರಾರಂಭ ಮಾಡುತ್ತಾರೆ. ಹೀಗೆ ಮಾಡದೆ ಎಲ್ಲಿ ಗಿರಿಜನರು ಹೆಚ್ಚಾಗಿ ತಂಡವಾಗಿ ಇರುತ್ತಾರೋ ಅಂಥ ಸ್ಥಳದಲ್ಲಿ ಪ್ರಾರಂಭಿಸಬೇಕು. ಅಂದರೆ ಅವರಿಗೆ ಅನುಕೂಲವಾಗುವುದು. ಇಲ್ಲದಿದ್ದರೆ ಅವರಿಗಾಗಿ ಇಷ್ಟು ಹಣ ಖರ್ಚು ಮಾಡುವುದು ಸಾರ್ಥಕವಾಗುವುದಿಲ್ಲ. ಯೋಗ್ಯ ಕೇಂದ್ರದಲ್ಲಿ ಅದು ಇರಬೇಕು. ಆದರೆ ಅನೇಕ ಕಡೆ ಹಾಗೆ ಇಟ್ಟಿಲ್ಲ. ಅದರಿಂದ ಬಹಳ ಅನಾನುಕೂಲವಾಗಿದೆ. ಆದುದರಿಂದ ಇದನ್ನು ತನಿಖೆ ಮಾಡಿಸಬೇಕು. ನಮ್ಮ ಜಿಲ್ಲೆಯಲ್ಲಿ ಅಗ್ರಿಕಲ್ಚರಲ್ ಕಾಲೋನಿ ಮಾಡಲಾಗಿದೆ. ಅಲ್ಲಿ 14 ಮನೆಗಳನ್ನು ಕಟ್ಟಿದೆ. ಬಿಳಿಗಿರಿರಂಗನ ಬೆಟ್ಟದ ಹತ್ತಿರ ಒಂದು ಮಾಡಲ್ ಫಾರ್ಮ್ ಮಾಡಿ ಇದನ್ನು ಎಲ್ಲರಿಗೂ ತೋರಿಸುತ್ತೀರಿ. ಈ 14 ಮನೆಗಳ ಪೈಕಿ 6 ಮನೆಗಳಲ್ಲಿ ಇರುವುದಕ್ಕೆ ಯಾರೂ ಬರಲಿಲ್ಲ. ಯಾಕೆಂದರೆ ಅವರಿಗೆ ಬೇಕಾದ ಅನುಕೂಲತೆ ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಭೂಮಿ ವ್ಯವಸಾಯ ಮಾಡಲು ಇಲ್ಲ. ಕೈಗಾರಿಕೆಗೆ ಬೇಕಾಗುವ ಬೆತ್ತದ ವಸ್ತು ಸಿಕ್ಕುವುದಿಲ್ಲ. ಇದನ್ನು ಪರ್ಯಾಲೋಚಿಸಬೇಕು ಮತ್ತು ಯೋಗ್ಯ ಸ್ಥಳದಲ್ಲಿ ಇವುಗಳನ್ನು ಇಟ್ಟರೆ ನಾವು ಖರ್ಚು ಮಾಡುವ ಹಣ ಉಪಯೋಗವಾಗಿ ಸಾರ್ಥಕವಾಗುತ್ತದೆ.

ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ನಮ್ಮ ಜಿಲ್ಲೆಯೊಳಗೆ ಕುಣಬಿ ಎಂಬ ಒಂದು ವರ್ಗ ಇದೆ. ಹಿಂದಕ್ಕೆ ಮದ್ರಾಸು ಸರಕಾರದಲ್ಲಿದ್ದಾಗ್ಗೆ ಅವರು ಷೆಡ್ಯೂಲ್ಡ್ ಕಾಸ್ಟ್ ಲಿಸ್ಟಿನಲ್ಲಿ ಇದ್ದರು. ಅವರು ನಿಜವಾಗಿಯೂ ಬಹಳ ಬ್ಯಾಕ್ ವರ್ಡ್ ಇದ್ದಾರೆ. ಅವರನ್ನು ಗಿರಿಜನರ ಲಿಸ್ಟಿನಲ್ಲಿ ಸೇರಿಸಿಕೊಳ್ಳಲು ಎಲ್ಲ ಅರ್ಹತೆ ಪಡೆದಿದ್ದಾರೆ. ಅವರನ್ನು ಷೆಡ್ಯೂಲ್ ಟ್ರೈಬ್ಸ್ ಲಿಸ್ಟಿನಲ್ಲಿ ಸೇರಿಸಬೇಕು. ಅದೇ ರೀತಿಯಾಗಿ ಹಾಲಕ್ಕಿ ಎಂಬ ಒಂದು ವರ್ಗ ಇದೆ. ಅವರು ಬಹಳ ಅನಾಗರೀಕರಾಗಿದ್ದಾರೆ, ಅವರು ನಿಕೃಷ್ಟ ಸ್ಥಿತಿಯಲ್ಲಿದ್ದಾರೆ. ಆದುದರಿಂದ ಅವರೂ ಸಹ ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸಲು ತಕ್ಕವರಾಗಿದ್ದಾರೆ. ಅವರನ್ನು ಷೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಸೇರಿಸುವುದು ಸೂಕ್ತ.

ಇನ್ನೊಂದು ವಿಷಯ ನಾವು ಪದೇ ಪದೇ ಹೇಳುತ್ತಲೇ ಇದ್ದೇವೆ. ಕಾಡಿನಲ್ಲಿರುವ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಹರಿಜನ ಗಿರಿಜನರಿಗೆ ವ್ಯವಸಾಯ ಮಾಡಲು ಕೊಡಬೇಕು. 99 ವರ್ಷ ಗೇಣಿ ಎಂದು ಮಾಡದೇ ಇದ್ದರೂ 60 ವರ್ಷಕ್ಕಾದರೂ ಮಾಡಿ ಭೂಮಿ ಕೊಡಬೇಕು. ಮಲೆನಾಡಿನಲ್ಲಿ ವ್ಯವಸಾಯಕ್ಕೆ ಭೂಮಿ ಕೊಟ್ಟರೆ ಫಾರೆಸ್ಟ್ ನಾಶವಾಗುವುದಿಲ್ಲ. ಕಾಡು ಇದ್ದೇ ಇರುತ್ತದೆ.

ಹರಿಜನ ಗಿರಿಜನರ ಸ್ಕೀಮುಗಳಲ್ಲಿ ಆಸಕ್ತಿ ಇಲ್ಲದೇ ಇರತಕ್ಕಂಥ ಅಧಿಕಾರಿಗಳನ್ನು ನೇಮಕ ಮಾಡಬಾರದು. ಆಸಕ್ತಿ ಇದ್ದವರನ್ನು ನೇಮಕಮಾಡಬೇಕು. ಅಂದರೆ ಇಂಥ ಸ್ಕೀಮು ಯಶಸ್ವಿಯಾಗುತ್ತದೆ. ಇದಲ್ಲದೆ ಗಿರಿಜನರ ಸ್ವಭಾವತಿಳಿದವರು ಅವರ ಭಾಷೆ ಮಾತನಾಡಿ ಅವರಲ್ಲಿದ್ದುಕೊಂಡು ಅವರ ಕುಂದುಕೊರತೆಗಳನ್ನೂ ಅವರಿಗೆ ಬೇಕಾಗುವ ಅನುಕೂಲತೆಗಳನ್ನೂ ತಿಳಿದುಕೊಳ್ಳುವಂಥ ಅಧಿಕಾರಿಗಳನ್ನು ಅಂದರೆ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಬೇಕಾದುದು ಅಗತ್ಯ. ಮೈಸೂರು, ಬೆಂಗಳೂರು ಕಡೆಯಿಂದ ಬರತಕ್ಕ ಅಧಿಕಾರಿಗಳಿಗೆ ಅವರ ಭಾಷೆ ತಿಳಿಯುವುದಿಲ್ಲ. ಅವರು ತುಳು ಭಾಷೆ ಮಾತನಾಡುತ್ತಾರೆ. ಅವರು ಮೊದಲೇ ಮೂಕ ಜನರಾಗಿದ್ದಾರೆ. ಆದುದರಿಂದ ಇಂಥ ಅಧಿಕಾರಿಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಬಹಳ ಅನನುಕೂಲವಾಗುವುದು. ಆದುದರಿಂದ ಅವರ ವಿಷಯದಲ್ಲಿ ಮನಸ್ಸು ಹಾಕಿ, ಅವರ ಭಾಷೆಯಲ್ಲಿ ಮಾತನಾಡತಕ್ಕ ಶಕ್ತಿ ಇರತಕ್ಕಂಥ ಮತ್ತು ಅವರ ಸ್ಕೀಂನಲ್ಲಿ ಶ್ರದ್ಧೆ ಆಸಕ್ತಿ ಇರುವವರನ್ನು ನೇಮಕ ಮಾಡಿದರೆ ಇಂಥ ಸ್ಕೀಂ ಯಶಸ್ವಿಯಾಗುತ್ತದೆ.

ನಮ್ಮ ಜಿಲ್ಲೆಯ ಕಾರ್ಕಳ ಮತ್ತು ಬೆಳ್ತಂಗಡಿ ವಿಭಾಗದಲ್ಲಿ ಷೆಡ್ಯೂಲ್ಡ್ ಟ್ರೈಬ್ ಇನ್‌ಸ್ಪೆಕ್ಟರ್ ನೇಮಕ ಮಾಡಬೇಕೆಂದು ಮಂಜೂರಾತಿ ಬಂದಿದೆ. ಆದರೂ ಕೂಡ ಇನ್ನೂ ವರೆಗೆ ನೇಮಕ ಮಾಡಿಲ್ಲ. ಕೂಡಲೆ ನೇಮಕ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರರು ಅವರು ಯೋಗ್ಯರಾಗಿದ್ದು ಕೆಲಸ ಮಾಡುವವರು ಆಗಿರಬೇಕು. ಬರೀ ವಿಜಿಟ್ ಕೊಟ್ಟು ಬರೆದುಕೊಂಡು ಹೋದರೆ ಸಾಲದು. ಅವರು ರಚನಾತ್ಮಕ ಕೆಲಸ ಮಾಡುವವರು ಆಗಿರಬೇಕು. ಇದಲ್ಲದೆ ಅವರು ಹಳ್ಳಿಗಳಿಗೆ ಹೋಗಿ ಗಿರಿಜನ ರೊಡನೆ ಒಡಗೂಡಿ ಇದ್ದು ಶ್ರದ್ಧೆಯಿಂದ ಕೆಲಸ ಮಾಡಿದರೆ ಈ ಯೋಜನೆ ಯಶಸ್ವಿಯಾಗುತ್ತದೆ. ಬರೀ ಸಂದರ್ಶನ ಮಾಡುವುದರಿಂದ ಏನೂ ಸಫಲವಾಗುವುದಿಲ್ಲ. ಇವರಿಗೆ ವಿದ್ಯಾಭ್ಯಾಸ ಸೌಕರ್ಯ ಒದಗಿಸಲು ಹಾಸ್ಟಲ್ಲುಗಳು ಬಹಳ ಕಡಿಮೆ ಇವೆ. ಇದುವರೆಗೆ ಅಷ್ಟು ಜನ ಬರುತ್ತಿರಲಿಲ್ಲ. ಇತ್ತೀಚೆಗೆ ಹೆಚ್ಚು ಗಿರಿಜನರು ದೊರೆಯುತ್ತಿದ್ದಾರೆ. ಇನ್ನು ಮುಂದೆ ಸಂಖ್ಯೆ ಏರುವ ಸಂದರ್ಭ ಇದೆ. ಆದುದರಿಂದ ಬರುವ ವರ್ಷ ಇವರಿಗಾಗಿ ಹೆಚ್ಚು ಹೆಚ್ಚಾಗಿ ಹಾಸ್ಟಲ್ ತೆರೆಯಬೇಕು ಎಂದು ಹೇಳುತ್ತೇನೆ.

1-30 P.M.

ಮತ್ತೆ ಈ ಶಾಖೆಯಲ್ಲಿ ಸಾಕಷ್ಟು ಪ್ರಚಾರವಿಲ್ಲ ಎಂದು ನಿನ್ನೆ ಹೇಳಿದ್ದೇನೆ. ಇದರಲ್ಲಿ ಗಿರಿಜನರಿಗೆ 800 ರೂಪಾಯಿ ಧರ್ಮಾರ್ಥವಾಗಿ ಕೊಡುತ್ತೇವೆ. ಹಾಗೆ ಶಿಕ್ಷಣಕ್ಕೆ ಕೊಡುತ್ತೇವೆಂದು ಹೇಳುತ್ತಾರೆ. ಅವರು ಇದರಲ್ಲಿ ಏನೋ ವೆಸ್ಟೆಡ್ ಇಂಟರೆಸ್ಟ್ ಇದೆ. ಹಿಡಿದುಕೊಂಡು ಹೋಗಿ ಮಿಲಿಟರಿಗೆ ಸೇರಿಸಲಿಕ್ಕೆ ಎಂದು ತಿಳಿದುಕೊಂಡಿರುವ ಪರಿಸ್ಥಿತಿ ಇದೆ, ಆದ್ದರಿಂದ ಎಷ್ಟೋ ಮಂದಿ ಮುಂದೆ ಬರುವುದಿಲ್ಲ. ಅವರ ಸ್ಥಿತಿಯನ್ನು ಇಂಪ್ರೂವ್ ಮಾಡಿಕೊಳ್ಳುವುದಕ್ಕೆ ಇದನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬರುವುದಿಲ್ಲ; ಈ ಇಲಾಖೆಯವರು ಅವರ ಸೇರನ್ನು ಕಸಿದುಕೊಳ್ಳುವುದಕ್ಕೆ ಮಾಡುವ ಉಪಾಯ ಎಂದು ಅವರು ಸಹಾಯವನ್ನು ತೆಗೆದುಕೊಳ್ಳುವುದಿಲ್ಲ. ಸಮಾಜದಲ್ಲಿ ಕಾರ್ಯಕರ್ತರು ಯಾರು ನಿಸ್ಪೃಹತೆಯಿಂದ, ನಿಷ್ಠೆಯಿಂದ ಕೂಡಿದವರಿರುತ್ತಾರೋ ಅಂಥವರನ್ನು ಈ ಇಲಾಖೆಗೆ ತೆಗೆದುಕೊಂಡು ಅವರ ಮೂಲಕ ಅವರಿಗೆ ಧನ ಸಹಾಯ ಮಾಡಬೇಕು. ಈ ಇಲಾಖೆಯಲ್ಲಿ ಈ ಗಿರಿಜನರಿಗೆ ನಿಜವಾದ ಬೆಂಬಲ ಕೊಟ್ಟು ಔದಾರ್ಯ ತೋರಿರುವವರನ್ನು ತೆಗೆದುಕೊಂಡಲ್ಲಿ ಅವರ ಅಭಿವೃದ್ಧಿ 10 ವರ್ಷದಲ್ಲಿ ಆಗುವುದು, 5 ವರ್ಷದಲ್ಲಿಯೇ ಆಗುತ್ತದೆ. ಆಗ ಅವರು ಮುಂದೆ ಬರುವುದಕ್ಕೆ ಸಾಧ್ಯ ಎಂದು ಹೇಳುತ್ತೇನೆ.

State Scheduled Tribes Advisory Committee ಎಂತ ಒಂದು ಸಲಹೆ ಸಮಿತಿ ಇದೆ. ಇದರಲ್ಲಿ ಗಿರಿಜನರ ಅಭಿವೃದ್ಧಿ ಕಮಿಟಿಯೂ ಸೇರಿರುವ ಕಾರಣ, ಇದು ವರ್ಷಕ್ಕೆ ನಾಲ್ಕು ಮೀಟಿಂಗಿಗೆ ಸೇರಬೇಕು. ಅದರಲ್ಲಿ ಮಾಡುವ ಪ್ರತಿ ಸಲಹೆ, ಸೂಚನೆಯನ್ನೂ ಕೂಡಲೆ ಕಾರ್ಯಗತ ಮಾಡಲಿಕ್ಕೆ ಪ್ರಯತ್ನಿಸಬೇಕು. ಈ ಕಮಿಟಿಯಲ್ಲಿ ಗಿರಿಜನರಿಗೆ ಹೆಚ್ಚು ಪ್ರಾಶಸ್ತ್ಯ ಕೊಡದೆ ಇತರರಿಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ನಾನು ಸೂಚಿಸಿರುವುದನ್ನು ಅವರು ಸಾಮಾನ್ಯವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಅದನ್ನು ಕಾರ್ಯಗತ ಮಾಡಿಲ್ಲವೆಂದು ನಾನು ಖೇದದಿಂದ ಹೇಳಬೇಕಾಗಿದೆ. ಸಂಬಂಧಪಟ್ಟವರಿಗೆ ಹೆಚ್ಚಿಗೆ ಎಲ್ಲೆಲ್ಲಿ ಪ್ರಾತಿನಿಧ್ಯ ಕೊಡಬೇಕೋ, ಅಲ್ಲಲ್ಲಿಗೆ ಕೊಟ್ಟು ಕೃತಕೃತ್ಯರನ್ನಾಗಿ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಈ Centrally sponsored scheme ನಲ್ಲಿ, Third-Five-Year Plan ನಲ್ಲಿ, ಕಳೆದ ವರ್ಷ ಶೆಡ್ಯೂಲ್ಡ್ ಟ್ರೈಬ್ಸಿಗೆ 3 ಲಕ್ಷ 32 ಸಾವಿರ ಕೊಟ್ಟಿದ್ದರು, ಈ ವರ್ಷ 6 ಲಕ್ಷ ಕೊಡಲಾಗಿದೆ, ಬಹಳ ಸಂತೋಷ. ಹಾಗೆಯೇ ಉಮೇನ್ ವೆಲ್‌ಫೇರ್ ಮತ್ತು ಹೆಲ್ತ್ ಸ್ಕೀಮುಗಳಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್‌ಗಳಿಗೆ 4 ಲಕ್ಷ ಹಣ, ಶೆಡ್ಯೂಲ್ಡ್ ಟ್ರೈಬ್ಸಿಗೆ 3,74,000 ರೂಪಾಯಿ ಒದಗಿಸಿಕೊಟ್ಟಿದ್ದಾರೆ. ಶೆಡ್ಯೂಲ್ಡ್ ಟ್ರೈಬ್ಸಿಗೆ ಇದು ಏನೂ ಸಾಲದು; ಅವರಿಗೆ 4 ಲಕ್ಷವಾದರೂ ಹಣ ಒದಗಿಸಿ ಈ ಕೆಲಸ ಆಗುವಂತೆ ಮಾಡಬೇಕು ಅನ್ನುವುದು ನನ್ನ ಇಚ್ಛೆ.

ಈ ಸ್ಟೇಟ್ ಗಜಿಟಿಯರ್, ಜಿಲ್ಲಾ ಗೆಜೆಟಿಯರುಗಳು ತಯಾರಾಗಿ, ಈವರೆಗೆ ಈ ಸಭೆಯ ಮುಂದೆ ಬರಲಿಲ್ಲ. ನಮಗೆ ಯಾರಿಗೂ ಪ್ರತಿಗಳು ಸಿಕ್ಕಲಿಲ್ಲ. ಜಿಲ್ಲಾ ಗೆಜೆಟಿಯರುಗಳನ್ನು ಬೇಗನೆ ತಯಾರಿಸಿ ಎಲ್ಲಾ ಎಂ. ಎಲ್. ಎ. ಗಳಿಗೂ ಒದಗಿಸುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ: ಅಂಕಿ ಸಂಖ್ಯೆಗಳನ್ನು ತಯಾರಿಸಿ ಬೆಳೆಗಳ ಅಂದಾಜು ಮಾಡುತ್ತೀರ; ಆ ಅಂದಾಜು ತುಂಬ ತಪ್ಪಾಗಿ, ಆಹಾರ ಧಾನ್ಯಗಳು ಇಷ್ಟು ಅವ್ಯವಸ್ಥೆಗೆ ಒಳಗಾಗಿದೆ. ಒಂದು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮೀಟಿಂಗಿಗೆ ಹೋದಾಗ 40 ಎಕರೆಯಲ್ಲಿ ತರಕಾರಿ ಬೆಳಸಲಾಗಿದೆ, 20 ಸೇರು ತರಕಾರಿ ಬೀಜ ಕೊಟ್ಟಿದ್ದೇವೆ ದು ಹೇಳಿದರು. ಲೆಕ್ಕದಂತೆ ಅಷ್ಟು ಬಿತ್ತಿದ್ದೇವೆಂದು ಹೇಳುತ್ತಾರೆ. ಆ ಲೆಕ್ಕದಂತೆ ಖಂಡಿತವಾಗಿಯೂ ಆಗುವುದಿಲ್ಲ. 20 ಸೇರು ಕೊಟ್ಟಿದ್ದರಲ್ಲಿ ತನ್ನ ಪದಾರ್ಥ ಮಾಡಲಿಕ್ಕೆ ಎಷ್ಟು ಸೇರನ್ನು ರೈತ ಉಪಯೋಗಿಸಿದ್ದು, ಎಷ್ಟು ಬೀಜದಲ್ಲಿ ಮೊಳಕೆ ಬರಲಿಲ್ಲ; ಎಷ್ಟಕ್ಕೆ ಗೆದ್ದಲು ಹಿಡಿಯಿತು, ಎಷ್ಟು ಉತ್ಪತ್ತಿ ಬರುತ್ತದೆ ಎಂದು ಹೇಳುವುದಕ್ಕಾಗು

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ವುದಿಲ್ಲ ಇದೇ ಪ್ರಕಾರ ಗೇರು ಬೀಜದ ಲೆಕ್ಕವೂ ಆಗಿದೆ. 10 ಎಕರೆಗೆ 10 ಟನ್ ಉತ್ಪತ್ತಿ ಬರುತ್ತದೆ ಎಂದು ಲೆಕ್ಕ ಹಾಕುತ್ತಾರೆ, 10 kg. ಸಹ ಬರುವುದಿಲ್ಲ. ಬೆಳೆ ಅಂತ ಸಂಖ್ಯೆಗಳನ್ನು ತಯಾರಿಸುವಾಗ ಬಹಳ ಗಮನವಿಟ್ಟು ತಯಾರಿಸಿದರೆ ಮಾತ್ರ ಉಪಯೋಗವಾಗುತ್ತದೆ.

ಫಾರೆಸ್ಟ್ ವಿಚಾರ ಹೇಳುವಾಗ, ಇಲಾಖೆಯವರು ಬಹಳ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆನ್ನುವುದನ್ನು ಒಪ್ಪಿಕೊಳ್ಳಬೇಕು. ಈ ಅಧಿಕಾರಿಗಳು ಬಹು ನಿಷ್ಠೆಯಿಂದ ಕೆಲಸ ಮಾಡುತ್ತಿರುವುದನ್ನು ನೋಡಿದರೆ ಸಂತೋಷವಾಗುತ್ತದೆ. ಇದರ ಜೊತೆಗೆ ನಮ್ಮ ಸೂಳ್ಯ, ಪುತ್ತೂರು, ಉಪ್ಪಿನಂಗಡಿ ರೇಂಜುಗಳಲ್ಲಿ ಲಕ್ಷಾಂತರ ರೂಪಾಯಿ ಉತ್ಪತ್ತಿ, ಅಧಿಕ ಉತ್ಪತ್ತಿ, 3-4 ವರ್ಷದಿಂದ ಬಂದಿದೆ. ಸೂಳ್ಯ ಪ್ರದೇಶದಲ್ಲಿ ಒಂದು ಉಡ್ ಪ್ರಿಸರ್ವೇಷನ್ ಪ್ಲಾಂಟ್ ಸೆಂಟರ್ ಮತ್ತು ಸಾಯಿಲ್ ಕೊಡುವುದೇ ಅಲ್ಲದೆ, ಒಂದು ಅರಣ್ಯ ಬಂಗಲೆಯನ್ನು ತೆಗೆಯುವುದು ಅಗತ್ಯ. ಸೂಳ್ಯದಲ್ಲಿ ಸಾವಿರಾರು ಎಕರೆ ರಬ್ಬರ್ ಪ್ಲಾಂಟೇಶನ್ ಆಗುವ ಪರಿಸ್ಥಿತಿ ಇದೆ. ಇಷ್ಟರೊಳಗೇ 1,200 ಎಕರೆವರೆಗೆ ರಬ್ಬರ್ ಪ್ಲಾಂಟೇಶನ್ ಆಗಿದೆ. ಆದಕಾರಣ ಅರಣ್ಯ ಸಂಪತ್ತನ್ನು ಹೆಚ್ಚುಗೊಳಿಸಲು ಫಾರೆಸ್ಟ್ ಬಂಗಲೆ, ಅಲ್ಲಿ ಬಹಳ ಅಗತ್ಯ ಎಂದು ಹೇಳುತ್ತೇನೆ.

ಇಷ್ಟು ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇನೆ. ಧನ್ಯವಾದಗಳು.

ಶ್ರೀಮತಿ ಚಂಪಾಬಾಯಿ ಭೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೆ, ಈ ಸೋಶಿಯಲ್ ವೆಲ್‌ಫೇರ್ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಸೂಚಿಸಬಯಸುತ್ತೇನೆ; ಹಾಗೂ ಕೆಲವು ಜನರಲ್ ಲೋಪದೋಷಗಳನ್ನು ಸಭೆಯ ಗಮನಕ್ಕೆ ತರಲು ಇಚ್ಛಿಪಡುತ್ತೇನೆ. ಅವುಗಳನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ.

ಸರ್ಕಾರದವರು ಸೋಷಿಯಲ್ ವೆಲ್‌ಫೇರ್ ಸಲುವಾಗಿ ಸಾಕಷ್ಟು ಹಣ ಕೊಡುತ್ತಾರೆ; ಪ್ರತಿಯೊಂದು ಸ್ಕೀಮಿನಲ್ಲಿಯೂ ಅಡಕ ಮಾಡಿಕೊಡುತ್ತಾರೆ. ಆದರೆ ಡೆವಲಪ್‌ಮೆಂಟ್ ಸ್ಕೀಮಿಗೆ ಕೊಟ್ಟ ಹಣದಲ್ಲಿ ನಾಲ್ಕನೆ ಒಂದು ಅಂಶ ಸೋಶಿಯಲ್ ವೆಲ್‌ಫೇರಿಗೆ ಮುಟ್ಟುವುದಿಲ್ಲ ಎಂದು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇದನ್ನು ಚೌಕಾಶಿ ಮಾಡಿ ಕಾರ್ಯರೂಪಕ್ಕೆ ತರಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ ದೇಶದ ಅಭಿವೃದ್ಧಿಯನ್ನು ಗಮನದಲ್ಲಿ ತೆಗೆದುಕೊಂಡು, ನಮ್ಮ ದೇಶದ ಮುಖಂಡರು ಪಂಚವಾರ್ಷಿಕ ಯೋಜನೆಗಳ ಮೂಲಕ ಎಲ್ಲ ವಿಧದಲ್ಲಿಯೂ ಜನರ ಅಭಿವೃದ್ಧಿಯನ್ನೂ ಮಾಡುತ್ತೇವೆ ಎಂದು ಹೇಳುತ್ತಾರೆ ಮತ್ತು ಪ್ರತಿ ವರ್ಷ ಈ ಸಭೆಯಲ್ಲಿ ಯೋಜನೆಗಳಿಗೆ ಹಣವನ್ನು ಮಂಜೂರು ಮಾಡುತ್ತೇವೆ. ಆದರೆ ಯೋಜನೆಗಳು ಬರವಣಿಗೆಯಲ್ಲಿ ಇರುವುದು ಒಂದು, ವಾಸ್ತವಿಕವಾಗಿ ನಡೆಯುವುದು ಒಂದು. ಇದಕ್ಕೆ ಕಾರಣವೇನೆಂದರೆ, ಜಿಲ್ಲಾ ಮಟ್ಟದ ಅಧಿಕಾರಿಗಳು ಯೋಜನೆಗಳಂತೆ ನಡೆಯದೆ, ತಮ್ಮ ಮನಸ್ಸಿಗೆ ಬಂದಂತೆ, ತಮ್ಮ ತಮ್ಮ ಅಭಿಪ್ರಾಯದಂತೆ ಯೋಜನೆಗಳನ್ನು ರೂಪಿಸುತ್ತಾರೆ, ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. ಈ ಅಧಿಕಾರಿಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳದೆ ಇರುವುದೆ ಇದಕ್ಕೆ ಕಾರಣ. ಇದಕ್ಕೆ ಉದಾಹರಣೆ ಕೊಡಬೇಕಾದರೆ ಬೇಕಾದಷ್ಟು ಇವೆ. ಹಿಂದುಳಿದ ಜನಾಂಗದವರಿಗೆ, ಅದರಲ್ಲಿಯೂ ಹರಿಜನರಿಗೆ ಎಲ್ಲಾ ಯೋಜನೆಗಳನ್ನೂ ಮಾಡುತ್ತೇವೆ—ತಾಲ್ಲೂಕು ಮಟ್ಟದಲ್ಲಿ ಅವರ ಜನಸಂಖ್ಯೆಗೆ ಅನುಗುಣವಾಗಿ ತಾಲ್ಲೂಕು ಬೋರ್ಡು ಬಜೆಟ್ಟಿನಲ್ಲಿ, ಮತ್ತು ಎನ್. ಇ. ಎಸ್. ಬಜೆಟ್ಟಿನಲ್ಲಿ ಯೋಜನೆಗಳನ್ನು ಹಾಕಿ, ಹರಿಜನರ ಅಭಿವೃದ್ಧಿಗೆ ಹಣವನ್ನು ಮಂಜೂರು ಮಾಡುತ್ತಾರೆ. ಮತ್ತು ಅವರಿಗೋಸ್ಕರವಾಗಿ ಕೊಡುತ್ತಾರೆ. ಇಷ್ಟೇ ಅಲ್ಲದೆ ಅವರ ಹಿತಸಾಧನೆಗೆ ಎಷ್ಟೋ ಕಾನೂನುಗಳನ್ನು ಮಾಡಿದ್ದೀರಿ. ಆದರೆ ಸಮಾಜ ಕಲ್ಯಾಣ ಖಾತೆಯಿಂದ ಆಗುತ್ತಿರುವ ಯೋಜನೆಗಳನ್ನು ಬಿಟ್ಟರೆ, ಮತ್ತಾವ ಖಾತೆಯಿಂದಲೂ ಇವರಿಗೆ ಪ್ರಯೋಜನವಾಗುತ್ತಿಲ್ಲವೆಂದು ನಾನು ಸರ್ಕಾರಕ್ಕೆ ಒತ್ತಾಯವಾಗಿ ತಿಳಿಸುತ್ತೇನೆ. ತಾಲ್ಲೂಕು ಬೋರ್ಡು ಮತ್ತು ಎನ್. ಇ. ಎಸ್. ಯೋಜನೆಗಳಲ್ಲಿ ಕೇವಲ 2 ಪರ್ಸೆಂಟು ಹಣ ಮಂಜೂರು ಮಾಡುತ್ತಿಲ್ಲ. ದಯೆಯಿಟ್ಟು ಇದನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯ. ಇದಕ್ಕಿಂತ ಅನ್ಯಾಯವು ಯಾವುದು ಬೇಕಾಗಿದೆ. ತಾಲ್ಲೂಕು ಬೋರ್ಡು ಫಂಡು, ಎನ್. ಇ. ಎಸ್. ಫಂಡು ಹರಿಜನರಲ್ಲದವರಿಗೆ ಮೀಸಲಾಗಿದೆಯೇ? ದಯೆಯಿಟ್ಟು ಈ ವಿಚಾರದಲ್ಲಿ ವಿಚಾರಿಸಿ ನೋಡಿರಿ. ನಾವು ಜನರ ಪ್ರತಿನಿಧಿಗಳು, ನಮಗೆ ಇದನ್ನು ಹೇಳುವ ಹಕ್ಕು ಇದೆ. ಹರಿಜನರಿಗಾಗಿ ಎಷ್ಟೋ ರೊಕ್ಕ ಕೊಡುತ್ತಿದ್ದಾರೆ, ಆದರೆ ಯಾವ ಕೆಲಸವೂ ಅವರಿಗೋಸ್ಕರ ಪೂರ್ತಿಯಾಗುತ್ತಾ ಇಲ್ಲ, ಬಜೆಟ್ಟಿನಲ್ಲಿ ಹಾಕಿದ ಹಣವನ್ನು, ಹಾಕಿದ ಉದ್ದೇಶಕ್ಕೇ ಉಪಯೋಗಿಸದೆ, ಹಣವನ್ನು ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ವರ್ಗಾಯಿಸುತ್ತಾ ಇರುತ್ತಾರೆ, ಬದಲಾಯಿಸುತ್ತಾರೆ. ಅದು ಎಲ್ಲಿ ಮಾಯವಾಗುತ್ತದೊ ಗೊತ್ತಾಗುವುದಿಲ್ಲ. ನಾವು ಚುನಾಯಿತರಾಗಿ ಬಂದಿದ್ದೇವೆ, ನಮಗೆ ಇಲ್ಲಿ ಕೇಳುವ ಹಕ್ಕಿದೆ.

ಹರಿಜನರ ಗತಿ ಕಾಮಣ್ಣನ ಗತಿ ಆದ ಹಾಗಿದೆ. ಹರಿಜನರಲ್ಲದವರು ಅಧಿಕಾರ ಸ್ಥಾನದಲ್ಲಿರುವುದರಿಂದ ಮಲತಾಯಿ ಧೋರಣೆ ತಾಳಿದ್ದಾರೆಂದು ಖಾತ್ರಿಯಾಗಿ ಹೇಳಬೇಕಾಗಿದೆ. ಸರ್ಕಾರದ ಕಡೆಯಿಂದ ಈ ತರಹ ಆಗಿದೆಯೆಂದು ಹೇಳುವುದಕ್ಕೆ ನಾನು ತಯಾರಿಲ್ಲ, ಸರ್ಕಾರದವರು ಸಾಕಷ್ಟು ಸ್ಕೀಮುಗಳನ್ನು ಮಾಡಿದ್ದಾರೆ, ಸಾಕಷ್ಟು ದುಡ್ಡು ಕೊಟ್ಟಿದ್ದಾರೆ. ಆದರೆ ಅಧಿಕಾರಿಗಳು ಅವುಗಳನ್ನು ಕಾರ್ಯರೂಪಕ್ಕೆ ತರುತ್ತಿಲ್ಲವೆಂದು ಹೇಳುತ್ತೇನೆ. ಅವರ ಮೇಲೆ ಯೋಗ್ಯ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ಶಾಸನದ ರೂಪಕ್ಕೆ ತಂದಿಲ್ಲ. ಆದಕಾರಣ ಈ ಸ್ಕೀಮುಗಳು ಯಶಸ್ವಿಯಾಗಿಲ್ಲ. ಹರಿಜನರಿಗಾಗಿ ದುಡ್ಡು ಕೊಟ್ಟದ್ದು ಕಾರ್ಯರೂಪಕ್ಕೆ ಬಂದಿಲ್ಲ, ಹಿಂದೆ ಮನೆ ಕಟ್ಟುವುದಕ್ಕೆ 400 ರೂಪಾಯಿ ಕೊಡುತ್ತಿದ್ದಿರಿ, ಅದನ್ನು ಏಕೆ ನಿಲ್ಲಿಸಿದಿರಿ ಎಂದು ಕೇಳಿದರೆ, ಎಜುಕೇಶನ್ನಿಗೆ ಕೊಡುತ್ತಿದ್ದೇವೆ ಅಂತ ಹೇಳುತ್ತಾರೆ. ತಾಲ್ಲೂಕಿಗೆ ಒಂದು ಹಾಸ್ಟಲ್ಲು ತೆರೆದಿದ್ದೀರ? 25 ಹುಡುಗರ ಜೊತೆಗೆ ಇನ್ನು 5 ಹುಡುಗರನ್ನು ಜಾಸ್ತಿ ತೆಗೆದುಕೊಳ್ಳುವುದಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ಅಂದರೆ ಏನೂ ಇಲ್ಲ. ಮನೆಗಾಗಿ ಕೊಡುತ್ತಿದ್ದ 400 ರೂಪಾಯಿ ಎಲ್ಲಿಗೆ ಹೋಯಿತು? ಇದನ್ನು ತಿಳಿದು ಮಹಾನಾಯಕರಾದ ಪಂಡಿತ ಜವಹರಲಾಲ್ ನೆಹರುರವರು ಹೇಳಿದ್ದಾರೆ. ನಾನು ಹೇಳಬೇಕಾಗಿಲ್ಲ. ನೀವು ಮಹಾತ್ಮ ಗಾಂಧಿಯವರ ಆತ್ಮಕ್ಕೆ ಶಾಂತಿ ಕೊಡಬೇಕಾದರೆ, ಹರಿಜನರಿಗೆ ಸ್ಕೀಮುಗಳನ್ನು ಮಾಡಿ, ಅವರನ್ನು ಉದ್ಧಾರಮಾಡಿ, ಅವರ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕು. ಈ ಹಿಂದುಳಿದ ಸಮಾಜದ ಕಲ್ಯಾಣವನ್ನು ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಯಶೋಧರಮ್ಮನವರನ್ನು ಕೇಳಿಕೊಳ್ಳುವುದೇನೆಂದರೆ ದುಡ್ಡು ಅನ್ಯಾಯವಾಗಿ ಹೋಗುತ್ತಿರುವುದನ್ನು ತಡೆಗಟ್ಟುವ ಪ್ರಯತ್ನ ಮಾಡುತ್ತಿರಬೇಕು; ಸರಕಾರದ್ದು ತಪ್ಪು ಎಂದು ಹೇಳಲಿಲ್ಲ. ದುಡ್ಡು ದುರುಪಯೋಗವಾಗುತ್ತಿದೆ ಅದಕ್ಕೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಸ್ಕೀಮುಗಳನ್ನು ಕೊಟ್ಟಿದ್ದೀರ, ಆದರೆ ಅವುಗಳ ಪ್ರಯೋಜನ ಹರಿಜನರಿಗೆ ಹೋಗಿ ಮುಟ್ಟುವುದಿಲ್ಲ. ಈ ಬಗ್ಗೆ ಯೋಗ್ಯ ವಿಚಾರವಮಾಡಬೇಕೆಂದು ಯಶೋಧರಮ್ಮನವರನ್ನು ಕೇಳಿಕೊಳ್ಳುತ್ತೇನೆ. ಕಲಿತವರಲ್ಲದವರಿಗೆ ಹಣ ಮಾತ್ರ ಕೊಡುತ್ತಾರೆ. ಯಶೋಧರಮ್ಮ ಅವರು ಸಂಸಾರ ಮಾಡುವುದಕ್ಕೆ ಬಲ್ಲರು, ಆದರೆ ಪ್ರಪಂಚದಲ್ಲಿ ಯಲ್ಲ ಬಲ್ಲರು. ಒಂದೇ ಸ್ಕೀಮು ಇಟ್ಟುಕೊಂಡು, ಹಣ ಖರ್ಚು ಮಾಡುವುದಕ್ಕೆ ಆಕೆಗೆ ಬರುವುದಿಲ್ಲ. ಅಂತ ತಿಳಿದವರು ಮಂಜೂರು ಮಾಡುತ್ತಿರುವಿರಿ. ಒಂದೇ ಸ್ಕೀಮು ಇಟ್ಟುಕೊಂಡು, ಆ ಒಂದೇ ಸ್ಕೀಮಿನಲ್ಲಿ ಹರಿಜನರ ಉದ್ಧಾರ ಮಾಡಿರಿ. ಹರಿಜನರ ಉದ್ಧಾರ ಮಾಡುವುದಕ್ಕೆ ಏನು ಕೆಲಸ ಮಾಡಿದ್ದೀರೆನ್ನುವುದನ್ನು ತೋರಿಸುವುದಕ್ಕಾಗುತ್ತದೆಯೇ? ಕೋ-ಆಪರೇಟಿವ್ ಸೊಸೈಟಿ ಬೆಳಸಿರಿ, ಅಗ್ರಿಕಲ್ಚರಲ್ ಕಾಲೋನಿಗಳಿಂದ ಇನ್ನು ಕೆಲಸ ನಡೆಸಿರಿ ಅಂತ ಹೇಳುತ್ತೀರೆ? ಅವು ಎಷ್ಟು ಕಾರ್ಯರೂಪಕ್ಕೆ ತಂದಿರುವಿರಿ? ಅಂಥ ವ್ಯವಸಾಯ ಮಾಡುವವರಿಗೆ ಏನು ಅನುಕೂಲ ಮಾಡಿರುವುದಿಲ್ಲ.

ಒಂದು ಪಂಪ್‌ಸೆಟ್ ಕೂಡ ಕೊಟ್ಟಿಲ್ಲ. ಅಗ್ರಿಕಲ್ಚರ್‌ನಲ್ಲಿ, ಎಜುಕೇಷನ್‌ನಲ್ಲಿ ಬೇಕಾದಷ್ಟು ಸೌಕರ್ಯಗಳನ್ನು ಮಾಡಿಕೊಟ್ಟಿದ್ದೇವೆ ಎಂದು ಹೇಳಬೇಡಿರಿ. ಆ ರೀತಿ ಹೇಳಿದ್ದೇ ಆದರೆ ಅದು ಅಪರಾಧವಾಗುತ್ತದೆ. ಸರಕಾರದವರು ಕೊಟ್ಟದ್ದು ನಿಜ ಇದ್ದರೂ ಅದು ಮೋಸಕ್ಕೆ ಬಲಿ ಆಗಲಿಕ್ಕೆ ಹತ್ತಿದೆ ಎಂದು ಬಹಳ ಸಂಕಟದಿಂದ ಹೇಳುತ್ತಾ ಇದ್ದೇನೆ. ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲದಂತೆ ಆಗಿದೆ. ಹೆಣ್ಣು ಮಕ್ಕಳಿಗೆ ಬೇಕಾದಷ್ಟು ಅನುಕೂಲ ಮಾಡಿಕೊಟ್ಟಿದ್ದೇವೆ ಎಂದು ಹೇಳಿ ನೀವು ಏನೂ ಮಾತನಾಡುವುದಿಲ್ಲ. ಆದರೆ ನಮ್ಮ ಪರಿಸ್ಥಿತಿ ಹಾಗಲ್ಲ ನಾವು ನಮ್ಮ ಭಾಗಕ್ಕೆ ಪುನಃ ಇಲ್ಲಿಂದ ಹೋದಾಗ ಅಲ್ಲಿ ನಮ್ಮನ್ನು ಜನರು ಪ್ರಶ್ನೆ ಮಾಡುತ್ತಾರೆ. ನಮಗೆ ಏನು ಅನುಕೂಲ ಮಾಡಿಕೊಟ್ಟಿದ್ದೀರಿ ಏಕೆ ನೀವು ಅಲ್ಲಿಗೆ ಹೋದದ್ದು ಎಂದು ಕೇಳುತ್ತಾರೆ. ಹರಿಜನರ ವಿಷಯದಲ್ಲಿ ಮಹಾತ್ಮಾ ಗಾಂಧಿಯವರು ಕೊಟ್ಟ ಸಂದೇಶವನ್ನು ನೆನಪು ಮಾಡಿಕೊಟ್ಟು ಅವರಿಗೆ ಹೇಗೆ ಅನ್ಯಾಯವಾಗುತ್ತಾ ಇದೆ ಎಂಬುದನ್ನು ಸರಕಾರದವರಿಗೆ ತಿಳಿಸುವುದಕ್ಕೆ ನಾನು ಈ ಸಮಯದಲ್ಲಿ ಮಾತನಾಡುತ್ತಾ ಇದ್ದೇನೆ. ಅವರಿಗೆ ನಾನಾ ರೀತಿಯಲ್ಲಿ ಅನ್ಯಾಯ ಆಗಲಿಕ್ಕೆ ಹತ್ತಿದೆ ಅದನ್ನು ಸರಿಪಡಿಸಲಿಕ್ಕೆ ಬೇಕೆಂದು ನಾನು ಬಹಳ ವಿನಯದಿಂದ ಸರಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ಭಾಗದಲ್ಲಿ ಒಂದು ಹಾಸ್ಟೆಲ್ ಕಟ್ಟಡ ಕಟ್ಟಿದ್ದಾರೆ, ಮೂರು ವರ್ಷ ಆಯಿತು, 85 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಆ ಹಾಸ್ಟೆಲಿನಲ್ಲಿ ಮಕ್ಕಳೇ ಇಲ್ಲ ಅದಕ್ಕೆ ಅಲ್ಲಿ ಮಕ್ಕಳನ್ನು ಇರುವ ವ್ಯವಸ್ಥೆ ಆಗಬೇಕು. ಹತ್ತು ತಾಲ್ಲೂಕುಗಳಲ್ಲಿ ಒಂದು ಅಂತಹ ಕಟ್ಟಡ ನಮ್ಮ ಹುಡುಗರಿಗೆ ಇಲ್ಲ, ಸರಕಾರಿ ಹಾಸ್ಟೆಲುಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ತೆಗೆದಿದ್ದಾರೆ. ಈ ವಿಷಯದಲ್ಲಿ ಖಾಸಗಿ ಸಂಸ್ಥೆಗಳೇ ಉತ್ತಮ ಸ್ಥಿತಿಯಲ್ಲಿವೆ ಎಂದು ನನಗೆ ಅನಿಸುತ್ತದೆ. ಹರಿಜನರ ವಿಚಾರದಲ್ಲಿ ನಮ್ಮ ಯೋಜನೆಗಳು ಬೇಕಾದಷ್ಟು ಕಡ್ಡಾಯವನ್ನೇರದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ನಮ್ಮ ಬಿ. ಡಿ. ಓ. ಗಳು, ಜಿಲ್ಲಾ ಪ್ರೆಸಿಡೆಂಟರುಗಳು ನಮಗೆ ಸಲ್ಲಬೇಕಾಗುವ ಜಿಲ್ಲಾ ಯೋಜನೆಗಳನ್ನು ಆಗದಂತೆ ಮಾಡಲು ಮೊದಲು ಮಾಡುತ್ತಿರು

(ಶ್ರೀಮತಿ ಚಂಪಾಬಾಯಿ ಬೋಗಲೆ)

ವುದನ್ನು ತುಂಬಾ ಕಳಕಳಿಯಿಂದ ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಬಹಳ ನಿಷ್ಠೆಯಿಂದ ತಮ್ಮಲ್ಲಿ ನಾನು ಹೇಳಿಕೊಳ್ಳುವುದೇನೆಂದರೆ ಬಡ್ಜೆಟ್‌ನಲ್ಲೇನೋ ಬೇಕಾದಷ್ಟು ಹಣವನ್ನು ಕೊಟಿದ್ದೀರಿ, ಸರಕಾರದವರು ಎಷ್ಟೇ ಒಳ್ಳೆಯ ಮನಸ್ಸಿನಿಂದ ಸಹಾಯ ಮಾಡಬೇಕೆಂದು ಯೋಜನೆ ಗಳನ್ನು ಹಾಕಿಕೊಂಡರೂ ಕೂಡ ಅವುಗಳಿಂದ ಆಗಬೇಕಾದ ಪ್ರಯೋಜನ ಮಾತ್ರ ನಮ್ಮ ಜನಾಂಗ ದವರಿಗೆ ಆಗದೇ ಹೋಗಿದೆ ಆದ್ದರಿಂದ ಒಂದನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಗಳಲ್ಲಿ, ಎನ್. ಇ. ಎಸ್. ಮತ್ತು ಸಿ ಡಿ. ಯೋಜನೆಗಳಲ್ಲಿ ಹರಿಜನರ ಅಭಿವೃದ್ಧಿಗೆ ಖರ್ಚು ಮಾಡಿರುವ ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟರೆ ನಾನು ಸರಕಾರವನ್ನು ತುಂಬಾ ಅಭಿನಂದಿಸುತ್ತೇನೆ. ನಮ್ಮ ಅಧಿಕಾರಿಗಳು ಮಾಡುತ್ತಿರುವ ಕೆಲಸ ನೋಡಿ ನನಗೆ ಬಹಳ ದುಃಖವಾಗುತ್ತಾ ಇದೆ. ಸರಕಾರದವರು ಎಷ್ಟೋ ಒಳ್ಳೆಯ ಮನಸ್ಸಿನಿಂದ ಹಣ ಕೊಟ್ಟು ಕೆಲಸ ಮಾಡಬೇಕೆಂದು ಹೇಳಿದರೂ ಕೂಡ ಸರಕಾರಿ ಅಧಿಕಾರಿಗಳು ಆ ಕೆಲಸವನ್ನು ಸರಿಯಾಗಿ ಮಾಡದಿದ್ದರೆ ಸರಕಾರದವರಿಗೆ ಯಶಸ್ಸು ಬರುವುದಿಲ್ಲ ಅವರು ಸರಿಯಾಗಿ ಕೆಲಸ ಮಾಡಿದ್ದೇ ಆದರೆ ಸರಕಾರದವರಿಗೆ ಒಳ್ಳೆಯ ಹೆಸರು ಕೀರ್ತಿ ಬರುತ್ತದೆ ಎಂದು ನಾನು ಹೇಳುತ್ತೇನೆ. ಇಲ್ಲದೇ ಹೋದರೆ ಸರಕಾರದವರಿಗೆ ಕೆಟ್ಟ ಹೆಸರು ಬರುತ್ತದೆ, ಇದಕ್ಕೆ ಸರಕಾರದವರು ಸಿಗಾ ಕೊಟ್ಟು ಎಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಅದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲಾ ಮಟ್ಟದ ಅಭಿವೃದ್ಧಿಯ ಅಧಿಕಾರಿಗಳಿಗೆ, ಹರಿಜನ ಅಭಿವೃದ್ಧಿಗಾಗಿ ಸಮಾಜ ಇಲಾಖೆಗೆ ಫಂಡಿನಿಂದತ್ತು ಆದುದರಿಂದ ಉಳಿದ ಎಲ್ಲಾ ಯೋಜನೆಗಳೂ ಹರಿಜನರಿಲ್ಲದವರಿಗೆ ಎಂಬುದೇ ಅವರ ಮನಸ್ಸಿನಲ್ಲಿ ಭದ್ರವಾಗಿ ನಿಂತು ಬಿಟ್ಟಿದೆ. ಯಾಕೆ ನಮ್ಮ ಜಿಲ್ಲಾಧಿಕಾರಿಗಳು ಹೀಗೆ ಹೇಳುತ್ತಾರೆ? ಇನ್ನುಳಿದವರ ಮಾತು ಏಕೆ? ಮತ್ತೊಂದು ಕಡೆ ಸಮಾಜ ಕಲ್ಯಾಣ ಇಲಾಖೆಗಳಿಂದ ನಡೆಯುತ್ತಿರುವ ಯೋಜನೆಗಳು, ಇತರ ಇಲಾಖೆ ಗಳಿಂದ ನಡೆಸುತ್ತಿರುವ ಯೋಜನೆಗಳು, ಜೊತೆಗೆ ಇವುಗಳನ್ನು ಕೊಡುತ್ತೇವೆಂದು ಅತಿ ಸ್ವಲ್ಪ ಹಣವನ್ನು ಮಂಜೂರು ಮಾಡುತ್ತೀರಿ. ವ್ಯವಸಾಯದ ಸಲುವಾಗಿ ಬಾವಿ ಇಲ್ಲ, ಕುಡಿಯುವ ನೀರಿನ ಬಾವಿ ಇಲ್ಲ. 1958ರಲ್ಲಿ ಕುಡಿಯುವ ನೀರಿನ ಬಾವಿ ಸಲುವಾಗಿ ಹಣ ಕೊಟ್ಟಿದ್ದೀರಿ, ಸುರಪುರಕ್ಕೆ ವಸತಿ ಪೂರ್ತಿ ಮಾಡಿಲ್ಲ ಕಟ್ಟಿಗೆಗಳನ್ನು ಹಂಚುಕೊಳ್ಳಲಿಕ್ಕೆ 10,000 ರೂಪಾಯಿ ಕೊಟ್ಟಿದ್ದರು. ಆದರೆ ತಾಸಿಲ್‌ದಾರರು ಮತ್ತು ಬಿ. ಡಿ. ಓ. ಗಳು ಖರೀದಿ ಮಾಡಿರುವರು, ಆದರೆ ಸುರಪುರಕ್ಕೆ ಇನ್ನು ಕಟ್ಟಿಗೆ ಇಲ್ಲ ಹೀಗೆ ಅನ್ಯಾಯ ಮಾಡಿದವರ ಮೇಲೆ ಏನು ಕ್ರಮ ತೆಗೆದು ಕೊಂಡಿರುವಿರಿ? ನಮ್ಮ ಕಡೆ ಯಾವ ಒಂದು ಕೆಲಸ ಕೂಡ ಪೂರೈಸಿಲ್ಲ. ಹರಿಜನರಿಗೆ ಇನ್ನೂ ಕೂಡ ಕುಡಿಯುವ ನೀರಿನ ಬಾವಿ ವ್ಯವಸ್ಥೆ ಆಗಿಲ್ಲ. ಹೀಗಾದರೆ ಹರಿಜನರ ಕಲ್ಯಾಣ ಯಾವ ರೀತಿಯಿಂದ ಆದರಂತೆ ಆಯಿತು ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ. ಆದ್ದರಿಂದ ಸರಕಾರದವರು ಇಂತ ಕಾರ್ಯಗಳನ್ನು ತಕ್ಷಣ ಕಾರ್ಯರೂಪಕ್ಕೆ ತಂದು ನಮ್ಮ ಜನಕ್ಕೆ ಮಾಡಿಕೊಡ ಬೇಕಾದ ಸೌಕರ್ಯಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಳೇ ಮೈಸೂರು, ಹೊಸ ಮೈಸೂರು ಎಂಬ ತರ್ಕ ಮಾಡಿಕೊಂಡು ಕೂಡದೇ, ನ್ಯಾಯವಾಗಿ ಆಗಬೇಕಾದ ಕೆಲಸ ಗಳನ್ನು ತಕ್ಷಣ ಕಾರ್ಯಗತ ಮಾಡಲು ಯಶೋಧರಮ್ಮನವರು ಮನಸ್ಸು ಮಾಡುತ್ತಾರೆ ಮತ್ತು ಅವರು ಅದರಲ್ಲಿ ಯಶಸ್ವಿಯಾಗುತ್ತಾರೆ ಎಂದು ಹೇಳಿ ಶ್ರೀಮಾನ್ ರಾಚಯ್ಯನವರು ಖಾತೆ ಸಲುವಾಗಿ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ. ಸರ್ಕಾರದಲ್ಲಿ ರೆವಿನ್ಯೂ ಫಾರೆಸ್ಟ್ ಅಂತ ಗೊತ್ತಿಲ್ಲದೆ ಅದನ್ನು ನಮ್ಮ ಹಿಡಕಲ್ ಡ್ಯಾಮಿಗೆ ಕೊಡದೆ ಜನರಿಗೆ ಸಹಕಾರ ಸಂಘಗಳ ಮೂಲಕ ಹರಿಜನರಿಗೆ ಕೊಡಬೇಕೆಂದು ಹೇಳುತ್ತೇನೆ. ಸರಕಾರದವರು ಹರಿಜನರಿಗೆ ಛಡ ಭೂಮಿ ಕೊಡಬೇಕೆಂದು ಕಾನೂನುಗಳನ್ನು ಮಾಡಿದ್ದಾರೆ. ಆದರೆ ಅಧಿಕಾರಿಗಳು ಅಂಥ ಭೂಮಿಯನ್ನು ಗೋಮಾಳ ಎಂದು ಮಾಡಿದ್ದಾರೆ ಅದಕ್ಕೆ ಸರಕಾರದವರು ಏನೂ ಕಾರ್ಯಕ್ರಮ ತೆಗೆದುಕೊಳ್ಳದಿರು ವುದನ್ನು ನೋಡಿ ನನಗೆ ಬಹಳ ಕೆಡಕೆನಿಸುತ್ತದೆ. ಆದರೆ ತಾವುಗಳು ರೆವಿನ್ಯೂ ಫಾರೆಸ್ಟ್ ಭೂಮಿಯನ್ನು ಹರಿಜನರಿಗೆ ಮತ್ತು ಹಿಡಕಲ್ ಡ್ಯಾಮುದಲ್ಲ ಮುಳಗಡೆಯಾಗುವ ಜನರಿಗೆ ಕೊಡ ಬೇಕೆಂದು ಹೇಳಿ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಇರುವ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಕೆಲವಾರು ಮಾತುಗಳನ್ನು ಹೇಳಲು ಬಯಸುತೇನೆ. ಫಾರೆಸ್ಟ್ ಇಲಾಖೆಯಲ್ಲಿ ಉತ್ಪನ್ನ ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಇರುವುದನ್ನು ನಾವು ಕಾಣ ಬಹುದು. ಆದಾಗ್ಯೂ ಕೂಡ 1962-63, 1963-64, 1964-65ರ ಉತ್ಪನ್ನವನ್ನು ನೋಡುವು ದಾದರೆ ಅಷ್ಟೊಂದು ಆಶಾದಾಯಕವಾಗಿ ಕಾಣುತ್ತಾ ಇಲ್ಲ. 1962-63ರಲ್ಲಿ 8 ಕೋಟಿ 79 ಲಕ್ಷ ದಿಂದ 1963-64ಕ್ಕೆ ರಿವೈಸ್ಡ್ ಎಸ್ಟಿಮೇಟ್ 9 ಕೋಟಿ 21 ಲಕ್ಷ ರೂಪಾಯಿಗೆ ಬಂದಿದೆ. ಈಗ 9

ಕೋಟಿ 18 ಲಕ್ಷ ಆಗಿದೆ ಎಂಬುದನ್ನು ಕಾಣಬಹುದು. ಸರಕಾರದವರು ಮತ್ತು ಇಲಾಖೆಯಲ್ಲಿ ಇರತಕ್ಕ ಕೆಲವು ಮುಖ್ಯ ಅಧಿಕಾರಿಗಳು ಹೆಚ್ಚು ನಿಗಾ ವಹಿಸಿ ಶ್ರದ್ಧೆಯಿಂದ ಕೆಲಸ ಮಾಡುವುದಾದರೆ ಇದರ ಉತ್ಪನ್ನ ಇನ್ನೂ ಹೆಚ್ಚಾಗಬಹುದು ಎಂದು ನನ್ನ ಒಂದು ಅಭಿಪ್ರಾಯ. ಕೆಲವೊಂದು ದೃಷ್ಟಾಂತಗಳನ್ನು ಹೇಳುವುದಾದರೆ ಈ ಇಲಾಖೆಯಲ್ಲಿ ಮರಮುಟ್ಟುಗಳ ಕಳ್ಳಸಾಗಾಣಿಕೆ ಹೆಚ್ಚುತ್ತಾ ಇದೆ ಎಂಬುದನ್ನು ಸರಕಾರದವರ ಗಮನಕ್ಕೆ ತರಲು ಬಯಸುತ್ತೇನೆ. ಸರಕಾರದವರೂ ಕೂಡ ಅದಕ್ಕೆ ನಿಗಾ ವಹಿಸಿ ಕೆಲವು ವ್ಯವಸ್ಥೆಗಳನ್ನು ಮಾಡಿದ್ದಾರೆ. ಆದಾಗ್ಯೂ ಕೂಡ ಕೆಲವು ಅಧಿಕಾರಿಗಳು ಅವರ ಕೈವಾಡದಿಂದ ಮಲೆನಾಡಿನ ಕೆಲವು ಭಾಗದಲ್ಲಿ ದೇಶಕ್ಕೂ ಅನುಕೂಲವಾಗುತ್ತಿಲ್ಲ, ಸರಕಾರದವರಿಗೂ ಅನುಕೂಲವಾಗುತ್ತಿಲ್ಲ ಆ ರೀತಿಯಲ್ಲಿ ನಡೆಯುತ್ತಾ ಇದೆ. ತಮಗೆ ಹೇಳುವುದಾದರೆ ತಮ್ಮ ಮೂಲಕ ಸರಕಾರದವರಿಗೆ ತಿಳಿಯಪಡಿಸುವುದಾದರೆ ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ಕೊಪ್ಪ ರೇಂಜ್ ಮೂಡಿಗೆರೆ ರೇಂಜ್‌ಗಳಲ್ಲಿ ಬಹುಭಾಗ ನಾಟಾ ಕಳ್ಳ ಸಾಗಾಣಿಕೆ ಜಾಸ್ತಿಯಾಗುತ್ತಾ ಇದೆ, ಇದಕ್ಕೆ ಅಲ್ಲಿರತಕ್ಕ ಡಿ ಎಫ್ ಓನೇ ಕಾರಣ ಎಂಬುದು ಜನ ಜನಿತವಾಗಿದೆ. ಈ ಒಂದು ದೃಷ್ಟಾಂತವನ್ನು ಸಭೆಯ ಗಮನಕ್ಕೆ, ಸರಕಾರದವರ ಗಮನಕ್ಕೆ ತಮ್ಮ ಮೂಲಕ ತರುವುದಾದರೆ ಚಿಕ್ಕಮಗಳೂರಿನಲ್ಲಿ ಇರುವ ಸರಕಾರಿ ಡಿಪೋಕ್ಕೆ ಮರ ಸಾಗಿಸತಕ್ಕ ಒಂದು ವ್ಯವಸ್ಥೆಯನ್ನು ಒಬ್ಬ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ. ಅವರಿಗೆ ಏನಾಗಿದೆ ಎಂದರೆ ಆತನು ತನ್ನ ಹಿಡುವಳಿ ಜಮೀನಿನಿಂದ ತನ್ನ ಸ್ವಂತಕ್ಕೆ ಮರ ಸಾಗಿಸಲು ಪರ್ಮಿಟ್ಟನ್ನು ಹೊಂದಿದ್ದಾರೆ. ಅಂತಹ ಒಬ್ಬ ಮನುಷ್ಯನಿಗೆ ಈ ರೀತಿ ಪರ್ಮಿಟ್ ಕೊಟ್ಟಿರುವುದರಿಂದ ಸರಕಾರಿ ಡಿಪೋಕ್ಕೆ ಸಾಗಿಸತಕ್ಕ ಮರಕ್ಕೂ ಆವನ ಸ್ವಂತ ಮರಕ್ಕೂ ಯಾವ ವ್ಯತ್ಯಾಸವೂ ಗೊತ್ತಾಗುವುದಿಲ್ಲ. ಇದನ್ನು ನಿಗಾವಹಿಸಿ ನೋಡಬೇಕು, ತನಿಖೆ ಮಾಡಬೇಕೆಂದು ಹೇಳುತ್ತೇನೆ. ಇಂಥ ದೃಷ್ಟಾಂತ ಬೇಕಾದಷ್ಟು ಹೇಳಬಹುದು. ಅಲ್ಲಿರುವ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಎಂಬುದು ಜನಜನಿತವಾಗಿದೆ. ಇದನ್ನು ತೀವ್ರವಾಗಿ ವಿಚಾರ ಮಾಡಬೇಕು.

ಸೇಲ್ಸ್‌ಟ್ಯಾಕ್ಸ್ ಬಿಟ್ಟರೆ ಹೆಚ್ಚಾಗಿ ಉತ್ಪತ್ತಿ ಕೊಡುವ ಇಲಾಖೆ ಅರಣ್ಯ ಇಲಾಖೆ, ಅದಕ್ಕೆ ಹೆಚ್ಚು ನಿಗಾ ಕೊಡಬೇಕಾದ್ದು ಸರ್ಕಾರದ ಕರ್ತವ್ಯ, ಕೊಡಬೇಕು. ಈಗಾಗಲೆ ಕೆಲವು ಕ್ರಮ ಕೈಗೊಂಡಿದ್ದಾರೆ. ಅದು ಬಹಳ ಪ್ರೋತ್ಸಾಹದಾಯಕ. ಆದರೂ ಕೂಡ ಇನ್ನೂ ಹೆಚ್ಚು ಶ್ರದ್ಧೆ ವಹಿಸಿದರೆ ಒಳ್ಳೆಯ ಹೆಸರು ಬರುತ್ತದೆಂದು ಭಾವಿಸುತ್ತೇನೆ. ವರ್ಕಿಂಗ್ ಪ್ಲಾನ್ ಪ್ರಕಾರ ಕೆಲಸ ಮಾಡುವುದು ಅಷ್ಟು ಸಮಂಜಸವಾಗಿಲ್ಲ. 63ನೆಯ ಇಸವಿ ಆಡಿಟ್ ರಿಪೋರ್ಟಿನ 22ನೆಯ ಪುಟ ಅರಣ್ಯಕ್ಕೆ ಸಂಬಂಧಪಟ್ಟ ಕ್ಲೈಮ್ದ್ 11ಲಕ್ಷ ರೂಪಾಯಿಗಳಲ್ಲಿ 6ಲಕ್ಷ 73ಸಾವಿರ ಉಳಿತಾಯವಾಗಿದೆ ಎಂದು ತಿಳಿಸುತ್ತದೆ. ಹಾಗಾಗುವುದು ಒಳ್ಳೆಯದಲ್ಲ. ಒದಗಿಸಿರುವ ಹಣದಲ್ಲಿ ಒಂದು ಕಾಸನ್ನು ಕೂಡ ಉಳಿಸುವುದು ಯೋಗ್ಯವಲ್ಲ. ಅದಕ್ಕೆ ಕೊಟ್ಟಿರುವ ಕಾರಣವನ್ನು ಕೂಡ ನೋಡಬೇಕು. ಹೀಗೆ ಉಳಿತಾಯ ಮಾಡುವುದು ಸರಿಯಲ್ಲ. ಅದಕ್ಕೆ ಕಾರಣರಾದ ಅಧಿಕಾರಿಯ ಮೇಲೆ ಕ್ರಮ ಕೈಕೊಳ್ಳಬೇಕು.

ಇನ್ನು ಸೀನಿಯಾರಿಟಿ ಲಿಸ್ಟ್ ವಿಷಯದಲ್ಲಿ ಅಧಿಕಾರಿಗಳಲ್ಲಿ ಅಸಮಧಾನವಾಗಿದೆ. ಅಸಿಸ್ಟೆಂಟ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಹುದ್ದೆಗೆ ಡೆಹರಾಡೂನಿನಲ್ಲಿ ಟ್ರೈನಿಂಗ್ ಆದವರಿಗೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಕೆಲಸ ಮಾಡುವವರಿಗೆ ಅವಕಾಶ ಕೊಡದೆ ಕ್ವಾಲಿಫಿಕೇಷನ್ ಇಲ್ಲದಿರುವವರಿಗೆ ಅವಕಾಶ ಕೊಟ್ಟು ಇನ್‌ಛಾರ್ಜ ಆಫೀಸರಾಗಿ ಅಂಥವರು ಅರ್ಹರಲ್ಲದಿರುವುದು ಕೆಲಸ ಮಾಡಲು ಅವಕಾಶ ಕೊಟ್ಟಿದ್ದಾರೆ. ಹೀಗೆ ಆರೇಳು ಜನರಿಗೆ ಅವಕಾಶ ಮಾಡಿರುವುದು ಸರಿಯಲ್ಲ. ಅವರ ಬಗ್ಗೆ ಯಾವುದೇ ಪ್ರಭಾವವಿದ್ದರೂ ಪ್ರಿಸ್ಕ್ರೈಬ್ಡ್ ಕ್ವಾಲಿಫಿಕೇಷನ್ನಿರುವವರಿಗೇ ಆ ಅವಕಾಶ ಮಾಡಿಕೊಡುವುದು ಸೂಕ್ತ ಎಂದು ಹೇಳುತ್ತೇನೆ. ಇನ್‌ಛಾರ್ಜ ಅರೇಂಜ್‌ಮೆಂಟ್ ವರ್ಷಗಟ್ಟಲೇ ಮಾಡುವುದು ಸರಿಯಲ್ಲ ಎಂದು ನಾಲ್ಕಾರು ಸಾರಿ ಗಮನಕ್ಕೆ ತರಲಾಗಿದೆ.

ಇನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆ ಬಗ್ಗೆ ಹೇಳುವುದಾದರೆ ಈ ವರ್ಷ ಕೊಟ್ಟಿರುವ 1 ಕೋಟಿ 87 ಲಕ್ಷ ರೂಪಾಯಿಗಳು ಸಾಲದೆಂಬುದು ನನ್ನ ಅಭಿಪ್ರಾಯ. ಏಕೆಂದರೆ ಈಗ ಸಾಧಾರಣವಾಗಿ ಇರುವ 35 ಲಕ್ಷ ಹರಿಜನರಿಗೆ ನಿರೀಕ್ಷೆ ಇರುವಷ್ಟು ಕೆಲಸವಾಗಿಲ್ಲ. ಬೀರಪ್ಪ ಕಮಿಟಿ ಎಂದು ಒಂದು ಮಾಡಿದ್ದರು. ಅದರ ವರದಿ ನೋಡುವುದಾದರೆ ಸರ್ವಿಸ್ ರೆಪ್ರಸೆಂಟೇಷನ್ ಕ್ಲಾಸ್ ಒಂದರ ಹುದ್ದೆಗಳಲ್ಲಿ ಶೇಕಡ 1.89 ಇದೆ; ಎರಡನೆ ದರ್ಜೆಯಲ್ಲಿ ಶೇಕಡ 3.36 ಇದೆ, 3ನೇ ದರ್ಜೆಯಲ್ಲಿ 6.38, 4ನೇ ದರ್ಜೆಯಲ್ಲಿ 11.96, ಒಟ್ಟು ಶೇಕಡ 7.71 ಹೀಗೆ ಶೇಕಡಾವಾರು 61ರ ಸೆನ್ಸಸ್ ಪ್ರಕಾರ ಇದೆ. ಹರಿಜನರಿಗೆ ಖಂಡಿತ ಇದು ಕಡಮೆ. ಹರಿಜನರ ಅಭಿವೃದ್ಧಿಗೆ ಸಮಾಜಕಲ್ಯಾಣ ಇಲಾಖೆಯಲ್ಲಿ ಸರಿಯಾದ ಕ್ರಮ ಕೈಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ ಸರ್ಕಾರದಲ್ಲಾಗಲಿ ಅಥವಾ ಕೆಲವು ಇಲಾಖೆಗಳಲ್ಲಾಗಲಿ ಹರಿಜನರಿಗೆ ದೊರೆಯಬೇಕಾದ ಸೌಲಭ್ಯ ಸರಿಯಾದ ಪ್ರಮಾಣದಲ್ಲಿ ದೊರೆತಿಲ್ಲ ಎಂದು ನಾನು ಭಾವಿಸಿದ್ದೇನೆ. ಏಕೆಂದರೆ

(ಶ್ರೀ ಕೆ. ಎಚ್. ರಂಗನಾಥ್)

ಒಂದು ರಿಸರ್ವೇಷನ್ ಮಾಡಿದಮೇಲೆ ಅದನ್ನು ಮೈನ್‌ಟೈನ್ ಮಾಡಬೇಕು. ಹಾಗೆ ಮಾಡದಿದ್ದರೆ ರಿಸರ್ವ್ ಮಾಡಬೇಕಾಗಿಲ್ಲ. ಅವರನ್ನು ಹಾಗೆಯೇ ಬಿಡುವುದು ಉತ್ತಮ. ಯಾವುದೇ ನೌಕರಿಯಾ ಗಲಿ ಕ್ಲಾಸ್ ಒನ್ ಅಧಿಕಾರಿಗಳನ್ನು ತೆಗೆದುಕೊಳ್ಳುವುದಾದರೆ ಸಂಸ್ಥಾನದಲ್ಲಿರುವ 18 ಇಲಾಖೆಗಳಲ್ಲಿ 9 ಇಲಾಖೆಗಳಲ್ಲಿ ಈ ದಿವಸ ಹರಿಜನರು ಯಾರೂ ಇಲ್ಲ. ಎಂಪ್ಲಾಯ್‌ಮೆಂಟ್ ಪೊಟೆನ್‌ಷಿಯಲ್ ಬರುವುದು ಮುಂದೆ ಎಂದು ಹೇಳುತ್ತಾರೆ. ಕ್ಲಾಸ್ ಎರಡರ ಪೋಸ್ಟುಗಳಲ್ಲಿ 393 ಖಾಲಿ ಇವೆ, ಮುಂದಿನ 3 ವರ್ಷಗಳಲ್ಲಿ 623 ಖಾಲಿಯಾಗುತ್ತವೆ. ಇಷ್ಟನ್ನು ಭರ್ತಿ ಮಾಡುವಾಗ ಪಿ ಎಸ್ ಸಿ ಮೂಲಕ ಕೆಲವು ಜನರಿಗೆ ಅವಕಾಶ ಸಿಕ್ಕುತ್ತದೆ. ಅರ್ಹತೆ ಇರುವ ಹರಿಜನರಿಗೆ ನೌಕರಿ ಕೊಟ್ಟು ಪರ್ಸೆಂಟೇಜ್ ಮೇನ್‌ಟೈನ್ ಮಾಡುವುದಕ್ಕೆ ಸಾಧ್ಯವಿದೆ. ಏಕೆ ಹಾಗೆ ಖಾಲಿ ಇಡುವುದು ? ಆ ಬಗ್ಗೆ ತಮ್ಮ ನೀತಿಯೇನು ! ಭಾಷಣಗಳಲ್ಲಿ ಹೇಳುವುದು ಹರಿಜನರಿಗೆ ಬಹಳ ಅನುಕೂಲಮಾಡು ತ್ತೇವೆಂದು. ಈಗ ಕ್ಲಾಸ್ ಎರಡರಲ್ಲಿ ಖಾಲಿ ಇರುವ ಕೆಲಸಗಳನ್ನು ಮತ್ತು ಕ್ಲಾಸ್ ಒಂದರಲ್ಲಿ ಖಾಲಿ ಇರುವ 180 ಸ್ಥಾನಗಳನ್ನು ಭರ್ತಿಮಾಡಿದರೆ ಹರಿಜನರಲ್ಲಿ ಅರ್ಹತೆ ಇರುವವರಿಗೆ ಕೆಲಸ ಸಿಕ್ಕು ತ್ತದೆ. ಕ್ಲಾಸ್ ಮೂರರಲ್ಲಿ 11 ಸಾವಿರ ಕೆಲಸಗಳು ಖಾಲಿ ಇವೆ ; ಭರ್ತಿಯಾಗಿಲ್ಲ. ಭರ್ತಿಮಾಡಿರು ವುದರಲ್ಲಿ ಹರಿಜನ ವಿದ್ಯಾವಂತ ತರುಣರಿಗೆ ಅವಕಾಶ ಸಿಕ್ಕಿಲ್ಲ. ಇದನ್ನು ಪರಿಶೀಲಿಸಬೇಕು. ಎಲ್ಲಾ ಇಲಾಖೆಗಳಲ್ಲೂ ಪ್ರತಿವರ್ಷ ಎಷ್ಟು ಹುದ್ದೆಗಳು ಖಾಲಿ ಬೀಳುವುವೋ ಅವನ್ನು ಸಕಾಲದಲ್ಲಿ ಭರ್ತಿಮಾಡಿ ಹರಿಜನರಿಗೆ ಕೊಟ್ಟಿರುವ ರಿಸರ್ವೇಷನ್ ಮೈನ್‌ಟೈನ್ ಮಾಡಲು ತಕ್ಕ ಕಾರ್ಯಕ್ರಮ ಕೈಕೊಳ್ಳ ಬೇಕು.

ಇನ್ನು ನಿಜಲಿಂಗಪ್ಪನವರ ಮಂತ್ರಿಮಂಡಲ ಸ್ಥಾಪನೆಯಾದಮೇಲೆ ಯಶೋಧರಮ್ಮನವರು ಸಮಾಜಕಲ್ಯಾಣ ಖಾತೆಯನ್ನು ವಹಿಸಿಕೊಂಡಮೇಲೆ ಹರಿಜನರಿಗೆ ಸಹಾಯವಾಗಬಹುದೆಂಬ ನಿರೀಕ್ಷೆ ಬಹಳವಾಗಿತ್ತು. ಇವತ್ತಿನ ದಿವಸ ಯಾವುದೋ ಕಾನೂನನ್ನು ಹರಿಜನರಿಗೆ ಅನ್ವಯಿಸಿ 17 ಜನ ಸೋಷಿಯಲ್ ವೆಲ್‌ಫೇರ್ ಆಫೀಸರುಗಳನ್ನು ಹೊರಕ್ಕೆ ಕಳುಹಿಸಿದ್ದಾರೆ. ಇದಕ್ಕೆ ಕಾನೂನು ಕಾರಣ. ಕಾನೂನು ಪ್ರಕಾರ ಅವರನ್ನಿಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದು ಮಂತ್ರಿಯವರು ಹೇಳಿದರು. ಆದರೆ ಜರೂರತಿಯ ದೃಷ್ಟಿಯಿಂದ ಕರುಣೆ ತೋರಿಸಬೇಕಾಗಿತ್ತು. 1962ನೆಯ ಇಸವಿಯಲ್ಲಿ ಈ 17 ಜನರನ್ನು ಎರಡನೆ ದರ್ಜೆಯ ಆಫೀಸರುಗಳನ್ನಾಗಿ ನೇಮಕ ಮಾಡುವಾಗ ಅವರಿಗೆ ತೊಂದರೆಯಾ ಗುತ್ತದೆಂದು ಗೊತ್ತಿದ್ದರೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಅಮೆಂಡ್ ಮಾಡಿ ನೇಮಕಮಾ ಡಬಹುದಾಗಿತ್ತು. ಮೂರನೆಯ ದರ್ಜೆಯ ನೌಕರಿಯನ್ನು ಎರಡನೆ ದರ್ಜೆಗೆ ಏರಿಸಿದ್ದರಿಂದ ಅವರು ಇರುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಎರಡನೆ ದರ್ಜೆ ಅಧಿಕಾರಿಗಳನ್ನು 6 ತಿಂಗಳು ಇಟ್ಟುಕೊಂಡಿರಬಹುದೆಂದು ಜಿ ಎ ಡಿ ನಲ್ಲಿ ಕಾನೂನಿದೆ. ಹಾಗಿರುವಾಗ 6 ತಿಂಗಳು ನೇಮಕಮಾ ಡಲು ಅವಕಾಶ ಮಾಡಬಹುದಾಗಿತ್ತು, ಮನೆಗೆ ಕಳುಹಿಸಬೇಕಾದ ಅವಶ್ಯಕತೆ ಇರಲಿಲ್ಲ. ಆರು ತಿಂಗಳು ಕೆಲಸ ಮಾಡುವುದರೊಳಗೆ ಪಿ ಎಸ್ ಸಿ ಅಡ್ವರ್ಟೈಜ್ ಮಾಡಿದ್ದರೆ ಅರ್ಹತೆ ಇರುವವರು ಬರುತ್ತಿದ್ದರು. ಒಂದೇ ಕೋಮಿನವರು ಯಾವ ಇಲಾಖೆಯಲ್ಲಿ ಇಂಥ ತೊಂದರೆಗೆ ಗುರಿಯಾಗಿದ್ದಾರೆ ? ನಾನು ಒಂದು ಪ್ರಶ್ನೆ ಕಳಿಸಿ 1-1-1961ಕ್ಕೆ ಹಿಂದೆ ನೇಮಕ ಮಾಡಿರುವ ಮೂರನೆಯ ದರ್ಜೆ ನೌಕರ ರಲ್ಲಿ ಹರಿಜನರಿಗೆಷ್ಟು ಪ್ರಾತಿನಿಧ್ಯ ದೊರೆತಿದೆ ಎಂದು ಕೇಳಿದ್ದಕ್ಕೆ ಆ ವಿವರ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಇದೆಲ್ಲಾ ತೋರಿಸುವುದು ಸರ್ಕಾರ ಉದ್ದೇಶಪೂರ್ವಕವಾಗಿ ಹರಿಜನರಿಗೆ ತೊಂದರೆ ಮಾಡಲು ಮನಸ್ಸು ಮಾಡಿದೆ ಎಂಬುದು. ಬರೀ 17 ಆಫೀಸರ ಪ್ರಶ್ನೆಯಲ್ಲ, ಇದು ಹರಿ ಜನರಿಗೆ ಆಗುತ್ತಿರುವ ತೊಂದರೆಯ ಪ್ರಶ್ನೆ. ಮೆರಿಟ್ ಸ್ಕಾಲರ್‌ಷಿಪ್ ಬೇರೆ ಹರಿಜನರಿಗೆ ಕೊಡುವು ದನ್ನು ಕಡಮೆ ಮಾಡಿದ್ದಾರೆ. ಇವತ್ತಿನ ದಿವಸ ಹೊಸದಾಗಿ ಯಾವ ಹಾಸ್ಟೆಲನ್ನೂ ಸ್ಥಾಪಿಸಿರುವು ದಿಲ್ಲ ; ಹೊಸ ಬಾವಿ ತೋಡಿಸಿರುವುದಿಲ್ಲ, ಅಕ್ವಿಜಿಷನ್ ರಿಕಾರ್ಡುಗಳು ವರ್ಷಗಟ್ಟಲೆ ಪೆಂಡಿಂಗ್ ಇವೆ.

2-00 P. M.

ನಿಮ್ಮ ನೀತಿ ಯಾವರೀತಿ ಹೋಗುತ್ತದೆ ಎಂದು ನಾನಿಲ್ಲಿ ಕೇಳುತ್ತೇನೆ. ಮನೆ ಕಟ್ಟಿಸುವ ವ್ಯವಸ್ಥೆಯಾಗಲೀ, ಇರತಕ್ಕ ಪ್ರದೇಶದಲ್ಲಿರುವ ಕಟ್ಟಡಗಳನ್ನು ಕಟ್ಟುವ ವ್ಯವಸ್ಥೆಯಾಗಲೀ, ಹೀಗೆ ಯಾವುದರಲ್ಲಾಗಲೀ ನೀತಿಯಿಲ್ಲ. ಈ ದೇಶದ ಜನ ನೋಡಿ ನಗಲಿ ಎಂದು ಮಾಡಿದ್ದೀರೇನು ?

ಇನ್ನೊಂದು ಮಾತನ್ನು ಇಲ್ಲಿ ತಮಗೆ ಹೇಳಬೇಕಾಗಿದೆ. ವೆಲ್‌ಫೇರ್ ಆಫೀಸರು ಎಂದು ಒಟ್ಟು ಹೆಣ್ಣು ಮಗಳನ್ನು ಸೆಕೆಂಡ್ ಗ್ರೇಡ್ ಆಫೀಸರಾಗಿ ನೇಮಕಮಾಡಿ ರೆಗ್ಯುಲರೈಸು ಮಾಡುವುದಕ್ಕಾ ಯಿತು. ಆದರೆ ಇದೇ ಇಲಾಖೆಯಲ್ಲಿದ್ದ 17 ಜನ ಆಫೀಸರುಗಳು ಮತ್ತು ಅವರ ವಿಚಾರವನ್ನು ಇಲ್ಲಿಯ ವರೆಗೂ ಸರಕಾರ ವಿಚಾರಿಸಬೇಕೆಂದು ಈ ಮಾನ್ಯ ಸಭೆಯಲ್ಲಿ ಅನೇಕ ಸದಸ್ಯರು ಮೂರು ಲಕ್ಷ

ಹಿಂದುಳಿದ ಜನಾಂಗದವರ ಪ್ರತಿನಿಧಿಗಳಾಗಿ ನೇಮಿಸಿದವರನ್ನು ಯಾವ ರೀತಿ ರೆಗ್ಯುಲರೈಸು ಮಾಡಿದಿರಿ ಮತ್ತು ಯಾವ ಯಾವ ರೀತಿಯ ಹಣ ನಿಗದಿ ಮಾಡಿರುವುದನ್ನು ಖರ್ಚು ಮಾಡಲಾಗಿದೆ ಎನ್ನುವ ಅಂಕಿ ಅಂಶಗಳನ್ನು ಮುಂದಿನ ವರ್ಷದಿಂದಲಾದರೂ ಈ ಸಭೆಗೆ ಒದಗಿಸಬೇಕು ಇದರ ಬಗ್ಗೆ ಯಾವ ಸ್ಕೀಮುಗಳನ್ನು ಮಾಡಲಾಗಿದೆ ಎನ್ನುವ ರಿಪೋರ್ಟನ್ನೂ ಪ್ರತಿ ವರ್ಷವೂ ಈ ಸಭೆಯ ಮುಂದಿಡಬೇಕು.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯಂತೆ ಈ ಸಭೆಯ ಮುಂದೆ ಇರತಕ್ಕ ಈ ಬೇಡಿಕೆಗಳನ್ನು ಅನುಮೋದಿಸುತ್ತಾ ಇಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಅರಣ್ಯ ಇಲಾಖೆಯ ಬಗ್ಗೆ ಮಾತನಾಡುತ್ತ ಒಂದು ಸೂಚನೆ ಮಾತ್ರ ಸರಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮ ಅರಣ್ಯ ಪ್ರದೇಶದಲ್ಲಿ ಅನೇಕ ಭೂಮಿಗಳು ಫಲವತ್ತಾಗಿದ್ದು ಮತ್ತು ಜನರ ವಸತಿಗೆ ಅನುಕೂಲವಾದ ಅನೇಕ ಗ್ರಾಮಗಳೂ ಇವೆ. ಇವುಗಳಿಗೆಲ್ಲಾ ರಸ್ತೆ ವಗೈರೆಗಳಿಲ್ಲದೆ ಹಾಳಾಗಿ ಈಗ ಬೇಚರಾಕ್ ಗ್ರಾಮಗಳಾಗಿವೆ. ಇಂತಹ ಪ್ರದೇಶಗಳಲ್ಲಿ ಸಂಚಾರ ಮಾರ್ಗಗಳು ಆಗಬೇಕಾಗಿವೆ. ಅಲ್ಲದೆ ಇಂತಹ ಪ್ರದೇಶಗಳನ್ನು ಕಾಲೊನಿಗಳಿಗೋಸ್ಕರ, ವ್ಯವಸಾಯಕ್ಕೋಸ್ಕರ ಯೋಗ್ಯವಾದ ಪ್ರದೇಶಗಳನ್ನು ಕೊಟ್ಟು ಅದನ್ನು ಕೊಟ್ಟ ಮೇಲೆ ಅವರಿಗೆ ಬೇಕಾಗುವ ದನ, ಕೋಳಿ ಇತ್ಯಾದಿಗಳನ್ನು ಕೊಟ್ಟು ಸಹಾಯ ಮಾಡಬೇಕು. ಈಗ ಇಂತಹ ಎಷ್ಟೋ ಭೂಮಿ ಬಂಜರಾಗಿ ಹಾಳಾಗುತ್ತಿವೆ. ಈ ಸಭೆಯಲ್ಲಿರುವ ಸದಸ್ಯರು ಅರಣ್ಯಗಳ ಅಭಿವೃದ್ಧಿಗಾಗಿ ಏನು ಮಾಡಬೇಕು, ಏನು ಸ್ಕೀಮುಗಳನ್ನೂ ಮಾಡಬೇಕು, ಆ ಸ್ಕೀಮುಗಳ ಬಗ್ಗೆ ಏನು ಟೀಕೆಗಳು ಬರುತ್ತವೋ ಅದನ್ನು ಅಳವಡಿಸಿಕೊಂಡು ಎಲ್ಲ ಭಾಗಕ್ಕೂ ಮಾರ್ಗಗಳು ಹಾಗೂ ಜನರ ವಸತಿಗೆ ಬೇಕಾಗುವ ಅನುಕೂಲಗಳನ್ನೂ ಕೊಡುವುದರ ಕಡೆಗೆ ಪ್ರಾಶಸ್ತ್ಯ ಕೊಟ್ಟರೆ ಆಗ ಈ ಜನಕ್ಕೇನಾದರೂ ಅನುಕೂಲವಾಗುತ್ತದೆ. ಈ ವಿಚಾರಗಳನ್ನೆಲ್ಲಾ ತೆಗೆದುಕೊಂಡು ವಿಚಾರಾರ್ಹವಾದ ಅನೇಕ ಪಾಂಚವಾರ್ಷಿಕ ಯೋಜನೆಗಳಲ್ಲಿ ಅಳವಡಿಸಿಕೊಂಡು ಮಾಡಲು ಮೊದಲಿಂದಲೂ ಹೊರಟಿಲ್ಲ. ಯೋಜನೆಗಳೇನೋ ಆಗಿವೆ. ಅಲ್ಲಿನ ಸ್ಥಳೀಯ ವಿದ್ಯಮಾನಗಳನ್ನು ಮರೆತು ಸ್ಥಳೀಯ ಕಷ್ಟ ನಷ್ಟಗಳೇನು, ಅವುಗಳನ್ನೆಲ್ಲಾ ತಿಳಿದು ಅಳವಡಿಸಿಕೊಂಡು ಯೋಜನೆಗಳಲ್ಲಿ ಏನು ಮಾಡಿದ್ದೀರಿ ಎನ್ನುವುದಕ್ಕೆ ನಾನು ಒಂದೆರಡು ಉದಾಹರಣೆಗಳನ್ನು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಪ್ರತಿ ಒಂದು ಹಳ್ಳಿಯಲ್ಲಿ ಕುಡಿಯುವ ನೀರಿನ ಬಾವಿ ತೊಡಬೇಕೆಂದು ನಮ್ಮ ಯೋಜನೆಗಳಲ್ಲಿದೆ. ಕುಡಿಯುವ ನೀರಿನ ಬಾವಿ ಅರ್ಧದಷ್ಟು ಸ್ಥಳೀಯ ಸಂಸ್ಥೆಗಳು, ಕಾಲುಭಾಗ ಸರಕಾರ ಮತ್ತು ಕಾಲುಭಾಗ ಅಲ್ಲಿರುವ ಜನ ಕೊಡಬೇಕೆಂದು ಇದೆ. ಪ್ರತಿ ವರ್ಷವೂ ಒಂದು ಬಾವಿಗಾಗಿ ಒಂದು ಒಂದೂವರೆ ಸಾವಿರ ಎಂದು ಸಾಲ ಕೊಡುತ್ತಾರೆ. ಸಾಲ ಕೊಡುವಾಗ ಅವನ ಸ್ಥಿತಿಗತಿಗಳೇನೂ ನೋಡಿ ಕೊಡದೇ ಇದ್ದರೆ ಬಡವರಾಗಿರುವವರು ಕುಡಿಯುವ ಬಾವಿ ಪಡೆಯುವುದಾದರೂ ಹೇಗೆ? ಒಂದು ಕುಡಿಯುವ ಬಾವಿಗಾಗಿ ಒಂದು ಸಾವಿರ ರೂಪಾಯಿಗಳ ಅಂದಾಜು ಇದ್ದರೆ ಅದರಲ್ಲಿ 250 ರೂಪಾಯಿಗಳಷ್ಟಾದರೂ ಯಾರು ಬಾವಿ ಬೇಕೆನ್ನುತ್ತಾರೋ ಅವರು ಕೊಟ್ಟರೆ ಸಾಲ ಸಿಗುತ್ತೆ. ಮತ್ತು ಕಾಲುಭಾಗದಷ್ಟು ಬಾವಿಯನ್ನು ಎರಡು ಮಟ್ಟದಷ್ಟು ತೆಗೆಯಲು ಸಹಾಯ ಮಾಡಬೇಕು. ಕೇಂದ್ರ ಸರಕಾರದವರು ಕೂಡ ಎಲ್ಲ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ಮಾಡುವಾಗ ಇಂತಹ ಯೋಜನೆಯಂತೆ ಬಾವಿ ತೆಗೆದುಕೊಳ್ಳಲಿ ಎಂದು ಮಾಡಿದ್ದಾರೆ. ಸಾಲವೆಂದು ಕೊಡುವ ಯೋಜನೆಯೇನೋ ಒಳ್ಳೆಯದು. ಆದರೆ ಜನಕ್ಕೆ ಯಾವ ರೀತಿ ಅವನ ಸ್ಥಿತಿಗತಿಗನುಸಾರವಾಗಿ ಕೊಡುತ್ತಾರೆಯೇ ಎಂದರೆ ಹಾಗೇನೂ ಮಾಡಿ ಕೊಡುತ್ತಿಲ್ಲ. ಕುಡಿಯುವ ನೀರಿನ ಬಾವಿ ಎಂದರೇನೋ ಒಂದು ಮನೆಯಲ್ಲಿರುವವರು ಅಥವಾ ನಾಲ್ಕು ಮನೆಯಲ್ಲಿರುವವರು ಒಂದು ಮಟ್ಟದಷ್ಟು ತೆಗೆಯಲಿ ಎಂದು ಜನರನ್ನು ಕರೆದರೆ local contribution is not forthcoming ಎಂದು ಅಲ್ಲಿರುವ ಅಧಿಕಾರಿಗಳು ಸರಕಾರಕ್ಕೆ ಬರೆದು ವರದಿ ಕಳುಹಿಸುತ್ತಾರೆ. ಇದರಿಂದ ಆಯಾ ತಾಲ್ಲೂಕಿನಲ್ಲಿರುವ ಯೋಜನೆ ನಾಶವಾಗಿ ಹೋಗುತ್ತದೆ. ಆದುದರಿಂದ ಯೋಜನೆಯನ್ನು ಮಾಡುವಾಗ ನಮ್ಮ ಸ್ಥಳೀಯ ಪ್ರದೇಶಗಳಲ್ಲಿ ಯೋಜನೆಗಳನ್ನು ಇಂಪ್ಲಿಮೆಂಟು ಮಾಡುತ್ತಾರೆಯೇ ಮತ್ತು ಅದರ ನಡವಳಿಕೆಗಳು ಕಾರ್ಯಗತವಾಗುತ್ತಿವೆಯೇ ಎನ್ನುವುದನ್ನೆಲ್ಲಾ ಪೂರ್ಣವಾಗಿ ನೆರವೇರುವಂತೆ ಮಾಡಿದರೆ ಆಗ ನಾವು ಯೋಜನೆ ಮಾಡಿದುದಕ್ಕೆ ತಕ್ಕ ಪ್ರತಿಫಲ ಸಿಗುತ್ತದೆ.

ಇನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಹಳೆಯ ಮೈಸೂರಿನಲ್ಲಿ ಈ ಇಲಾಖೆಯೇ ಇರಲಿಲ್ಲ. 1945ನೇ ಇಸವಿಯಿಂದ ಮತ್ತು ಅದಕ್ಕೂ ಮುಂಚೆ ಆಗಿನ ದಿವಾನರಾದ ಶ್ರೀಮಾನ್ ಎನ್. ಮಾಧವರಾವ್‌ರವರು ಸಂಸ್ಥಾನದಲ್ಲೆಲ್ಲಾ ಇರುವ ಹಿಂದುಳಿದ ವರ್ಗ ದೇಶದಲ್ಲಿ ಐದನೇ ಒಂದು ಭಾಗದಷ್ಟು ಜನರಿದ್ದಾರೆ. ಅವರ ಕಷ್ಟ ನಷ್ಟ

(ಶ್ರೀ ಜಿ. ದುಗ್ಗಪ್ಪ)

ಗಳೇನು ? ಅವರ ತೊಂದರೆಗಳೇನು ? ಎನ್ನುವುದರ ಬಗ್ಗೆ ಒಂದು ರಿಪೋರ್ಟು ಅಂಕಿ ಅಂಶಗಳು ಬೇಕೆಂದು ಮಾಡಿದ್ದರು. ಅದರಂತೆ ಕೆಲಸಗಳು ನಿಜವಾಗಿ ಬೇಗನೆ ಕಾರ್ಯಗತವಾಗಲು ಅವಕಾಶ ವಾಗುತ್ತಿತ್ತು. ಆಗಲೂ ಕೂಡ ಒಂದು ಕಮಿಷನರ್ ಎನ್ನುವ ಬುದ್ಧಿವಂತರಾದ ತರುಣರಾದ ಅಧಿ ಕಾರಿಗಳು ಸರಕಾರಿ ನೌಕರರು ಮತ್ತು ಈ ಸಭೆಯಿಂದ ಆರಿಸತಕ್ಕ ಒಬ್ಬರು ಪ್ರತಿನಿಧಿಗಳು ಕಂದಾಯ ಶಾಖೆಯ ಅಧಿಕಾರಿಗಳು ನಮ್ಮ ಜನಗಳ ಕುಂದುಕೊರತೆಗಳನ್ನು ತಿಳಿದುಕೊಂಡು ರಿಪೋರ್ಟನ್ನು ತರಿಸಿಕೊಳ್ಳುತ್ತಿದ್ದರು. ಅದರಂತೆ ಯಾವ ಯಾವ ಸೌಕರ್ಯಗಳು ಬೇಕೋ ಅದನ್ನು ನೋಡಿಕೊಂಡು ಕೊಡುತ್ತಾ ಬಂದರು. ನಮ್ಮ ಆಗಿನ ಸರಕಾರದವರು ಆಗ ಶ್ರೀಮಾನ್ ತಿಪ್ಪೆ ರುದ್ರಯ್ಯ ಎಂಬುವರನ್ನು ಒಬ್ಬ ಕಮಿಷನರನ್ನಾಗಿ ಮಾಡಿದ್ದರು. ಆಗ ರೆವಿನ್ಯೂ ಕಮಿಷನರೆನ್ನು ವರೇ ಅಭಿವೃದ್ಧಿ ಕಮಿಷನರಾಗಿದ್ದರು ಮತ್ತು ಅದರಿಂದಲೇ ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬು ಗಳಿಗೂ ಗಮನ ಕೊಡಬೇಕು ಇಂತಹ ಜವಾಬ್ದಾರಿಯುತವಾದ ಆಫೀಸರುಗಳನ್ನು ನೇಮಿಸಿದ್ದರು. ಅವರು ಈ ಕೆಲಸಗಳನ್ನೆಲ್ಲಾ ಮನಃಪೂರ್ವಕವಾಗಿ ಕೆಲಸ ಮಾಡುತ್ತಿದ್ದರು ಮತ್ತು ಎಲ್ಲ ಅಭಿವೃದ್ಧಿ ಕೆಲಸಗಳೂ ಬಹಳ ಸೊಗಸಾಗಿ ನಡೆಯುತ್ತಿದ್ದವು. ಬರಬರುತ್ತಾ ಈಗ ಏನಾಗಿಬಿಟ್ಟಿದೆ ಎಂದರೆ ಈ ಇಲಾಖೆಯನ್ನೇ ಮರೆತುಬಿಟ್ಟರು ಎಂದು ಸಮಾಜ ಅಭಿವೃದ್ಧಿ ಇಲಾಖೆ ಎಂದೀಗ ಮಾಡಿದರೆಂದು ನನಗನಿಸುತ್ತದೆ. ಏನು ಏನೋ ಮಾಡುತ್ತಿರುವ ಹಾಗೆ ಕಾಣುತ್ತದೆ ಮತ್ತು ಕೆಲಸ ಮಾಡಲು ಮನಸ್ಸೂ ಇದೆ. ಯಾವುದೇ ವರ್ಗದವರಾದರೂ ಹಿಂದುಳಿದವರ ಕಲ್ಯಾಣವಾಗಬೇಕು ಮತ್ತು ಅದಕ್ಕಾಗಿ ಯಾವ ಯಾವ ದಾರಿ ಪ್ರಾರಂಭ ಮಾಡಬೇಕು ಅದಕ್ಕಾಗಿ ತಡಕಾಡುವುದೂ ಸರಿಯಲ್ಲ. ಕೆಲವು ಸಂದರ್ಭಗಳಲ್ಲಿ ಸಿಗುತ್ತವೆ. ಕೆಲವು ಸಂದರ್ಭಗಳಲ್ಲಿ ಸಿಗುವುದಿಲ್ಲ. ಈ ಹಿಂದೆ ಸರಕಾರ ದವರು Economy and Resource A. G. R. Committee ಎನ್ನುವ ಒಂದು ವರದಿ ನಮಗೆ ಬಂದಿದೆ ಅದರಲ್ಲಿ ಬಹು ಚೆನ್ನಾಗಿ ಸಮಾಜ ಕಲ್ಯಾಣದ ಇಲಾಖೆಯಲ್ಲಿ ಸೇವೆ ಯಾರು ಮಾಡಬೇಕು ಮತ್ತು ಸರಕಾರದ ಕಾರ್ಯದಲ್ಲಿ ಸೇವೆ ಮಾಡಲು ಯಾವ ಏಜನ್ಸಿ ಇದ್ದರೆ, ಕೆಲಸಗಳು ಸಲೀಸಾಗಿ ಆಗುತ್ತವೆ ಅದರಂತೆ ಸಮಾಜ ಕಲ್ಯಾಣ ಶಾಖೆಯ ಕೆಲಸಗಳನ್ನು ಮಾಡಬಹುದು ಎನ್ನುವ ಸಲಹೆ ಗಳನ್ನು ಈ ವರದಿಯಲ್ಲಿ ತಿಳಿಸಿದ್ದಾರೆ. ಈಗ ಅನೇಕ ಊರುಗಳಲ್ಲಿರುವ ಜನರ ಸ್ಟ್ಯಾಂಡರ್ಡೇನು ? ಅಲ್ಲಿನ ರೀತಿ ನೀತಿಗಳೇನು ? ಎನ್ನುವುದಕ್ಕೆ ಕೇಂದ್ರ ಸರಕಾರದ ಮನ್ನಣೆಯನ್ನು ಪಡೆದ, ಸರಿಯಾದ ಒಂದು ವ್ಯವಸ್ಥೆ ಪಡೆದಂತೆ ಕಾರ್ಯವನ್ನು ನಿರ್ವಹಿಸಿಕೊಂಡು ಮಾಡುತ್ತಿದ್ದಾರೆ. ಈಗ ಸರಕಾರ ಕೂಡ ಈ ಕೆಲಸವನ್ನು ಅಂತಹ ಸಂಸ್ಥೆಗೇ ವಹಿಸಿಬಿಟ್ಟರೆ ಒಳ್ಳೆಯದು, ಎಂದು ಯೋಚನೆ ಮಾಡು ತ್ತಿದ್ದಾರೆಂದು ತೋರುತ್ತೆ. ಹಾಗೆ ಅವರಿಗೇ ವಹಿಸಿಬಿಟ್ಟರೆ ಈ ರಾಜ್ಯದಲ್ಲಿರುವ ಷೆಡ್ಯೂಲು ಕ್ಯಾಸ್ಟು ಹಾಗೂ ಟ್ರೈಬ್ಸ್‌ಗಳವರ ಗತಿ ಏನು ಎಂದುಕೊಳ್ಳಬಹುದು. ವಿದ್ಯಾ ಇಲಾಖೆಗೆ ಸಂಬಂಧಪಟ್ಟ ವ್ಯವಸ್ಥೆಗಳನ್ನೆಲ್ಲಾ ವಿದ್ಯಾ ಇಲಾಖೆಗೆ ಕೊಡಿ. ಇದಕ್ಕಾಗಿ ತಾವೀಗ ಒಂದು ಪ್ರತ್ಯೇಕ ಶಾಖೆ ಇಟ್ಟುಕೊಂಡು ಪ್ರತ್ಯೇಕವಾದ ಖರ್ಚನ್ನು ಹಿಂದುಳಿದವರಿಗೋಸ್ಕರ ಅವರ ಕಷ್ಟಗಳಿಗೋಸ್ಕರ ದೀನ ದರಿದ್ರರಿಗೋಸ್ಕರ ಕೆಲಸ ಮಾಡುತ್ತಿದ್ದೀರಿ. ಇದಕ್ಕೆ ಬದಲು ವಿದ್ಯಾ ಇಲಾಖೆಗೆ ಕೊಡುವುದು ಸರಿಯಾಗಿರುತ್ತದೆ.

ಮಾನ್ಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ರೆವಿನ್ಯೂ ಶಾಖೆಯಲ್ಲಿರುವ ರಿಕಾರ್ಡು ಗಳು ಬೇಕಾದಷ್ಟು ಪೆಂಡಿಂಗ್ ಇವೆ. ಇದರ ಬಗ್ಗೆ ಸರಕಾರ ನಿಗಾ ವಹಿಸಬೇಕೆಂದು ಹೇಳಿದರು. ಡೆವಲಪ್‌ಮೆಂಟ್ ವರ್ಕುಗಳನ್ನು ಆಯಾ ತಾಲ್ಲೂಕು ಬೋರ್ಡುಗಳಿಗೆ ವಹಿಸುವುದೊಳ್ಳೆಯದು. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೆಲಸಗಳನ್ನು ಅವರಿಗೇ ವಹಿಸಬಹುದು. ವ್ಯವಸಾಯದ ಬಗ್ಗೆ ಬಂಜರು ಭೂಮಿ ಬಿಟ್ಟಿದೆ ಅದಕ್ಕಾಗಿ ಯಾವ ಸ್ಕೀಂಗಳನ್ನು ಹಾಕಿಕೊಳ್ಳಬಹುದು ಅದನ್ನು ಆಯಾ ತಾಲ್ಲೂಕು ಬೋರ್ಡುಗಳವರೇ ಮಾಡಬಹುದು. ಈ ಇಲಾಖೆಗಾಗಿ Total outlay 440 ಲಕ್ಷ ರೂಪಾಯಿಗಳಷ್ಟು ಎಂದಿರುವುದರಲ್ಲಿ ಒಂದು ವರ್ಷಕ್ಕೆ ಷೆಡ್ಯೂಲು ಕ್ಯಾಸ್ಟ್ ಬಾಬಗಾಗಿ 88 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. 61-62ರಲ್ಲಿ 51 ಸೆಂಟರುಗಳನ್ನು ತೆರೆದಿದ್ದಾರೆ. 61 66ರವರೆಗೆ 120 ಸೆಂಟರುಗಳನ್ನು ತೆರೆಯಬೇಕೆಂದಿದ್ದರು. 62-63ರಲ್ಲಿ 32 ಸೆಂಟರುಗಳನ್ನು ತೆರೆದಿದ್ದಾರೆ. ಇನ್ನುಳಿದ ಸ್ಕೀಮುಗಳ ಬಗ್ಗೆ ಎಲ್ಲ ಕಡೆಗಳಲ್ಲೂ 'ನಿಲ್'—'ನಿಲ್' ಎಂದು ಹೇಳಿದ್ದಾರೆ. ಹೀಗೆ ಒಂದು ನಿಲ್ ಸ್ಟೇಟ್‌ಮೆಂಟನ್ನು ಕೊಡುವುದಕ್ಕೆ ಒಂದು ಇಲಾಖೆ ಇರಬೇಕೇ ? ಇದಕ್ಕೇಕೆ ನಾವು ವರ್ಷಂಪ್ರತಿ 20 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕು ? ಈ ಕೆಲಸಕ್ಕಾಗಿ ಮಂತ್ರಿಮಂಡಲ ದಲ್ಲಿ ಒಂದು ಪ್ರತ್ಯೇಕ ಪೋರ್ಟ್‌ಫೋಲಿಯೋ ಬೇರೆ ಇರಬೇಕೆ ? ಇದನ್ನು ರದ್ದುಮಾಡಿ ಈ ಹಣವನ್ನು ಈ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪನ್ನಾದರೂ ಕೊಟ್ಟರೆ ಅದರಿಂದ ಎಷ್ಟೋ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯಪಾಲರು ಇದೇ ಸಭೆಯಲ್ಲಿ ಭಾಷಣಮಾಡುತ್ತ ಒಂದು ಮಾತನ್ನು ಅವರು ಹೇಳಿದ್ದಾರೆ, ಆ ಒಂದು ಉದ್ದೇಶದಿಂದ ಇಂದು ನಮ್ಮ ದೇಶದಲ್ಲಿ ಇಲ್ಲಿಯವರೆಗೆ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಇಷ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅವುಗಳನ್ನು ಕಾರ್ಯಗತಮಾಡಿದ್ದರ ಫಲವಾಗಿ ದೇಶದಲ್ಲಿರತಕ್ಕ ಐದನೇ ಒಂದು ಭಾಗದ ದಲಿತವರ್ಗದವರ ಕಲ್ಯಾಣ ಎಷ್ಟರಮಟ್ಟಿಗಾಗಿದೆ ಎಂಬ ಬಗ್ಗೆ ಒಂದು ವರದಿಯನ್ನು ಕೊಡುತ್ತೀರಾ ಎಂದು ಕೇಳಲಿಚ್ಛಿಸುತ್ತೇನೆ? ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರೆ).—ಸ್ವಾಮಿ, ಈ ದಿವಸ ನಾನು ಪ್ರಥಮವಾಗಿ ಅರಣ್ಯಶಾಖೆಯ ಡಿಮ್ಯಾಂಡಿನ ಮೇಲೆ ಮಾತನಾಡಬೇಕೆಂದಿದ್ದೇನೆ. ಇದು ನಮಗೆ ತುಂಬಾ ಉತ್ಪತ್ತಿಯನ್ನು ತರತಕ್ಕ ಇಲಾಖೆ. ಈ ದಿವಸ ಈ ಕಾಡುಪ್ರದೇಶಗಳನ್ನು ಯಾವ ದಾಮಾಷದಲ್ಲಿ ಕಡಿಯಲಾಗುತ್ತಿದೆಯೋ ಆ ದಾಮಾಷದಲ್ಲಿ ಅಭಿವೃದ್ಧಿ ಮಾಡುತ್ತಿಲ್ಲ, ಅವುಗಳನ್ನು ಸುಧಾರಣೆ ಮಾಡುತ್ತಿಲ್ಲ. ಇದಕ್ಕೆ ಖರ್ಚುಮಾಡತಕ್ಕ ಹಣ ಬಹಳ ಕಡಮೆ. ಈ ಕಾಡುಗಳಿಂದ ನಮ್ಮ ರಾಜ್ಯಕ್ಕೆ ಇನ್ನೂ ಹೆಚ್ಚಿನ ಆದಾಯ ಬರುವಂತೆ ಮಾಡಬಹುದು. ಇದರಿಂದ ಸ್ವಾಭಾವಿಕವಾಗಿ ಬರತಕ್ಕ ಆದಾಯಗಳೂ ಹೆಚ್ಚಾಗಿರುತ್ತವೆ. ಇದಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ. ಇನ್ನು ಈ ಕಾಡಿನಲ್ಲೇ ಇದ್ದುಕೊಂಡು ಜೀವನ ಮಾಡತಕ್ಕ ಜನರೂ ಬಹಳವಾಗಿದ್ದಾರೆ. ಅವರನ್ನೂ ಕೂಡ ಅಭಿವೃದ್ಧಿಗೊಳಿಸುವುದಕ್ಕೆ ಸರ್ಕಾರ ಪ್ರಯತ್ನಪಡಬೇಕೆಂದು ಹೇಳಿದರೆ ಅದೇನೂ ಅಂಥ ತಪ್ಪಾಗುವುದಿಲ್ಲ ಎಂದು ಹೇಳುತ್ತೇನೆ. ಇನ್ನು ಕರಾವಳಿ ಪ್ರದೇಶದಲ್ಲಿ ಅನೇಕ ಭಾಗಗಳನ್ನು ಅರಣ್ಯಕ್ಕಾಗಿ ರಿಜರ್ವ್ ಮಾಡಿಕೊಂಡಿದ್ದಾರೆ. ಇದರಲ್ಲಿ ಉಪಯೋಗಕ್ಕೆ ಬಾರದ ಪ್ರದೇಶಗಳಿದ್ದರೆ ಅವುಗಳನ್ನು ಭೂಮಿಯಿಲ್ಲದ ವ್ಯವಸಾಯಗಾರರಿಗೆ ಬಿಟ್ಟುಕೊಡಬೇಕೆಂದು ಹೇಳುತ್ತೇನೆ. ಇನ್ನು ಕೆಲವು ಅಧಿಕಾರಿಗಳು ಅನೇಕ ಸ್ಥಳದಲ್ಲಿ ಕಳ್ಳಸಾಗಾಣಿಕೆಯಿಂದ ಗಂಧದ ಮರಗಳು ಮತ್ತು ಇನ್ನಿತರ ಮರಗಳು ಸಾಗಾಣಿಕೆಯಾಗುತ್ತಿವೆ. ಅವುಗಳ ಬಗ್ಗೆ ಅವರು ಸಾಕಷ್ಟು ನಿಗಾವಹಿಸುತ್ತಿಲ್ಲ. ಈ ವಿಚಾರದಲ್ಲಿ ಅನೇಕ ದೂರುಗಳು ಬಂದಿವೆ. ಇನ್ನು ಕೋರ್ಟುಗಳಲ್ಲಿ ಹೂಡಿರತಕ್ಕ ಮೊಕದ್ದಮೆಗಳಲ್ಲಿ ಅನೇಕ ಕೇಸುಗಳು ಇತ್ಯರ್ಥವಾಗುವುದು ನಿಧಾನವಾಗುತ್ತಿದೆ ಎಂಬ ದೂರುಗಳು ಬೇರೆ ಇವೆ. ಈ ವಿಚಾರಕ್ಕೆ ಸರ್ಕಾರದವರು ಹೆಚ್ಚಿನ ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ನಾನು ಈ ಸಮಾಜ ಕಲ್ಯಾಣ ವಿಚಾರಕ್ಕೆ ಬಂದರೆ: ಈಗಾಗಲೇ ಶ್ರೀಮತಿ ಚಂಪಾಬಾಯಿ ಭೋಗಲೆಯವರು ಮತ್ತು ಶ್ರೀ ಜಿ. ದುಗ್ಗಪ್ಪನವರೂ ಬಹಳ ವಿಚಾರಗಳನ್ನು ಹೇಳಿದ್ದಾರೆ. ಶ್ರೀ ದುಗ್ಗಪ್ಪನವರು ಈ ಸಮಾಜ ಕಲ್ಯಾಣ ಖಾತೆಗೆ ಒಬ್ಬ ಮಂತ್ರಿಗಳಿರುವುದೇ ಬೇಡವೆಂದು ಹೇಳಿದ್ದಾರೆ. ಆದರೆ ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ: ಈ ಮಂತ್ರಿ ಸ್ಥಾನವನ್ನು ಪ್ರತ್ಯೇಕವಾಗಿಡುವುದು ಬೇಡ ಎಂದು ಹೇಳುತ್ತೇನೆ. ಇದರಿಂದ ಸಿಬ್ಬಂದಿ ವರ್ಗಕ್ಕೆ ಖರ್ಚಾಗತಕ್ಕ 1-8 ಲಕ್ಷ ರೂಪಾಯಿಗಳು ಉಳಿತಾಯವಾಗುತ್ತದೆ. ಈ ಬಗ್ಗೆ ಒಂದು ಸ್ಕೆಲಿಟನ್ ಸಿಬ್ಬಂದಿಯಿದ್ದರೆ ಸಾಕೆಂದು ಹೇಳುತ್ತೇನೆ. ಇನ್ನು ಈ ಇಲಾಖೆ ನಡೆಸುತ್ತಿದ್ದ ಕೆಲವಾರು ಬಾಬುಗಳಿವೆ ಅವುಗಳನ್ನು ಆಯಾಯ ಇಲಾಖೆಗೆ ವಹಿಸಿಬಿಟ್ಟರೆ ಸಾಕೆಂದು ಹೇಳುತ್ತೇನೆ. ಆದರೆ ಈ ದಲಿತ ವರ್ಗದವರನ್ನು ಕುಂಟರು, ತುಂಟರು, ಕುರುಡರಂತೆ ಭಾವಿಸಬಾರದೆಂದು ಕೇಳಿಕೊಳ್ಳುತ್ತೇನೆ. ಈ ದೀನದಲಿತ ವರ್ಗದವರಿಗೆ ಮಹಾತ್ಮಾ ಗಾಂಧಿಯವರು ಸ್ಥಾಪಿಸಿದ್ದ ಒಳ್ಳೆಯ ತತ್ವಗಳನ್ನೆಲ್ಲಾ ಇವರು ಕೊಲೆಮಾಡಿದ್ದಾರೆ. ಈ ದಿವಸ ಕೇರಳದಲ್ಲೂ ಮತ್ತು ಬಂಗಾಳದಲ್ಲೂ ಈ ಖಾತೆಯನ್ನು ಮುಖ್ಯಮಂತ್ರಿಗಳಿಗೆ ವಹಿಸಿದ್ದಾರೆ. ಅಲ್ಲಿ ಕೆಲಸ ಸಮರ್ಪಕವಾಗಿ ನಡೆಯುತ್ತಿದೆ. ಇಲ್ಲಿಯೂ ಹಾಗೇ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ಬಾಬುಗಳಿಗಾಗಿ ತಾವು ಲಕ್ಷಾಂತರ ರೂಪಾಯಿಗಳನ್ನು ಕೇಳಿದ್ದೀರಿ. ಆದರೆ ಈ ಹಣ ಹೇಗೆ ಖರ್ಚಾಯಿತೆಂಬುದನ್ನು ಮಾತ್ರ ಇಲ್ಲಿ ತಿಳಿಸಿಲ್ಲ. ಇದರಿಂದ ಶ್ರೀಮತಿ ಚಂಪಾಬಾಯಿ ಭೋಗಲೆಯವರು ಹೇಳಿದ ಹಾಗೆ ಎಲ್ಲಿ ಏನಾಗಿದೆ, ಎಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದೇ ಗೊತ್ತಾಗುವುದಿಲ್ಲ. ಇದರಲ್ಲಿ ಬಹಳ ಹಣ ದುರ್ವ್ಯಯವಾಗುತ್ತಿದೆ. ಸಮಾಜಕ್ಕೆ ದ್ರೋಹವಾಗುತ್ತಿದೆ. ದೇಶಕ್ಕೆ ದ್ರೋಹವಾಗುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರಕ್ಕೆ ಇಲ್ಲಿಯವರೆಗೂ ಸಾಧ್ಯವಾಗಿಲ್ಲ. ಇದಕ್ಕೆ ಯಾರು ಕಾರಣರೆಂಬುದನ್ನು ಕೂಡಲೇ ಕಂಡು ಹಿಡಿಸಿ ಅವರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಂತಹ ಅಕ್ರಮಕ್ಕೆ ಯಾರು ಜವಾಬ್ದಾರರೋ ಅಂತಹವರನ್ನು ಜಾಗ್ರತೆ ತೆಗೆಯಿರಿ. ಇವರ ಒಂದು ನಿರ್ಣಯದ ಕ್ರಮ ಸರಿಯಿಲ್ಲ, ದಲಿತವರ್ಗದ ಸುಧಾರಣೆ ಮಟ್ಟಿಗೆ ಏನೂ ಫಲಕಾರಿಯಾಗಿಲ್ಲವೆಂದು ನಾನು ಸರ್ಕಾರಕ್ಕೆ ಇನ್ನಷ್ಟು ಒತ್ತಿ ಹೇಳಬೇಕಾಗಿದೆ. ಇಷ್ಟು ಮಾತ್ರವೇ ಅಲ್ಲ. ಎಷ್ಟೋ ವಿಚಾರಗಳಲ್ಲಿ ಇವರ ಆರ್ಥಿಕ ಉನ್ನತಿಗಾಗಿ

(ಶ್ರೀ ಗೋಪಾಲ ಪಾಲೆನ್ನ)

ಏನೇನು ಯೋಜನೆಗಳನ್ನು ಪಾಂಚವಾರ್ಷಿಕ ಯೋಜನೆಯಲ್ಲಿ ತೊಡಬೇಕೆಂದಿವೆಯೋ ಅವನ್ನೆಲ್ಲಾ ಸರ್ಕಾರದವರು ಕೊಡಬೇಕು. ಆ ಯೋಜನೆಗಳ ಪ್ರಕಾರ ರಿಕ್ಷಾಗಳನ್ನು ಕೊಡಬೇಕು, ಗಾಡಿ, ಎತ್ತುಗಳನ್ನು ಸಹ ಕೊಡಬೇಕೆಂದಿದೆ. ಹಾಗಿರುವಾಗ ಎಷ್ಟು ಜನಗಳಿಗೆ ರಿಕ್ಷಾ, ಗಾಡಿ, ಎತ್ತುಗಳನ್ನು ಕೊಟ್ಟಿದ್ದೀರಿ ಎಂದು ನಾನು ಕೇಳುತ್ತೇನೆ. ಎತ್ತುಗಳನ್ನು ಕೊಟ್ಟರೆ ಗಾಡಿ ಇಲ್ಲ; ಗಾಡಿಗಳನ್ನು ಕೊಟ್ಟರೆ ಎತ್ತು ಇಲ್ಲ. ಚಕ್ರಗಳು ಚರಂಡಿಯೊಳಗೆ ಬಿದ್ದಿರಬೇಕು. ಅಂತಹ ಗಾಡಿಗಳನ್ನು ಕೊಡುತ್ತಾರೆ. ಈ ರೀತಿಯಾದರೆ ಅವರ ಆರ್ಥಿಕ ಸ್ಥಿತಿ ಎಷ್ಟರಮಟ್ಟಿಗೆ ಆಗುತ್ತದೆಯೆಂಬುದನ್ನು ವಿಚಾರ ಮಾಡಬೇಕಾಗಿದೆ. ಇನ್ನು ಸೋಷಿಯಲ್ ವೆಲ್‌ಫೇರ್ ಬೋರ್ಡ್ ಎಂದಿದೆ. ಆ ಬೋರ್ಡ್‌ನಿಂದ ಏನೂ ಪ್ರಯೋಜನವಿಲ್ಲ. ಅದು ತನ್ನ ಅಭಿಪ್ರಾಯವನ್ನು ಕೊಡಲಿಕ್ಕೆ ಅವಕಾಶವಿರಬೇಕು. ಒಂದು ಸಮಯ ಅದಕ್ಕೆ ಅವಕಾಶವಿಲ್ಲವೆಂದರೆ ಅದಕ್ಕೊಂದು ಸಮಯವನ್ನು ಹೇಗಾದರೂ ಮಾಡಿಕೊಟ್ಟು ಅದನ್ನು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಅಸೆಂಬ್ಲಿ ಇರುವಾಗ ಅರ್ಧ ಮನಸ್ಸು ಇಲ್ಲಿ ಇನ್ನರ್ಧ ಮನಸ್ಸು ಅಲ್ಲಿ ಇಟ್ಟುಕೊಂಡು ಏನೋ ಒಂದು ಸ್ಟೇಟ್‌ಮೆಂಟನ್ನು ಹೇಳುವುದು, ಗುಮಾಸ್ತರು ಮತ್ತು ಸೆಕ್ರೆಟರಿ ಸುಮ್ಮನೆ ಇಲ್ಲಿಂದ ಅಲ್ಲಿಗೆ ಸುತ್ತಾಡುವುದು. ಈ ನಮೂನೆಯಲ್ಲಿ ಸೋಷಿಯಲ್ ವೆಲ್‌ಫೇರ್ ಬೋರ್ಡ್ ಕೆಲಸ ನಡೆಯುವುದರಿಂದ ಏನು ಪ್ರಯೋಜನ? ಯೋಗ್ಯವಾದ ರೀತಿಯಲ್ಲಿ ಕೂಲಂಕಷವಾಗಿ ಈ ಸಮಸ್ಯೆಗಳನ್ನು ಪರಿಶೀಲನೆ ಮಾಡಬೇಕು. 3-4 ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಇತರ ಹಿಂದುಳಿದ ಪಂಗಡಗಳಲ್ಲಿ ಒಂದು ರೀತಿಯ ಬಿಕ್ಕಟ್ಟನ್ನು ಹುಟ್ಟಿಸಬೇಕು. ಇವರ ಬಗ್ಗೆ ತಂದಿರತಕ್ಕ ಅಡಿಷನಲ್ ರೂಲ್ಸನ್ನು ಪಂಗಡದ ಮೇಲ್ಮೆಗಾಗಿ ಅಬಾಲಿಷ್ ಮಾಡಬೇಕು. ಈ ಒಂದೊಂದು ಕರ್ತವ್ಯವನ್ನು ಸರ್ಕಾರ ಜಾಗ್ರತೆಯಾಗಿ ಇದರಲ್ಲಿರತಕ್ಕ ಲೋಪದೋಷಗಳನ್ನು ಬಗೆಹರಿಸಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ನಿಮ್ಮ ಜಾತಿಯವರಿಗೆ ಕೊಟ್ಟಿರತಕ್ಕ ಹಣವೆಲ್ಲಾ ಲ್ಯಾಪ್ಸ್ ಆಗುತ್ತಿದೆ. ಇಂತಹ ಲೋಪದೋಷವನ್ನೂ ಸಹ ಜಾಗ್ರತೆ ಬಗೆಹರಿಸಬೇಕು.

ಇನ್ನು ಅಸ್ಪೃಶ್ಯತಾ ನಿವಾರಣೆಯಾಗಿದೆ ಎಂದು ಹೇಳುತ್ತಾರೆ. ಬೆಂಗಳೂರಿನ ಉತ್ತರ ತಾಲ್ಲೂಕಿನಲ್ಲಿ ಬಾವಿಗಳನ್ನು ಮುಟ್ಟಲಿಕ್ಕೆ ಕಾರಣವಿಲ್ಲ. ಈ ವಿಚಾರವಾಗಿ ನಾನು ಪೋಲೀಸ್ ಸ್ಟೇಷನ್ನಿಗೆ ಮತ್ತು ಗೃಹಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಎರಡು ವರ್ಷಗಳಾದರೂ ಇದುವರೆಗೆ ಈ ವಿಚಾರವಾಗಿ ತನಿಖೆಯಾಗಿಲ್ಲ. ಅನೇಕ ಜನ ನಿಮ್ಮ ಪಂಗಡದವರಿಗೆ ಹೋಟಲುಗಳಿಗೆ ಪ್ರವೇಶವಿಲ್ಲ. ಮಂಗಳೂರಿಗೆ ಹೋದರೆ ಅಲ್ಲಿ ಕೇವಲ 3 ಹೋಟಲುಗಳಿವೆ. ಹರಿಜನರು ನಡೆಸುವುದು. ಅದನ್ನು ಮೊನ್ನೆ ಹೋಗಿ ನೋಡಿದೆ. ಅಲ್ಲಿ ಒಬ್ಬ ಮನುಷ್ಯನಾಗಲೀ ಕಾಫಿ ತಿಂಡಿ ತಿನ್ನುವುದಕ್ಕಾಗಲಿಲ್ಲ. ಇದನ್ನು ಯಾರೂ ಸಂಶೋಧನೆಯಾಗಲೀ, ಪರಿಶೋಧನೆಯಾಗಲೀ ಅಥವಾ ಇಕನಾಮಿಕ್ ಏಡ್ ಆಗಲೀ ಕೊಡುವ ವ್ಯವಸ್ಥೆ ಮಾಡಿಲ್ಲ. ಇಂತಹ ಕಡೆಯಲ್ಲಿಯೇ ಅಸ್ಪೃಶ್ಯತಾ ನಿವಾರಣೆ ಹೋಗಿಲ್ಲವೆಂದು ಹೇಳಿದ ಮೇಲೆ ಇನ್ನು ಬಾಕಿ ಕಡೆಗಳಲ್ಲಿ ಅದರಲ್ಲೂ ಹಳ್ಳಿಗಾಡುಗಳಲ್ಲಿ ವಾಸಿಸುತ್ತಿರುವ ನಮ್ಮ ಜನಾಂಗದವರ ಗತಿಯೇನು? ಇನ್ನು ನಾನು ಮಂಗಳೂರಿನಲ್ಲಿ ನೋಡಿದ್ದೇನೆ. ಸುಮಾರು 9 ವರ್ಷಗಳಲ್ಲಿ ಒಂದು ಲೀಗಲ್ ಏಡ್ ವಿಚಾರವಾಗಿ ಹೈಕೋರ್ಟಿನಲ್ಲಿ ವಿವಿಧ ರೀತಿಯಲ್ಲಿ ವ್ಯವಹಾರ ನಡೆದಿದೆ. 10-12 ವರ್ಷಗಳಿಂದ ಇದು ತನಿಖೆಯಾಗಿ ಈಗ ಹೈಕೋರ್ಟಿಗೆ ಬಂದಿದೆ. ಡೆಪ್ಯುಟಿ ಕಮಿಷನರ್ ಎನ್‌ಕ್ವೈರಿ ಮಾಡಿ ಅದನ್ನು ಇನ್ಸ್‌ಪೆಕ್ಷನ್ ಮಾಡಿ ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದನ್ನು ಈಗ ಕೋರ್ಟಿನವರ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ಅದು ಅವರ ಸ್ವಾಧೀನಕ್ಕೆ ಸಿಕ್ಕಿದ ಕೂಡಲೆ ಮನೆಯನ್ನು ಡಿಮಾಲಿಷ್ ಮಾಡಿ ನೆಲಸಮ ಮಾಡಿದ್ದಾರೆ. ಇದರಿಂದ ಅಲ್ಲಿನವರಿಗೆ ಬದುಕಲಿಕ್ಕೆ ಸಾಧ್ಯವಿಲ್ಲ. ಸುಮಾರು 5 ಸಾವಿರ ರೂಪಾಯಿಗಳ ಗ್ರಾಂಟು ಪ್ರತಿವರ್ಷವೂ ಲ್ಯಾಪ್ಸ್ ಆಗುತ್ತಾ ಇರುವುದು ಉಂಟು. ಹೀಗಾದರೆ ಏನು ಅನ್ಯಾಯ! ಕಾನೂನಿನಲ್ಲಿ ಒಂದು ಕಡೆಯಲ್ಲಿ ಗ್ರಾಂಟು ಕೊಡುತ್ತೇವೆಂದು ಹೇಳಿ ಇನ್ನೊಂದು ಕಡೆಯಲ್ಲಿ ಅದನ್ನು ಉಪಯೋಗ ಮಾಡಲಿಕ್ಕೆ ಬಿಡುವುದಿಲ್ಲ. ಇನ್ನು 1957ರಿಂದ ಮೊದಲು ಯಾರು ಸರ್ಕಾರದ ಸ್ಥಳವನ್ನಾಗಲೀ ಅಥವಾ ಮುನಿಸಿಪಲ್ ಸ್ಥಳವನ್ನಾಗಲೀ ಆಕ್ರಮಣ ಮಾಡಿದ್ದರೆ ಷೆಡ್ಯೂಲ್ಡ್ ಕ್ಯಾಸ್ಟ್ ಪೈಕಿ ಅವರಿಗೆ ಖಾಯಂ ಆಗಿ ಕೊಡಬೇಕು. ಇನ್ನು ನಮ್ಮ ನಗರದಲ್ಲಿ ತೆಗೆದುಕೊಂಡರೆ ಎಷ್ಟೋ ಜನರು 57ಕ್ಕಿಂತ ಮೊದಲೇ ಕೂತುಕೊಂಡಿದ್ದಾರೆ. ಆದ್ದರಿಂದ ಈಗ ಸ್ಥಳ ಎಲ್ಲೂ ಇಲ್ಲ. ಮನುಷ್ಯನಿಗೆ ಬೇಡದೇ ಇರುವ ಸ್ಲಮ್ ಏರಿಯಾಗಳಲ್ಲಿ ಅದರಲ್ಲೂ ಅನಾರೋಗ್ಯಕರವಾದ ಸ್ಥಳಗಳಲ್ಲಿ ಕೂತಿದ್ದಾರೆ. ಅವರನ್ನು ಈ ಸ್ಥಳದಿಂದ ಒಕ್ಕಲು ತೆಗೆಯುತ್ತಿದ್ದಾರೆ. ಬಾಕಿಯವರಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಆ ರೀತಿ ಮಾಡುತ್ತಿದ್ದಾರೆ. ಇವರಿಗೆ ಮರಿಯಪ್ಪನ ಪಾಳ್ಯದಲ್ಲಿ ಮೊದಲಿನಿಂದಲೂ ಈ ಮಂತ್ರಿಮಂಡಲ ಅಥವಾ ಸರ್ಕಾರ ವಸತಿ ಸೌಕರ್ಯಗಳನ್ನು

ಕೊಡಬೇಕೆಂದು ತೀರ್ಮಾನ ಮಾಡಿಕೊಂಡಿದ್ದರು. ಈಗ ನೋಡುವಾಗ ಅದನ್ನು ಬಿಟ್ಟು ಅವರನ್ನು 10 ಮೈಲಿ ಹೊರಗೆ ಹೋಗಿ ಎಂದು ಹೇಳುತ್ತಿದ್ದಾರೆ. ಇದೇನು ನ್ಯಾಯ ? ಅಂತಹ ಜನಗಳನ್ನು ಹೊರಗೆ ಕಳುಹಿಸುವುದರಲ್ಲಿ ನ್ಯಾಯವಿದೆಯೇ ? ಇದನ್ನು ಸರ್ಕಾರದವರು ಗಮನಿಸಬೇಡವೇ ? ಇಂಥಾದ್ದನ್ನೆಲ್ಲಾ ಪರಿಶೋಧನೆ ಮಾಡಲಿಕ್ಕೆ ಸರಿಯಾದಂಥ ಒಂದು ಸಣ್ಣ ಕಮಿಟಿಯನ್ನು ರಚನೆ ಮಾಡಬೇಕು. ಎಲ್ಲೆಲ್ಲಿ ಅವರಿಗೆ ಅನ್ಯಾಯಗಳು ಆಗುತ್ತಿವೆಯೋ, ಅಧಿಕಾರಿಗಳ ದುರುಪಯೋಗ ಗಳಿವೆಯೋ ಅವನ್ನೆಲ್ಲಾ ಚೆನ್ನಾಗಿ ಸರ್ಕಾರದವರು ವಿಚಾರಿಸಬೇಕು ಎಂದು ಹೇಳುತ್ತೇನೆ. ಈ ಡಿಮ್ಯಾಂಡ್‌ಗಳಿಗೆ ಸಂಬಂಧವಾಗಿ 32-33ನೇ ಬೇಡಿಕೆಗಳಿಗೆ ಸಾಕಷ್ಟು ಅಕೌಂಟ್ಸ್ ಕೊಡದೇ ನಮ್ಮ ಒಪ್ಪಿಗೆಯನ್ನು ಅವುಗಳ ಬಗ್ಗೆ ಕೇಳುವುದಕ್ಕೆ ಈ ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಲ್. ಕಬಾಡಿ (ಬಾಡೋಲ್).—ಅಧ್ಯಕ್ಷರೇ, ಇವತ್ತಿನ ದಿವಸ ಈ ಅರಣ್ಯ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಇವತ್ತು ಅರಣ್ಯ ಇಲಾಖೆಯ ಮಂತ್ರಿಗಳು ಹರಿಜನರಿಗಾಗಿ ಇನ್ನೂರು ರೂಪಾಯಿಗಳವರೆಗೆ ಟಿಂಬರನ್ನು ಮನೆಕಟ್ಟುವ ಸಲುವಾಗಿ ಪುಕ್ಕಟೆಯಾಗಿ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ಅದರಿಂದ ನಮ್ಮ ರಾಜ್ಯದ ಹರಿಜನರ ಪರವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನೊಂದು ವಿಷಯ ಅವರಲ್ಲಿ ವಿನಂತಿ ಮಾಡುವುದೇನೆಂದರೆ ಅವರಿಗೆ ಕೊಡತಕ್ಕ 300 ರೂಪಾಯಿಗಳ ಟಿಂಬರನ್ನು ಅವರು ಇರುವ ಸ್ಥಳಕ್ಕೆ ಸಾಗಿಸುವಂತೆ ಏನಾದರೂ ಏರ್ಪಾಡು ಮಾಡಿದರೆ ಇನ್ನೂ ಹೆಚ್ಚಿನ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಸಿದ್ಧನಾಗಿದ್ದೇನೆ. ಸರಿಯಾದ ಆಡಳಿತ ಅದರಲ್ಲ ನಡೆಯ ಬೇಕಾದರೆ ಅಲ್ಲಿನ ಆಫೀಸರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬೇಕಾಗಿದೆ. ವ್ಯವಸಾಯಲ್ಲಿ ರಾಷ್ಟ್ರ ಪುನರ್ವಿಂಗಡಣೆಯ ಪ್ರಕಾರ ಕೇಂದ್ರದಿಂದ ನೇಮಕವಾಗಿರತಕ್ಕ ಅಧಿಕಾರಿಗಳು ಯಾರೋ ಒಬ್ಬರು ಬಂದರು, ಏನೋ ಮಾಡಿಕೊಂಡು ಹೋದರು ಎಂಬಂತಾಗಬಾರದು. ಇದನ್ನು ಕೂಲಂಕಷವಾಗಿ ವಿಚಾರ ಮಾಡಬೇಕೆಂದು ಸರಿಯಾದ ರೀತಿಯಲ್ಲಿ ಕೇಂದ್ರದಿಂದ ಬಂದಂಥ ಪಟ್ಟೀ ಪ್ರಕಾರ ಎಲ್ಲವನ್ನೂ ಜಾರಿಗೆ ತರುವುದು ಅವರ ಕರ್ತವ್ಯ. ಆ ಕರ್ತವ್ಯಕ್ಕಾಗಿ ಕೆಲವೊಂದು ಆಫೀಸರ್ಸ್ ಹೋಗಿದ್ದಾರೆಂದು ನಾನು ತಿಳಿಯುತ್ತೇನೆ. ಇದನ್ನು ಬೇಗ ಇತ್ಯರ್ಥ ಮಾಡಿ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಕಾರ್ಯರೂಪಕ್ಕೆ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಹಣವನ್ನು ಎಷ್ಟೇ ಇಟ್ಟಿದ್ದರೂ ಸಾಲದು. ಅವರ ಅಭಿವೃದ್ಧಿಗಾಗಿ ಸಾಕಷ್ಟು ಹಣವನ್ನು ಇಡಬೇಕಾಗಿತ್ತು ; ಇಟ್ಟಿಲ್ಲ. ಆದರೆ ಈ ಇಲಾಖೆಯ ಹಣದಲ್ಲಿ ತುರ್ತು ಪರಿಸ್ಥಿತಿಯಿಂದ 22 ಲಕ್ಷ ರೂಪಾಯಿಗಳನ್ನು ಖೋತಾ ಮಾಡಿದ್ದು ಬಹಳ ವಿಷಾದಕರ ಸಂಗತಿ.

2-30 P. M.

ಇದರ ಬಗ್ಗೆ 22 ಲಕ್ಷ ರೂಪಾಯಿಗಳನ್ನು ಖೋತಾ ಮಾಡಿದ್ದರೂ ಸಹ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡಿದ್ದಾರೆ. ಸುಮಾರು 30 ಕೋಟಿ ರೂಪಾಯಿಗಳವರೆಗೆ ಹರಿಜನರ ಅಭಿವೃದ್ಧಿಗೆ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಅದನ್ನು ಕೊಟ್ಟಿದ್ದಕ್ಕಾಗಿ ನಾನು ತುಂಬಾ ಖುಷಿಯಾಗಿದ್ದೇನೆ. ಈ ಡಿಪಾರ್ಟ್‌ಮೆಂಟಿನಲ್ಲಿ ಕೆಲವೊಂದು ಪಾಯಿಂಟ್ಸ್ ಹೇಳಬೇಕೆಂದರೆ ವ್ಯವಸಾಯಕ್ಕೋಸ್ಕರ ಸಹಾಯ ಮಾಡುವುದು, ಮೆರಿಟ್ ಸ್ಕಾಲರ್‌ಷಿಪ್ ಕೊಡುವುದು, ಇಂಡಸ್ಟ್ರಿಯಲ್ ಎಕನಾಮಿಕ್ ಏಯ್ಡ್, ಮಕ್ಕಳು ಮತ್ತು ಹೆಂಗಸರ ವೆಲ್‌ಫೇರ್‌ಗೋಸ್ಕರ ಸಹಾಯ ಮಾಡುವುದು, ಪಬ್ಲಿಷ್ ಮತ್ತು ಪ್ರಾಪಗ್ಯಾಂಡ, ಹೌಸಿಂಗ್ ಯೋಜನೆಯನ್ನು ಇಷ್ಟನ್ನು ಬಿಟ್ಟರೆ ಹರಿಜನರ ಅಭಿವೃದ್ಧಿಯನ್ನು ಮಾಡುವುದಕ್ಕೆ ಈ ಇಲಾಖೆಯಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ? ಕೇವಲ ಹರಿಜನರನ್ನು ಅವರನ್ನು ಉನ್ನತ ಮಾರ್ಗದಲ್ಲಿರುವುದಕ್ಕೋಸ್ಕರ ಅಭಿವೃದ್ಧಿ ಮಾಡುವುದಕ್ಕೋಸ್ಕರ ಅವರ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕೋಸ್ಕರ ಯಾವ ಒಂದು ಯೋಜನೆಯನ್ನು ಸಹ ಈ ಇಲಾಖೆ ಕೈಗೊಂಡಿಲ್ಲ. ಆದ್ದರಿಂದ ಈ ಇಲಾಖೆಯನ್ನು ವೈಂಡ್ ಅಪ್ ಮಾಡಿ ಇದರ ಬಗ್ಗೆ ಒಂದು ಸಲಹಾ ಸಮಿತಿಯನ್ನು ಮಾಡಿ, ಈ ಇಲಾಖೆಗೆ ಇರತಕ್ಕ ಕೆಲಸ ಕಾರ್ಯಗಳನ್ನೂ ಪ್ರತಿಯೊಂದು ಇಲಾಖೆಗೂ ಹಂಚಿ ಅದರ ಮುಖಾಂತರ ಈ ಕೆಲಸ ಕಾರ್ಯಗಳನ್ನು ಮಾಡುವುದು ಯೋಗ್ಯ ಎಂದು ನನಗನ್ನಿಸುತ್ತದೆ. ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ ಮತ್ತು ಡೀನೋಟಿಫೈಡ್ ಅಡ್ವೈಜರಿ ಬೋರ್ಡ್ ಮಾಡಿ ಅವರ ಸಲಹೆಯಂತೆ ಹರಿಜನರು ಮತ್ತು ಗಿರಿಜನರಿಗೆ ಸಹಾಯ ಮಾಡಿದರೆ ಅದರಿಂದ ಎಷ್ಟೋ ಅನುಕೂಲವಾಗುತ್ತದೆ. ಆ ರೀತಿಯ ಒಂದು ಬೋರ್ಡನ್ನು ಮಾಡಿ ಅದಕ್ಕೆ ಮುಖ್ಯಮಂತ್ರಿಗಳನ್ನು ಛೇರ್ಮನ್ ಆಗಿ ಮಾಡಬೇಕು. ಎಲ್. ಎಸ್. ಜಿ. ಸೆಕ್ರೆಟರಿ, ವಿದ್ಯಾ ಇಲಾಖೆಯ ಸೆಕ್ರೆಟರಿ, ಮತ್ತು ಪಬ್ಲಿಕ್ ಹೆಲ್ತ್ ಸೆಕ್ರೆಟರಿಯನ್ನು ಸಹ ಆ ಸಲಹಾ ಮಂಡಲಿಗೆ ಸೇರಿಸಿಕೊಳ್ಳಬೇಕು. ಮತ್ತು ಈ ರಾಜ್ಯದಲ್ಲಿ ಹರಿಜನರ ಅಭಿವೃದ್ಧಿಗಾಗಿ ಕೆಲಸ ಮಾಡ

(ಶ್ರೀ ಜೆ. ಎಲ್. ಕಬಾಡಿ)

ತಕ್ಕ ಸಂಸ್ಥೆಗಳ ಕಮಿಟಿ ಮೆಂಬರುಗಳನ್ನು ಸಹ ಈ ಸಲಹಾ ಮಂಡಲಿಗೆ ತೆಗೆದುಕೊಂಡು ಅವರ ಸಲಹೆಯಂತೆ ಹರಿಜನರ ಮತ್ತು ಗಿರಿಜನರ ಅಭಿವೃದ್ಧಿಗಾಗಿ ಕೆಲಸ ಕಾರ್ಯಗಳನ್ನು ಮಾಡಿದರೆ ಹರಿಜನರ ಮತ್ತು ಗಿರಿಜನರ ಅಭಿವೃದ್ಧಿ ಆದೀತು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ 110 ಕೋಟಿ ರೂಪಾಯಿಗಳ ಅಂದಾಜಿನ ಒಂದು ಆಯವ್ಯಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ಅದರಲ್ಲಿ ಹರಿಜನರಿಗೆ ಎಷ್ಟುಮಟ್ಟಿನ ಒಂದು ಅನುಕೂಲವಾಗಬೇಕಾಗಿತ್ತು ಎಂಬುದರ ಬಗ್ಗೆ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ 1960 ನೇ ಇಸವಿ 8ನೇ ತಾರೀಕು ಒಂದು ಗವರ್ನಮೆಂಟ್ ಆರ್ಡರನ್ನು ಹೊರಡಿಸಿದ್ದಾರೆ. ಅದರಲ್ಲಿ

> "......in relation to the population of the State .... should earmark for the benefit of these classes in all departments of the State."

ಎಂದು ಹೇಳಿದ್ದಾರೆ. ಇದನ್ನು ಏನು ಮಾಡಿದ್ದಾರೆ ? ಇಲ್ಲಿಯವರೆಗೂ ಇದನ್ನು ಏತಕ್ಕೆ ಕಾರ್ಯಗತ ಮಾಡಲಿಲ್ಲ ? ಒಂದು ಸರ್ಕಾರದ ಆರ್ಡರನ್ನು ಮಾಡಿ ಅದನ್ನು ಸಾರ್ವಜನಿಕರ ಮುಂದೆ ಇಟ್ಟರೆ ಪ್ರಯೋಜನ, ಅದನ್ನು ಕಾರ್ಯರೂಪಕ್ಕೆ ತರದೆ ಇರುವುದಕ್ಕೆ ಕಾರಣವೇನು ಎಂದು ನಾನು ಕೇಳುತ್ತೇನೆ. ಮಾನ್ಯ ಮಂತ್ರಿಗಳು ಇದನ್ನು ದಯವಿಟ್ಟು ಹೇಳಬೇಕು. ಇವೊತ್ತು ನಮ್ಮ ರಾಜ್ಯದಲ್ಲಿ ಕೋಮುವಾರು ದೃಷ್ಟಿಯಿಂದ ನೋಡುವುದಾದರೆ 20 ಪರ್ಸೆಂಟ್ ಲಿಂಗಾಯಿತರಿದ್ದಾರೆ, 17–18 ಪರ್ಸೆಂಟ್ ಒಕ್ಕಲಿಗರಿದ್ದಾರೆ. 13–14 ಪರ್ಸೆಂಟ್ ಹರಿಜನರಿದ್ದಾರೆ. 5 ಪರ್ಸೆಂಟ್ ಷೆಡ್ಯೂಲ್ ಟ್ರೈಬ್ಸ್ ಇದ್ದಾರೆ. ಈ ಒಂದು ಲೆಕ್ಕಾಚಾರವನ್ನು ತೆಗೆದುಕೊಂಡರೆ ಬೇರೆಯವರಿಗೆ ಒದಗಿಸಿರತಕ್ಕ ಸವಲತ್ತುಗಳ ಅಂಕಿ ಅಂಶಗಳನ್ನು ನೋಡುವುದಾದರೆ ನಮ್ಮ ಹರಿಜನರಿಗೆ ಕೊಟ್ಟಿರುವಂಥಾ ಸೌಲತ್ತುಗಳು ಏನೂ ಇಲ್ಲ. ತುಂಬಾ ಅನ್ಯಾಯ ಮಾಡುತ್ತಿದ್ದಾರೆ ಎಂದು ನಾನು ಹೇಳುತ್ತೇನೆ. ಇವೊತ್ತು ಸರ್ವೀಸ್‌ನಲ್ಲೂ ಕೂಡ ಅಷ್ಟೇನೂ ಅನುಕೂಲವಾಗಲಿಲ್ಲ. ಮೊನ್ನೆ ಫೆಬ್ರವರಿ 18ನೇ ತಾರೀಖು ಸರ್ವೀಸ್ ಕಮಿಟಿ ಸೇರಿದಾಗ ಸರ್ಕಾರದ ಇಲಾಖೆಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯವನ್ನು ಕೊಟ್ಟಿರುವುದನ್ನು ವಿಚಾರ ಮಾಡಿದರೆ, ಮತ್ತು ಆ ಕಮಿಟಿಯಲ್ಲಿ ಅಧಿಕಾರಿಗಳು ಮಾತನಾಡಿದನ್ನು ನೋಡಿದರೆ ಅವರ ಮನೋಭಾವ ಏನಿದೆ ಎಂದರೆ ಹರಿಜನರನ್ನು ಇನ್ನೂ ಕೆಳಕ್ಕೆ ಒತ್ತಬೇಕು, ಕೆಳಗಡೆ ಇಡಬೇಕು ಎನ್ನುವ ಮನೋಭಾವನೆ ಇದ್ದಹಾಗೆ ಕಾಣುತ್ತದೆ. ಸುಪ್ರೀಂ ಕೋರ್ಟ್ ಡಿಸಿಷನ್ ಪ್ರಕಾರ ಇವೊತ್ತು ಕೇಂದ್ರ ಸರ್ಕಾರದಿಂದ ಒಂದು ಆದೇಶ ಸಿಕ್ಕಿದೆ. ಆದೇಶದ ಪ್ರಕಾರ ಚೀಫ್ ಸೆಕ್ರೆಟರಿಯವರು ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅದು ಮೇಲ್ಮಟ್ಟದಲ್ಲಿ ವಿಚಾರ ನಡೆದಿದೆಯೇ ಹೊರತು ಕೆಳಗಡೆ ಅದು ಬಂದಿಲ್ಲ. ಅಂಡರ್ ಸೆಕ್ರೆಟರಿಯವರಿಗೆ ಅದನ್ನು ಹೇಳಬಹುದಾಗಿತ್ತು. ಆದರೆ ಅದನ್ನು ಅವರಿಗೆ ಹೇಳಲಿಲ್ಲ. ಸುಪ್ರೀಮ್ ಕೋರ್ಟ್ ಆರ್ಡರ್ ಆಗಿ, ಕೇಂದ್ರ ಸರ್ಕಾರದಿಂದ ಆದೇಶ ಬಂದಿದ್ದರೂ ಕೂಡ ಅದನ್ನು ನಮ್ಮಲ್ಲಿ ಇಂಪ್ಲಿಮೆಂಟ್ ಮಾಡಿಲ್ಲ. ಇದರಿಂದಾಗಿ ಹರಿಜನರಿಗೆ ಬಹಳ ಅನ್ಯಾಯವಾಗಿದೆ. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ನಾನು ಈ ವಿಷಯವನ್ನು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತಂದು ಹರಿಜನರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಒಂದು ಆದೇಶವನ್ನು ನೀಡಬೇಕು ಎಂದು ಹೇಳಿದಾಗ 2–8–1963 ರಲ್ಲಿ ಹರಿಜನರನ್ನ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸಕ್ಕೆ ತೆಗೆದುಕೊಳ್ಳುವ ಸಲುವಾಗಿ ಒಂದು ಆರ್ಡರನ್ನು ಕೊಟ್ಟರು. ಆದರೆ ಯಾವ ಇಲಾಖೆಯವರೂ ಸಹ ಇಲ್ಲಿಯವರೆಗೆ ಒಬ್ಬ ಹರಿಜನರನ್ನು ಲೋಕಲ್ ಕ್ಯಾಂಡಿಡೇಟ್ ಆಗಿ ಕೆಲಸಕ್ಕೆ ತೆಗೆದುಕೊಂಡದ್ದು ನಾನು ನೋಡಲಿಲ್ಲ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರಿಗೆ ಎಲ್ಲಾ ಇಲಾಖೆಗಳವರೂ ಹರಿಜನರ ಅಭಿವೃದ್ಧಿಗೆ ಸಂಬಂಧಪಟ್ಟ ಸ್ಟ್ಯಾಟಿಸ್ಟಿಕಲ್ ಇನ್‌ಫರ್‌ಮೇಷನ್ ಅನ್ನೂ ಕಳುಹಿಸಬೇಕಾಗಿತ್ತು. ಆದರೆ 1962ನೇ ಇಸವಿಯಿಂದ 1964ನೇ ಇಸವಿ ಫೆಬ್ರವರಿ ತಿಂಗಳು 18ನೇ ತಾರೀಖಿನ ವರೆಗೆ ಯಾವ ಇನ್‌ಫರ್‌ಮೇಷನ್ ಅನ್ನೂ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಇತರ ಇಲಾಖೆಗಳವರು ಕಳುಹಿಸಿಲ್ಲ. ಈ ರೀತಿ ಆದರೆ ಯಾವ ರೀತಿಯಿಂದ ಸಮಾಜ ಕಲ್ಯಾಣ ಆದೀತು, ಹರಿಜನರ ಅಭಿವೃದ್ಧಿ ಹೇಗೆ ಆದೀತು ಎಂದು ನನಗೆ ಸಂದೇಹಾಸ್ಪದವಾಗಿದೆ. 17 ಜನ ಆಫೀಸರ ವಿಷಯದಲ್ಲಿ ನನ್ನ ಸ್ನೇಹಿತರು ಈಗಾಗಲೇ ಮಾತನಾಡಿದ್ದಾರೆ. ಅವರ ಬಗ್ಗೆ ಇದುವರೆಗೂ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಿಲ್ಲ. 1960ನೇ ಇಸವಿಗಿಂತ ಪೂರ್ವದಲ್ಲಿ ಒಬ್ಬ ಮನುಷ್ಯನನ್ನು ಒಂದು ಡಿಪಾರ್ಟ್‌ಮೆಂಟಿನಿಂದ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಕೆಲಸಕ್ಕೆ ತೆಗೆದುಕೊಂಡರು. ಈಗ ಅದನ್ನು ಈ ಇಲಾಖೆಯಲ್ಲಿ ಮರ್ಜ್ ಮಾಡಬೇಕಾದರೆ ಅವನ ಕ್ವಾಲಿಫಿಕೇಷನ್ ವಿಚಾರವನ್ನು ಗಣನೆಗೆ ತೆಗೆದು

ಕೊಂಡಿದ್ದಾರೆ. ಈಗ ಉದಾಹರಣೆಗೆ ಹೇಳಬೇಕಾದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬರು ಅಸಿಸ್ಟೆಂಟ್ ವಿಮೆನ್ ವೆಲ್‌ಫೇರ್ ಆಫೀಸರನ್ನು ಕ್ಲಾಸ್ 3 ರಲ್ಲಿ ಇದ್ದವರನ್ನು ಕ್ಲಾಸ್ 2 ಪೋಸ್ಟಿಗೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರ ಕನ್‌ಕರೆನ್ಸ್ ಇಲ್ಲದೆ ತೆಗೆದ ಕೊಂಡಿದ್ದಾರೆ. ಅದೇ ರೀತಿ ಇವರನ್ನೂ ತೆಗೆದುಕೊಳ್ಳಬೇಕಾಗಿತ್ತು. ಮನಸ್ಸಿದ್ದರೆ ಏನು ಬೇಕಾದರೂ ಮಾಡಬಹುದಾಗಿತ್ತು. 5-6 ವರ್ಷ, 7–10 ವರ್ಷ ಸರ್ವೀಸ್ ಆಗಿರುವವರನ್ನು ಹೇಗೆ ರಿವರ್ಟ್ ಮಾಡಿದರು? ಇವೊತ್ತಿನ ದಿವಸ ಎಷ್ಟೋ ಕೆಲಸಗಳು ಯಾವುದೋ ಒಂದು ಒತ್ತಾಯದ ಮೇಲೆ ನಡೆಯುತ್ತಿವೆ. ಆ ರೀತಿ ಮಾಡುವುದು ಸರಿಯಲ್ಲ. ಇವೊತ್ತು ಕಾರವಾರ ಜಿಲ್ಲೆಯಲ್ಲಿ ಒಬ್ಬ ಹರಿಜನರ ಬಿ. ಡಿ. ಓ. ಬೇರೆ ಕಡೆಗೆ ಹೋದರೆ ಅವನ ಜಾಗದಲ್ಲಿ ಮತ್ತೊಬ್ಬ ಹರಿಜನರೇ ಬಿ. ಡಿ. ಓ. ಆಗಿ ಬರಬೇಕು. ಹಾಗೆ ಇದೆ. ಉಳಿದವರು ಯಾರೂ ಸಿಕ್ಕುವುದಿಲ್ಲವೇ? ಅಲ್ಲ ಒಂದು ಕಮ್ಯುನಲ್ ಫೀಲಿಂಗ್ ನಡೆಯುತ್ತಾ ಇರುವಾಗ, ಅಲ್ಲಿ ಬಿ.ಡಿ.ಓ. ಗಳು ರಿವರ್ಟ್ ಆಗಿದ್ದಾರೆ. ಅಲ್ಲಿನ ಡಿವಿಜನಲ್ ಕಮೀಷನರು ಹರಿಜನ ಬಿ. ಡಿ. ಓ. ಗಳ ವಿಚಾರದಲ್ಲಿ ಆಕ್ಷನ್ ತೆಗೆದು ಕೊಂಡು ಪ್ರೊಬೇಷನರಿ ಟೈಮಿನಲ್ಲಿ ಅವರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ, ಇವರಿಗೆ ಯೋಗ್ಯತೆ ಇಲ್ಲ ಎಂದು ರಿಪೋರ್ಟ್ ಮಾಡಿದ್ದರಿಂದ ಅವರನ್ನು ರಿವರ್ಟ್ ಮಾಡಬೇಕಾಯಿತು. ಆದರೆ ಸವರ್ಣೀಯರ ಮೇಲೆ ಅಂಥಾ ಒಂದು ರಿಪೋರ್ಟ್ ಬಂದರೂ ಕೂಡ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಈ ರೀತಿ ಅಲ್ಲಿ ಅನ್ಯಾಯ ನಡೆಯುತ್ತಾ ಇದೆ. ಹರಿಜನರ ಅಭಿವೃದ್ಧಿಯಾಗಬೇಕಾದರೆ ಬೇರೆ ಜನಾಂಗದವರ ಮಾನಸಿಕ ಪರಿವರ್ತನೆಯಾಗಿ ಹರಿಜನರ ಅಭಿವೃದ್ಧಿ ಆಗಬೇಕು ಎನ್ನುವ ಮನೋಭಾವನೆ ಅವರಲ್ಲಿ ಬೆಳೆಯಬೇಕು.

ಬೀರಪ್ಪ ಕಮಿಟಿ ರಿಪೋರ್ಟ್, ಕೆಂಗೇರಿಯಲ್ಲಿ ಆದಂಥ ಸೆಮಿನಾರ್ ಮತ್ತು ಉಳಿದ ಸೋಷಿಯಲ್ ವೆಲ್‌ಫೇರ್ ಆಫೀಸರ ಸೆಮಿನಾರ್‌ನಲ್ಲಿ ತೆಗೆದುಕೊಂಡಂಥ ನಿರ್ಣಯ, ಇವುಗಳನ್ನು ಕೂಲಂಕಷವಾಗಿ ವಿಚಾರ ಮಾಡಲಿಕ್ಕೆ ಈ ಸಭೆಯ ಮುಂದೆ ಇಡಬೇಕು. ಆ ರೀತಿ ಕೂಲಂಕಷವಾಗಿ ವಿಚಾರವಾದರೆ ಅದರಿಂದ ಎಷ್ಟೋ ಅನುಕೂಲವಾಗಿ ಈ ಸಮಾಜದ ಉದ್ಧಾರಕ್ಕೆ ಏನು ಮಾಡಬೇಕೆಂಬುದಕ್ಕೂ ಸಹಾಯವಾಗುತ್ತದೆ. ಇದಕ್ಕೆ ಅವಕಾಶ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† **Sri S. RAJAGOPAL** (Kolar Gold Fields).—Mr. Speaker, many hon'ble members in this House have offered their suggestions and criticisms on the Demands relating to Forest and Social Welfare Departments. But, I want to confine my criticism only to the Social Welfare Department because I do not know much about the Forests and one of our own Ministers is in charge of that Department.

First I will take housing. Formerly, a subsidy of Rs. 400 was being given to the Scheduled Castes for construction of houses but that has been stopped now. We understand that the amount so far spent on this, is going to be transferred to Education Department, in order to uplift the scheduled caste students. Unfortunately the scheduled caste students are not able to get any facility. We are not able to make any advance in the field of eduation. It was pointed out that but to emergency the merit scholarship that was being offered has been stopped. I may say here that this was one of the important reliefs that was given to the students. Now, unfortunately the Social Welfare Department has stopped it. If this is the way they want to help the scheduled castes, I do not know how far they are going to safeguard the interest of scheduled castes. The other day it was said that they are given free education and no fees would be charged. But the Education Department levies even on the scheduled castes people, betterment levy, collects money for teacher's welfare fund and so on. It is a heavy burden on the poor scheduled castes students. This is the position in the educational field.

(SRI S. RAJAGOPAL)

After the present Minister took up the portfolio of Social Welfare Department, we are proud to say that she has come forward to open a training centre for scheduled castes and scheduled tribes who want to appear for the I.A.S. and I.P.S. examination. But out of 23 candidates who sat for the examination, only one has come out successful. This shows that the same enthusiasm which was there while opening the institution, is not there now and proper efforts have not been made to select the right type of persons to teach. The Government should make an enquiry into the causes of such poor results and they should try to rectify the defects, if any, at least from next year. I understand that most of the instructors there are not properly qualified. You must post persons who are fully qualified and who can give good guidance to the students there. You should also create proper atmosphere so that the scheduled castes can get proper facilities.

Many Hon'ble Members referred to the question of 17 officers who have been reverted to lower ranks. I cannot but help referring to it again because it concerns the scheduled castes. It was explained that in their cases, irregularities have been committed and therefore they must revert back to their previous posts. I fail to understand how such things could be done by the same ministry which made promotions. I request the Hon'ble Minister to see that these officers are not reverted. These officers have served for 5 years as gazetted officers and if the Government now orders that they must revert back to I Division Clerks, I say it is an insult not only to those officers but to the entire community. Is this the sort of encouragement we can expect from the Congress Government ? I request the Hon'ble Minister to rectify the irregularities, if any, particularly in the light of the Beerappa Committee report which provides that for six months an officer can be directly appointed and afterwards their appointments can be regularised. I would also request the Hon'ble Minister to examine the Cadre and Recruitment Rules so as to fit in these people. When you are speaking so much about the scheduled castes why do you want these officers to revert back ?

Several things are said about the hostels. The Education Department was running these hostels and the scheduled caste students were getting Rs. 31. The Social Welfare Department came forward to open more hostels and also took over the existing hostels from the Education Department ; but they have reduced the grant to Rs. 18 per student. When prices of every article is soaring high, how can you expect these poor students to live on Rs. 18 ? You have yourself realised that prices have gone up and you have given an increase of Rs. 5 in the case of your employees. In the same way should you not see that the amount of Rs. 18 given to these students is also enhanced ? Instead of starting more hostels it is better if the Government gives more and more facilities to the existing students.

Regarding the landless agriculturists, I wish to say that in Bangarapet Taluk itself there are nearly 1,200 agriculturists who are without lands. I understand that nearly 2,500 acres of land are available for cultivation. From 1960 uptill now 103 persons have been sanctioned land but I do not know what happened to others. The Social Welfare Department should take initiative and see that all cultivable lands are given to the people who are landless and in this way you can really help the Scheduled Castes and Scheduled Tribe people.

Regarding drinking wells, the Hon'ble Minister has said that out of 96 villages in Bangarpet Taluk only 10 villages have drinking wells up to this day. When this is the case, how are you going to provide facilities to improve the position of the Scheduled Caste? I request the Minister to provide more funds at least for drinking wells.

†ಶ್ರೀ ಬಿ. ಬಸವಯ್ಯ (ಕೊಳ್ಳೇಗಾಲ).—ಮಾನ್ಯ ಅಧ್ಯಕ್ಷರೇ; ಈ ದಿವಸ ಸರಕಾರ ಮಂಡಿಸಿರತಕ್ಕ ಈ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮೊದಲನೆಯುದಾಗಿ ಈ ಸಮಾಜಕಲ್ಯಾಣದ ಬೇಡಿಕೆಗೆ ಸಂಬಂಧಪಟ್ಟ ಹಣ ಹೋದ ವರ್ಷ ಮತ್ತು ಅದಕ್ಕೆ ಹಿಂದಿನ ವರ್ಷ 40 ರೂರಲ್ ಡೆವಲಪ್ ಎನ್ನುವ ಬಾಬನಲ್ಲಿ ಸೇರಿತ್ತು, ಈಚೆಗೆ ಬೇರೆ ಹೆಡ್‌ಗೆ ವರ್ಗ ಮಾಡಿದ್ದಾರೆ, ಇದು ಪ್ರಮೋಷನ್ನೋ ಡಿಮೋಷನ್ನೋ ಗೊತ್ತಿಲ್ಲ. ಗ್ರಾಮಾಭಿವೃದ್ಧಿಯ ಜೊತೆಗೆ ಸೇರಿಸುವುದಕ್ಕೆ ಒಂದು ಆಧಾರವಿತ್ತು. ಹೇಗೆಂದರೆ ಹರಿಜನರ ಉದ್ಧಾರ ಮತ್ತು ಗ್ರಾಮಾಂತರಗಳ ಉದ್ಧಾರ ಎರಡೂ ಒಂದೇ. ಹರಿಜನರ ಉದ್ಧಾರ ಮತ್ತು ಗ್ರಾಮಾಂತರದ ಉದ್ಧಾರ ಎರಡಕ್ಕೂ ಹೊಂದಿಕೊಂಡು ಚನ್ನಾಗಿ ಅರ್ಥವಾಗುತ್ತಿತ್ತು. ರೆಸ್ಕ್ಯೂ ಹೋಮ್ಸ್, ರಿಮ್ಯಾಂಡ್ ಹೋಮ್ಸ್ ಮುಂತಾದ ಬಾಬುಗಳಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ಎಷ್ಟೆಷ್ಟು ಖರ್ಚಾಗುತ್ತದೆ ಎನ್ನುವುದು ಚೆನ್ನಾಗಿ ಗೊತ್ತಾಗುವುದಿಲ್ಲ; 39 ಮಿಸಿಲೇನಿಯಸ್‌ನಲ್ಲಿ 67,78,651 ರೂಪಾಯಿ ಎಂದು ಹೇಳಿದ್ದಾರೆ. ಇದರಲ್ಲಿ ಯಾವ ಯಾವ ಕಾರ್ಯಕ್ರಮಗಳು ಸೇರಿವೆ, ಅದರಲ್ಲಿ ಹರಿಜನರಿಗೆಷ್ಟು ಗಿರಿಜನರಿಗೆಷ್ಟು ಎನ್ನುವುದು ಗೊತ್ತಾಗುವುದಿಲ್ಲ.

ಈ ಸಂಬಂಧವಾಗಿ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಸರಕಾರದವರು 440 ಲಕ್ಷ ರೂಪಾಯಿನ ಯೋಜನೆಯನ್ನು ಮಾಡಿದ್ದಾರೆ. ಈ ವರ್ಷದ ಬಡ್ಜೆಟ್‌ನಲ್ಲಿ 142 ಲಕ್ಷ ರೂಪಾಯಿ ಒದಗಿಸಿದ್ದಾರೆ. ಇದರಲ್ಲಿ ಹತ್ತೂವರೆ ಲಕ್ಷ ಸಿಬ್ಬಂದಿಗೆ ಖರ್ಚಾಗುತ್ತದೆ. ವಿದ್ಯಾಭ್ಯಾಸಕ್ಕಾಗಿ 54 ಲಕ್ಷ 96 ಸಾವಿರ ರೂಪಾಯಿ, ಇದರಲ್ಲಿ ಹರಿಜನರ ವಿದ್ಯಾಭಿವೃದ್ಧಿಗಾಗಿ 21 ಲಕ್ಷ, ಗಿರಿಜನರ ವಿದ್ಯಾಭಿವೃದ್ಧಿಗೆ 2 ಲಕ್ಷದ 88 ಸಾವಿರ, ಇತರ ಹಿಂದುಳಿದ ವರ್ಗಗಳಿಗೆ ಮೂರೂವರೆ ಲಕ್ಷ 22 ಲಕ್ಷ ಎಂದು ಹೇಳಿದ್ದಾರೆ. ಇದರ ಬಗ್ಗೆ ಕೆಲವು ಸೂಚನೆಗಳನ್ನು ಕೊಡುವುದಕ್ಕೆ ಮುಂಚೆ ಇದರ ಹಿನ್ನಲೆಯನ್ನು ಸ್ವಲ್ಪ ಹೇಳಲಿಚ್ಛಿಸುತ್ತೇನೆ. 1930 ರಿಂದ ಇಂಡಿಯಾ ದೇಶದಲ್ಲಿ ಹರಿಜನರ ಅಭಿವೃದ್ಧಿಯ ಪ್ರಸ್ತಾಪ ಬಂತು. ಇಂಗ್ಲೆಂಡಿನಲ್ಲಿ ದುಂಡು ಮೇಜಿನ ಪರಿಷತ್ತು ನಡೆಯಿತು. ಆಗ ಆಂಗ್ಲೇಯರನ್ನು ಒಂದು ಪ್ರಶ್ನೆ ಕೇಳಿದರು. ನೀವು 150 ವರ್ಷಕಾಲ ನಮ್ಮ ದೇಶವನ್ನು ಆಳಿದರೂ ಕೂಡ ಹಿಂದೆ ಹರಿಜನರು ದೇವಸ್ಥಾನಗಳಿಗೆ ಹೋಗುತ್ತಿರಲಿಲ್ಲ, ಸಾರ್ವಜನಿಕ ಬಾವಿಗಳಲ್ಲಿ ನೀರು ತೆಗೆದುಕೊಳ್ಳುತ್ತಿರಲಿಲ್ಲ, ಈ ಹೊತ್ತು ಹೋಗುತ್ತಿದ್ದಾರೆಯೆ, ಈ ಹೊತ್ತು ಸಾರ್ವಜನಿಕ ಬಾವಿಗಳಲ್ಲಿ ನೀರು ತೆಗೆದುಕೊಳ್ಳುತ್ತಿದ್ದಾರೆಯೆ, ಸಾರ್ವಜನಿಕ ಶಾಲೆಗಳಿಗೆ ಇತರ ಮಕ್ಕಳು ಹೋಗುತ್ತಿದ್ದಾರೆಯೆ ಎಂದು ಕೇಳಿದರು. ಇನ್ನು ಮುಂದೆ ಹೇಳುವುದಿಲ್ಲ. ಸ್ವಾತಂತ್ರ್ಯ ಬಂದ ಹದಿನೇಳು ವರ್ಷಗಳ ನಂತರ ನಾನು ಕೇಳುತ್ತಿದ್ದೇನೆ—ನಮ್ಮ ಮಕ್ಕಳು ಎಲ್ಲರಂತೆ ಸ್ಕೂಲುಗಳಿಗೆ ಹೋಗುತ್ತಿದ್ದಾರೆಯೆ, ನಮ್ಮ ಜನರು ಸಾರ್ವಜನಿಕ ಬಾವಿಗಳಿಗೆ ಹೋಗಿ ನೀರು ಕುಡಿಯುತ್ತಿದ್ದಾರೆಯೇ, ದೇವಸ್ಥಾನಗಳಿಗೆ ಹೋಗುತ್ತಿದ್ದಾರೆಯೆ ಎಂದು ಕೇಳುತ್ತೇನೆ. ನಮ್ಮ ರಾಜ್ಯಾಂಗದಲ್ಲೇನೋ ಇದಕ್ಕೆಲ್ಲ ಅವಕಾಶ ಮಾಡಿದ್ದಾರೆ. ಆದರೆ ಈ ಅವಕಾಶವನ್ನು ಇವರು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿದೆಯೋ ಎನ್ನುವುದನ್ನು ನೋಡಬೇಕು. ದೇವಸ್ಥಾನ ಪ್ರವೇಶದ ವಿಚಾರದಲ್ಲಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕುದೇರಿನಲ್ಲಿ ನಮ್ಮ ಜನರು ದೇವಸ್ಥಾನಕ್ಕೆ ಹೋಗುವುದಕ್ಕೆ ಪ್ರಯತ್ನಪಟ್ಟಾಗ ಒಂದು ದೊಡ್ಡ ಘರ್ಷಣೆಯೇ ಆಯಿತು. ಹಿಂದಿನ ಗೃಹ ಮಂತ್ರಿಗಳು ನೂರು ಜನರ ಮೇಲೆ ಮೊಕದ್ದಮೆ ಹೂಡಿ ಎರಡು ವರ್ಷಕಾಲ ಪ್ರಯತ್ನಪಟ್ಟರು. ನಂಜನಗೂಡು ತಾಲ್ಲೂಕಿನಲ್ಲಿ ಒಂದು ಸ್ಕೂಲಿಗೆ ಒಬ್ಬ ಹರಿಜನ ಉಪಾಧ್ಯಾಯರನ್ನು ಪೋಸ್ಟ್ ಮಾಡಿದರು. ಅಲ್ಲಿದ್ದ ಉಪಾಧ್ಯಾಯರು ಮೊದಲೇ ರಿಲೀವ್ ಆಗಿದ್ದುದರಿಂದರಿಂದ ಪಂಚಾಯತಿ

(ಶ್ರೀ ಬಿ. ಬಸವಯ್ಯ)

ಚೇರ್ಮನ್‌ಗೆ ಇವರು ಡ್ಯೂಟಿ ರಿಪೋರ್ಟ್ ಕೊಟ್ಟು ಅವರಿಂದ ಚಾರ್ಜು ತೆಗೆದುಕೊಳ್ಳಬೇಕಾಯಿತು. ಆಗ ಆತ ತಾನು ಪಂಚಾಯಿತಿ ಚೇರ್ಮನ್ ಕೂಡ ಆಗಿದ್ದೇನೆ, ನಾನು ನಿನ್ನನ್ನು ಡ್ಯೂಟಿಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆಗ ಡಿಸ್ಟ್ರಿಕ್ಟ್ ಆಫೀಸರಿಗೆ ಬರೆದ ಮೇಲೆ ಅಲ್ಲಿಂದ 50 ಮೈಲಿ ದೂರದಲ್ಲಿರುವ ಇನ್ನೊಂದು ಊರಿಗೆ ಆತನನ್ನು ಹಾಕಿದರು. ಮೂರನೆಯದಾಗಿ, ಕಾಮನ್ ವೆಲ್ಸ್ ಅಥವಾ ಸಾರ್ವಜನಿಕ ಬಾವಿಗಳ ವಿಚಾರ ಹೇಳಬೇಕೆಂದರೆ, ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಈ ವಿಷಯದಲ್ಲಿ ಪ್ರಯತ್ನ ಪಟ್ಟರು, ಅದರ ಫಲವೇನಾಯಿತು ಎನ್ನುವುದು ಅನೇಕರಿಗೆ ಗೊತ್ತಿರುವ ವಿಷಯ. ಹೀಗೆ ರಾಜ್ಯಾಂಗದಲ್ಲಿ ಏನಿದೆಯೋ ಅದು ಪುಸ್ತಕದ ಭರವಸೆಯಾಗಿದೆಯೇ ವಿನಾ ಅದು ದೊರಕಿಲ್ಲ ಮತ್ತು ದೊರಕುವುದು ಕಷ್ಟ. ಅದನ್ನು ದೊರಕಿಸಿಕೊಳ್ಳುವುದಕ್ಕೆ ಒಂದುವೇಳೆ ಹರಿಜನರು ಪ್ರಯತ್ನ ಪಟ್ಟರೆ ಅವರು ಹಿಂಸೆಗೊಳಗಾಗಬೇಕಾಗುತ್ತದೆ. ಇದಕ್ಕೊಂದು ನಿದರ್ಶನವನ್ನು ಹೇಳುತ್ತೇನೆ. ಶ್ರೀರಂಗಪಟ್ಟಣದ ಹತ್ತಿರ ಒಂದು ಹಳ್ಳಿಯಲ್ಲಿ ನಡೆಯುವ ಮಾರಿ ಹಬ್ಬದಲ್ಲಿ ಹರಿಜನರು 4 ಗಂಟೆಯವರೆಗೂ ಇದ್ದು ಅನ್ನವನ್ನು ತೆಗೆದುಕೊಂಡು ಹೋಗುವ ಪದ್ಧತಿ ಇದೆ. ಆಮೇಲೆ ಹೋದರು ನಾಲ್ಕು ಜನರು. ಅವರನ್ನು ತಡೆದು ಒಂದು ಘರ್ಷಣೆಯಾಗಿ 16 ಜನರನ್ನು ಆಸ್ಪತ್ರೆಗೆ ಹಾಕಿದರು. ಆ ತಾಲ್ಲೂಕಿನಲ್ಲಿ ಸಾರ್ವಜನಿಕ ಸಹಾನುಭೂತಿ ಸಹಕಾರ ಕೂಡ ಇಲ್ಲ. ಇತ್ತೀಚೆಗೆ ನಡೆದ ಕೆಲವು ಘಟನೆಗಳನ್ನು ಹೇಳುತ್ತೇನೆ. ಹಳೆಯ ಭಾವನೆಗಳು ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿಲ್ಲ, ಪಟ್ಟಣಗಳಲ್ಲಿ ಹೊರಟು ಹೋಗಿದೆ ಎಂಬ ಒಂದು ವಾದವಿದೆ. ನಮ್ಮ ದೇಶದಲ್ಲಿ ಉಪಾಧ್ಯಾಯರಿಗೆ ಮರ್ಯಾದೆ ಉಂಟು. ಬೆಂಗಳೂರಿನ ಕಾಲೇಜಿನಲ್ಲಿ ನಮ್ಮವರೊಬ್ಬರು ರೀಡರ್ ಇದ್ದಾರೆ. ಅವರಿಗೆ ಬಾಡಿಗೆಗೆ ಮನೆ ಬೇಕಾಯಿತು. ಮೆಡಿಕಲ್ ಕಾಲೇಜಿನಲ್ಲಿದ್ದ ಒಬ್ಬರು ರೀಡರ್ ಅವರ ಮನೆಯನ್ನು ಗೊತ್ತು ಮಾಡಿ ಅವರ ಸಂಬಂಧವಾಗಿ ಒಪ್ಪಂದವನ್ನು ಬರೆಯುತ್ತಿದ್ದಾಗ ಇವರು ಹರಿಜನರೆಂದು ಹೇಳಿದ ಮೇಲೆ, ಇವರಿಗೆ ತಮ್ಮ ಮನೆಯನ್ನು ಕೊಡುವುದಕ್ಕೊಪ್ಪದೆ ಒಪ್ಪಂದವನ್ನು ಬರೆಯುತ್ತಿದ್ದ ಕಾಗದವನ್ನು ಹರಿದು ಹಾಕಿದರು. ಈ ವಿಷಯದಲ್ಲಿ ಅವರು ದೂರು ಕೊಟ್ಟರು, ಅದರ ಮೇಲೆ ಸರಕಾರ ಹಾಗೂ ಅಧಿಕಾರಿಗಳು ಏನು ಕಾರ್ಯಕ್ರಮ ತೆಗೆದುಕೊಂಡರು ಎನ್ನುವುದು ಬೇರೆ ವಿಷಯ. ಹಿಂಸೆ ಯಾವ ರೀತಿ ಪ್ರಾರಂಭವಾಗುತ್ತದೆಂಬುದನ್ನು ನೋಡಿ. ಹೀಗೆ ಅವರು ದೂರು ಕೊಟ್ಟಮೇಲೆ ಆ ಕಾಲೇಜಿನಲ್ಲಿ ಅವರಿಗೆ ಕಷ್ಟವಾಗಿದೆ. ಅನೇಕ ಅಧಿಕಾರಿಗಳು ಅವರಿಗೆ ಹಿಂಸೆ ಕೊಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದುದರಿಂದ ರಾಜ್ಯಾಂಗದಲ್ಲಿರಲಿ ಮತ್ತೊಂದರಲ್ಲಿರಲಿ ಹರಿಜನರು ತಮ್ಮ ಸಾಮಾಜಿಕ ಹಕ್ಕುಬಾಧ್ಯತೆಗಳನ್ನು ದೊರಕಿಸಿಕೊಳ್ಳಬೇಕಾದರೆ ಎಷ್ಟೋ ಶ್ರಮವಿದೆ. ಇದಕ್ಕಾಗಿ ವ್ಯಾಜ್ಯ ಮಾಡಿ, ಶ್ರಮ, ಧನ, ಕಾಲ ಎಲ್ಲವನ್ನೂ ವ್ಯರ್ಥ ಮಾಡಬಹುದೆ ಎಂದು ಜಿಗುಪ್ಸೆಗೊಳ್ಳುತ್ತಾರೆ. ನನ್ನ ಕ್ಷೇತ್ರದಲ್ಲಿ ಹಿರಿಯೂರು ಎಂದು ಒಂದು ಹಳ್ಳಿ ಇದೆ ಅಲ್ಲಿ ಗ್ರಾಮ ದೇವತೆಯ ಪ್ರದಕ್ಷಿಣೆ ಊರಿನಲ್ಲಾಗುತ್ತದೆ. ಆ ಸಮಯದಲ್ಲಿ ಹರಿಜನರು ತೆಂಗಿನಕಾಯಿಯನ್ನು ಕೈಯಲ್ಲಿ ಕೊಡುತ್ತಿದ್ದರು, ಹೋದಸಾರಿ ತಟ್ಟೆಯಲ್ಲಿ ಕೊಟ್ಟರು. ಉತ್ಸವ ಅಲ್ಲೇ ನಿಂತು ಗಲಾಟೆ, ಜಗಳ ಎಲ್ಲವೂ ಆಯಿತು. ಒಟ್ಟಿನಲ್ಲಿ ಏಕೆ ಸಾರ್ವಜನಿಕರ ಮತ್ತು ಸರಕಾರದ ಬೆಂಬಲ ಮತ್ತು ಸಹಕಾರ ಕಡಮೆಯಾಗುತ್ತಿದೆ ಎಂದು ನನಗೆ ಶಂಕೆಯಾಗುತ್ತದೆ. ಈ ವಿಚಾರದಲ್ಲಿ ಸರಕಾರ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದರೆ, ಗಮನ ಕೊಟ್ಟಿದ್ದರೆ ಇಷ್ಟು ನಡೆಯುತ್ತಿರಲಿಲ್ಲವೆಂದು ನನಗನ್ನಿಸುತ್ತದೆ.

3-00 P.M.

ಮೈಸೂರು ಪಟ್ಟಣದಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ಹೇಳಲು ಬಯಸುತ್ತೇನೆ. ಹರಿಜನರಿಗಾಗಿ ಮೈಸೂರು ಪಟ್ಟಣದಲ್ಲಿ ಒಂದು ಕಡೆ ಅಶೋಕಪುರ ಎಂಬ ಪ್ರದೇಶ ಇದೆ. ಅಲ್ಲಿ ಹರಿಜನರು ಅನೇಕ ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅವರಿಗೆ ಸರಿಯಾದ ವಸತಿ ಸೌಕರ್ಯವಿಲ್ಲ ಕೋಟೆ ಹಳೇ ಗೋಡೆ ಇವರಿಗೆ ರಕ್ಷಣೆ ಕೊಡಲು ಮನೆ ಗೋಡೆಯಾಗಿದೆ. 1904 ರಲ್ಲಿ ಹರಿಜನ ವಸತಿಗಾಗಿ ಈ ಪ್ರದೇಶ ತೆಗೆದುಕೊಳ್ಳಲಾಗಿದೆ. ಇದುವರೆಗೆ ಅಲ್ಲಿ ಯಾವ ಸೌಕರ್ಯ ಒದಗಿಸಿಲ್ಲ. ಪ್ರದೇಶ ಶುಚಿಯಾಗಿಲ್ಲ. ಮೈಸೂರು ನಗರ ಮುನಿಸಿಪಾಲಿಟಿ ಸದಸ್ಯರು ಇದನ್ನು ನೋಡುತ್ತಾ ಇದ್ದರೂ ಕೂಡ ಸುಧಾರಣೆ ಮಾಡುವುದಕ್ಕೂ, ಶುಚಿಯಾಗಿ ಇಡುವುದಕ್ಕೂ ಯಾವ ಕ್ರಮ ತೆಗೆದುಕೊಳ್ಳದೇ ಇರುವುದು ಬಹಳ ಶೋಚನೀಯವಾದುದು. ಈ ಹರಿಜನರ ಕೇರಿಯ ಬಗ್ಗೆ ಗಮನ ಕೊಡದೇ ಇರುವುದು ಸರಿಯಲ್ಲ. ನಿಜವಾಗಿಯೂ ಎಷ್ಟು ಡಿಸ್ಕ್ರಿಮಿನೇಷನ್ ನಡೆ

ಯುತ್ತಾ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ. ನಿಜವಾಗಿಯೂ ಇದು ಬಹಳ ವಿಷಾದಕರವಾದುದು. ಇದಕ್ಕೆ ಕೂಡಲೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri B. R. SUNTHANKAR (Belgaum City).—Mr. Speaker, Sir, I wish to make a few observations on the demand for Forests. I do not wish to enter into the wilderness of social welfare. I would prefer the wilderness of the jungle. Mysore is one of the fortunate States in India which has got rich forests. The State abounds in forest wealth, but unfortunately the forest resources are not being properly exploited. I would say they are not being exploited even to an appreciable extent. The revenue from forests has increased in recent years. Similarly the expenditure also has increased, but there has been proportionately more increase in expenditure. As the A.G.R. Committee has pointed out, the revenue of our forests is Rs. 8 per acre. This revenue is verymuch low. The neighbouring State of Kerala gets a revenue of Rs. 13 per acre from forests. Looking to the wealth of our forests the revenue can be increased two to three-fold. There is necessity to make all-out efforts to utilize the forest resources to the fullest extent. The Forest Department should make concentrated efforts to do this There has been too much depletion of forest wealth in the past. There are various reasons for that. During the second world war forest was exploited indiscriminately. There is also demand for land from cultivators. Similarly, large areas of forest are being submerged in some of the projects. Then there is the question of rehabilitation of displaced persons and some forest lands will have to be released for their rehabilitation. For all these reasons there has been too much depletion of forest in the past and so there is urgent necessity for afforestation on a large scale. I do not say that there has been no afforestation, but the forest that is depleted has not only to be replenished, but along with it new forest will have to be developed. The present rate of afforestation is low as compared with the vastness of the problem. As pointed out by the A.G.R. Committee, the rate of afforestation should be accelerated so that the target of one lakh additional acres each year would be achieved. There is a vast scope for developing the forest in our State. When-ever we pass through railways or travel by roads we come across vast stretches of barren and waste lands. These lands can be converted and developed into fruitful forest within a short period of time. For that systematic planning is required. For that schemes for developing trees wherever possible on such barren and waste lands should be adopted, and followed up vigorously. Similarly, the development of village forests should be taken up. This is at present neglected or it is not being given as much attention as it deserves. There is necessity of fuel plantation. Fuel has become an acute problem for our cultivators. The main source of fuel of the cultivators in the rural areas is cow-dung which can be used as farmyard manure. In our country millions and millions of tons of farmyard manure are being consumed as fuel, and lakhs of tons of nitrogens is lost in burning. If this used as farmyard manure it would be very valuable for improvement of agriculture. For that this fuel difficulty of the

(SRI B. R. SUNTHANKAR)

farmers will have to be solved permanently. With a long range programme the village forests can be developed and emphasis will have to be laid on this programme. Each village should have a forest of its own which will cater to the needs of the population in the village. That is very essential.

Then, the Forest Department has been over-spending. This is one of the departments which has been spending in excess. In spite of that, if we look to the achievements they are not quite commensurate with the excess expenditure. Sir, if we look at the achievements in the schemes of Third Five-Year Plan which are supplied to us in this book, we see, Sir, the targets in a number of schemes are not reached at all. The most important thing is rationalisation of the use of timber. That is the most important thing as regards forests. Sir, there is a great demand for timber and the replacement of timber is bound to be slow in a way. Under the circumstances, the maximum use of timber we have got will have to be made. For this, Sir, science and technology comes to our help. Sir, the timber that is available should be processed scientifically. Seasoning, logging and treating of timber will have to be followed vigorously. It is the experience in America, that treated timber can replace even steel. Particularly, Sir, when there is great demand for steel and there is shortage of steel supply in our country, timber can be fruitfully used wherever it is possible. Sir, there are schemes in the Third Five-Year Plan regarding preservation of wood and treatment of wood, but the progress is very slow. The programme of preservation of wood will have to be speeded up and upgraded. Another thing is, there is wastage of timber in transit and also in storing by pests like white ants. Remedies will have to be found and steps will have to be taken to prevent this wastage and for this wastage and for this, wood preservation on large scale will have to be undertaken. Scientific and technical knowledge will have to be fully availed of. Then there is another question which is not properly looked into by the Forest Department. That is regarding the development of minor forests. This type of forest development is most important and more attention will have to be paid to this aspect and more concentrated effort has to be put in. Some work has been started in respect of this aspect of developing minor forests. But this will have to be stepped up. There is enormous scope for plantation of medicinal plants. I may quote here Sarpagandha plant. This is a very important medicinal plant and there is great demand for this plant in America. That also will prove to be a dollar earning plant. There is much scope for developing Sarpagandha plantation. In the report that has been given to us, there is no mention anywhere regarding plantation of Sarpagandha. Similarly, there is scope for developing plantation in respect of plants yielding essential oils, resins, foatty oils, waxes etc, plants yielding chlorofill and plants yielding catechu and like. The development of all these plants can help to promote forest industries, and also rural industries in forest areas.

These forests can be put to industrial use. Sir, these forest products can be friutfully harnessed for industrial purposes and for all this, one thing is very necessary and that is a comprehensive forest survey. That is not being undertaken. There has been a survey in some respects, but not a comprehensive forest survey. Forest survey is necessary to assess forest resources of the State and to explore the possibilities of developing these resources and finally to utilise these resources for industrial purposes. Such a survey is quite essential, Sir. I will now come to my last point, *i.e.*, about forest communications. There is a scheme in the Third Five-Year Plan regarding forest communications. But that scheme is not being properly followed up. The achievements are very poor. There is great necessity of developing forest communications especially in the interior. New roads will have to be constructed if we are to tap the forest resources in the interior. Similarly, the existing roads are not being taken care of properly or they are not being properly maintained. I may quote for example forest roads in my area in Khanapur taluka. They were maintained by the former District Boards. Now the District Boards are abolished and we find those roads are utterly neglected. Sir, I would request the Hon'ble Minister to look into the matter and see that the existing forest roads are well-maintained. With these words, I have done.

† ಶ್ರೀ ಎಂ. ಎನ್. ಕೃಷ್ಣಸಿಂಗ್ (ಜಗಳೂರು).—ಸ್ವಾಮಿ ಅಧ್ಯಕ್ಷರೆ, ನಮ್ಮ ಮುಂದಿರತಕ್ಕ 1964-65ನೇ ಸಾಲಿನ ಬೇಡಿಕೆಗಳನ್ನು ಅನುಮೋದಿಸುತ್ತಾ ಸರಕಾರಕ್ಕೆ ಕೆಲವು ಸಲಹೆಗಳನ್ನು ತಿಳಿಸಲು ಇಚ್ಛಿಸುತ್ತೇನೆ.

ಇದುವರೆಗೆ ಹರಿಜನ ಮತ್ತು ಗಿರಿಜನರ ಬಗ್ಗೆ ಮಾತನಾಡಿದ ನನ್ನ ಮಾನ್ಯ ಸ್ನೇಹಿತರು, ಸರಕಾರದಿಂದ ಅವರಿಗೆ ಯಾವ ವಿಧವಾದ ಅಷ್ಟು ಹೆಚ್ಚಿನ ಸಹಾಯ ದೊರೆತಿಲ್ಲ ಎಂದು ಬಹಳ ವಿಷಾದದಿಂದ ತಿಳಿಸಿದರು; ಅವರ ಪೈಕಿ ನಾನೂ ಒಬ್ಬ ಅಂತ ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಸತ್ಯಕ್ಕೂ ಈಗ ಹರಿಜನರಿಗಿಂತ ಗಿರಿಜನರು ದುಸ್ಥಿತಿ ಬಹಳ ಅಧೋಗತಿಗೆ ಹೋಗಿದೆ. ಮೊದಲನೆಯದಾಗಿ ಅವರ ವಿದ್ಯಾಭ್ಯಾಸಕ್ಕೆ ಸರಕಾರ ಒಂದು ಹೆಚ್ಚಿನ ಬೆಂಬಲ ಕೊಡಬೇಕು. ಇದರಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಬಹಳ ಮುಖ್ಯವಾದುದು ಇಲ್ಲಿ ಕಾಲೇಜಿಗೆ ಎಷ್ಟೋ ಕೊಟ್ಟಿದ್ದೀರಿ; ಹೈಸ್ಕೂಲುಗಳಿಗೂ ನೆರವು ಸಿಗುತ್ತಾ ಇದೆ. ಆದರೆ ಅವುಗಳಿಗಿಂತ ಪ್ರಾಥಮಿಕ ಶಾಲೆಗಳು ಬಹಳ ಮುಖ್ಯ, ಅದು ವಿದ್ಯಾಭ್ಯಾಸದ ಮೊದಲನೆಯ ಮೆಟ್ಟಲು. ಅವರು ಈ ಮೊದಲನೆಯ ಮೆಟ್ಟಲಿನಿಂದ ಸಾಗಿದರೆ ಮುಂದೆ ಅವರು ವಿದ್ಯಾವಂತರಾಗುವ ಸಮಸ್ಯೆ ಪರಿಹಾರವಾಗುತ್ತದೆ. ಅದರ ಬಗ್ಗೆ ಸರಕಾರ ಹೆಚ್ಚಿನ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಒಂದು ಗಿರಿಜನರು ಯಾವಾಗಲೂ ಗುಡ್ಡಗಾಡಿನಲ್ಲೇ ವಾಸಮಾಡತಕ್ಕ ಜನ. ಅವರಿಗೆ ಸರಕಾರದವರು ಕೇಳತಕ್ಕ ಕಾಂಟ್ರಿಬ್ಯೂಷನ್ ಕೊಡುವುದಕ್ಕೆ ಸಾಧ್ಯವಿಲ್ಲದೆ, ಅವರಿಗೆ ಯಾವ ಶಾಲೆಯೂ ಕೂಡ ಆಗುತ್ತಿಲ್ಲ. ಅವರಿಗೆ ಅಷ್ಟು ಹಣವನ್ನು ಕೊಡುವುದಕ್ಕೆ ಶಕ್ತಿ ಇಲ್ಲ, ಅವರ ಮಕ್ಕಳು ವಿದ್ಯಾವಂತರು ಆಗುವುದಿಲ್ಲ, ಅವರಿಗೆ ಗತಿ ಎಂದರೆ ಕಾಡು, ಅವರಿಗೆ ಕಾಡೇ ಗತಿ ಆಗುವುದರಲ್ಲಿ ಸಂಶಯವೇ ಇಲ್ಲ. ಇನ್ನು ಮುಂದೆ ಪ್ರತಿಯೊಂದು ಗಿರಿಜನರ ಕಾಲೋನಿಗಳನ್ನೂ ಸರಕಾರದವರೇ ವಹಿಸಿಕೊಂಡು ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ನೆರವಾಗಬೇಕೆಂದು ಅನನ್ಯ ಭಕ್ತಿಯಿಂದ ನಾನು ಕೇಳಿಕೊಳ್ಳುತ್ತೇನೆ. ಅಷ್ಟೇ ಅಲ್ಲದೇ ಅವರ ಮಕ್ಕಳಿಗೆ ಹಾಸ್ಟೆಲ್‌ಗಳು ಇಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲೂ ಇರತಕ್ಕ ಜಾತೀಯ ಹಾಸ್ಟೆಲ್‌ಗಳನ್ನು ಜನರಲ್ ಹಾಸ್ಟೆಲ್‌ಗಳನ್ನಾಗಿ ಮಾಡಿ ಅವರ ವಿದ್ಯಾಭ್ಯಾಸಕ್ಕೆ ನೆರವು ಆಗಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಎರಡನೆಯದಾಗಿ ಹರಿಜನ ಗಿರಿಜನರ ಮಕ್ಕಳ ಸರ್ವೀಸ್ ಬಗ್ಗೆ ಹೇಳುವುದಾದರೆ 17 ಜನ ಸೋಷಿಯಲ್ ವೆಲ್‌ಫೇರ್ ಅಧಿಕಾರಿಗಳ ಬಗ್ಗೆ ಎಲ್ಲರೂ ಕೂಡ ಈ ಸಭೆಯಲ್ಲಿ ಹೇಳಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನಾನಾ ಇಲಾಖೆಗಳವರು ಏನಾದರೂ ಒಂದು ವೇಕೆನ್ಸಿಗೆ ಅಭ್ಯರ್ಥಿಗಳನ್ನು ಕೇಳಿದರೆ ಅವರು ಯಾರನ್ನು ಕೇಳುತ್ತಾರೆಯೋ ಅಂತಹವರನ್ನು ಕಳುಹಿಸುತ್ತಾರೆಯೇ ಹೊರತು ಸುಪ್ರೀಂ ಕೋರ್ಟ್ ತೀರ್ಮಾನವಾಗಿ 18 ಪರ್ಸೆಂಟ್ ಹರಿಜನ ಗಿರಿಜನರಿಗೆ ಯಾವ ಒಂದು ಅವಕಾಶ

(ಶ್ರೀ ಎಂ. ಎನ್. ಕೃಷ್ಣಸಿಂಗ್)

ಕೊಡಬೇಕೆಂದು ಆಗಿದೆ ಅವನ್ನು ಗಮನದಲ್ಲಿ ಇಟ್ಟುಕೊಂಡು ಸ್ಥಾನಗಳಿಗೆ ಭರ್ತಿ ಮಾಡುವುದಕ್ಕೆ ಅವರು ಗಮನವನ್ನು ಕೊಡುವುದಿಲ್ಲ. ಆದ್ದರಿಂದ ಈ ಬಗ್ಗೆ ಒಂದು ಆದೇಶವನ್ನು ಸರಕಾರದವರು ಕೊಡಬೇಕೆಂದು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಹರಿಜನರ ಪಟ್ಟಿ ಬಂದ ಮೇಲೆ ಕೊಡು ತ್ತೇವೆ ಎಂದು ಹೇಳುತ್ತಾರೆ ಇದನ್ನು ತಪ್ಪಿಸಬೇಕು.

ಅನಂತರ ಲಂಬಾಣಿ ಸಮಾಜದವರ ಬಗ್ಗೆ ಬಹಳ ವಿಷಾದದಿಂದ ಹೇಳಬೇಕಾಗಿದೆ, ಅವರ ಆಹಾರ, ಅವರ ಉಡುಪು, ಅವರ ಆಭರಣಗಳನ್ನು ನೋಡಿದರೆ ಎಂತಹ ಮಾನವನಿಗೂ ಕಣ್ಣೀರು ಬರುವಂತಹ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ಇದು ದೈವ ನಿಯಮ ಎಂದು ಕಾಣುತ್ತದೆ, ಅಥವಾ ಅವರ ಕರ್ಮವೋ ಗೊತ್ತಿಲ್ಲ. ಆದ್ದರಿಂದ ಅವರಿಗಾಗಿಯೇ ಪ್ರತ್ಯೇಕವಾಗಿ ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿ ಯಾವ ಯಾವ ಗುಡ್ಡ ಗಾಡಿನಲ್ಲಿ ಈ ಜನ ವಾಸ ಮಾಡುತ್ತಾ ಇದ್ದಾರೆ ಅವರ ಜನಸಂಖ್ಯೆ ಎಷ್ಟು ಇದೆ ಎಂಬುದನ್ನು ತಿಳಿದುಕೊಂಡು ಅವರಿಗೆ ಸೂಕ್ತ ರೀತಿಯಲ್ಲಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕು. ನಾನು ಅವರ ಜನಸಂಖ್ಯೆ ಏನಿದೆ ಎಂಬುದನ್ನು ಕಳೆದ ಸಾಲಿನಿಂದ ಕೇಳುತ್ತಾ ಇದ್ದೇನೆ ಸರಿಯಾದ ಉತ್ತರ ಬಂದಿಲ್ಲ, ಬಂದರೂ ಕೂಡ ಸಮರ್ಪಕವಾದ ಉತ್ತರ ಬಂದಿಲ್ಲ, ಇನ್ನು ಮುಂದೆ ಆದರೂ ಅವರ ವಿಷಯಕ್ಕೆ ಸರಿಯಾದ ಅಧಿಕಾರಿಗಳನ್ನು ನೇಮಕ ಮಾಡಿ ಅವರ ಬಗ್ಗೆ ಬಹಳ ಮುತುವರ್ಜಿ ವಹಿಸಿ ಅವರ ಜನಾಂಗಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಸರಕಾರದವರನ್ನು ಬೇಡಿಕೊಳ್ಳುತ್ತೇನೆ.

ನಂತರ ಫಾರೆಸ್ಟ್ ಇಲಾಖೆಯವರು ಅವರಿಗೆ ಮನೆ ಕಟ್ಟುವುದಕ್ಕೆ 200 ರೂಪಾಯಿಗಳನ್ನು ಮುಫತ್ತಾಗಿ ಕೊಡುತ್ತೇವೆ ಎಂದು ಒಂದು ಸರ್ಕ್ಯುಲರ್‌ನ್ನು ಕಳುಹಿಸಿದ್ದಾರೆ. ಎಷ್ಟು ಮಟ್ಟಿಗೆ ಅದರಿಂದ ಈ ಜನಗಳಿಗೆ ಸಾರ್ಥಕವಾಗುತ್ತದೆಯೋ ನಾನು ನಂಬಲಾರೆ. ಚಿತ್ರದುರ್ಗ ಜಿಲ್ಲೆಯಿಂದ ಬಂದಿರತಕ್ಕವನು ನಾನು, ಅಲ್ಲಿ ಯಾವ ಒಂದು ಡಿಪೋ ಕೂಡ ಇಲ್ಲ, ಅವರಿಗೆ ದೊರಕುವುದು 20 ರೂಪಾಯಿಗಳ ನೆರವು ಮಾತ್ರ ಮತ್ತು ಅವರು 200 ರೂಪಾಯಿಗಳನ್ನು ಖರ್ಚು ಮಾಡಿಕೊಂಡು 200–300 ಮೈಲಿಯಿಂದ ನಾಟಾ ತರಬೇಕು. ಆದ್ದರಿಂದ ಫಾರೆಸ್ಟ್ ಇಲಾಖೆಯವರು ಚಿತ್ರದುರ್ಗ ಜಿಲ್ಲೆಗೆ ಒಂದು ಡಿಪೋ ತೆಗೆಯಬೇಕೆಂದು ಫಾರೆಸ್ಟ್ ಇಲಾಖೆಯ ಸಚಿವರನ್ನು ನಾನು ಮತ್ತೊಮ್ಮೆ ಕೇಳಿಕೊಳ್ಳುತೇನೆ.

ಈ ಜನಗಳಿಗೆ ಒಂದು ಕಾಲೋನಿ ಅಂತ ಮಾಡಿ ಕೊಟ್ಟಿದ್ದೀರಿ ಮತ್ತು ಮಾಡುತ್ತಾ ಇದ್ದೀರಿ. ನಮ್ಮ ತಾಲ್ಲೂಕಿನಲ್ಲಿ ಒಂದು ಕಾಲೋನಿ ಇದೆ, ಮೊನ್ನೆ ಒಂದು ಪ್ರಶ್ನೆ ಕೇಳಿದಾಗ 40 ಮನೆ ಇರಬೇಕೆಂದು ತೀರ್ಮಾನ ಮಾಡಿಕೊಂಡು ಇದುವರೆಗೂ 15 ಮನೆಗಳನ್ನು ಮಾತ್ರ ಮಾಡಿ ಮುಗಿಸಿದ್ದೀರಿ. 15 ಮನೆಗಳಿಗೆ ಮಾತ್ರ ಜಮೀನು ಒದಗಿಸಿದ್ದೀರಿ ಮತ್ತು 15 ಮನೆಗಳಿಗೆ ಎತ್ತು ಕೊಟ್ಟಿದ್ದೀರಿ. ಹೀಗಾಗಿ ಇನ್ನು 25 ಮನೆಗಳು ಹಾಗೆಯೇ ಇವೆ. ಅವರ ಗತಿ ಏನು ? ಅವರು ಸ್ವಂತ ಮನೆಯನ್ನು ಬಿಟ್ಟು ಬಂದು ಕಾಡಿನಲ್ಲಿ ಸೇರಿಕೊಂಡಿದ್ದಾರೆ, ಅವರಿಗೆ ಉಡಲಿಕ್ಕೆ ಸರಿಯಾದ ಬಟ್ಟೆ ಇಲ್ಲ. ಊಟಕ್ಕೆ ಸರಿಯಾದ ಆಹಾರ ಇಲ್ಲ. ಅಲ್ಲಿ ನೀರಿನ ಭಾವಿ ಇದೆ, ಅದು ಉಪ್ಪು ನೀರಿನ ಭಾವಿ, ಹೊಳೆಯಿಂದಲೋ ಕೆರೆಯಿಂದಲೋ ನೀರನ್ನು ತರಬೇಕು ಅದು ಬಹಳ ದುಸ್ತರವಾಗಿದೆ. ಇಷ್ಟನ್ನು ಹೇಳಿ, ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ನನಗೆ ಒಂದು ಅವಕಾಶವನ್ನು ಕೊಟ್ಟಿದ್ದ ಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಸ್ವಾಮಿ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇರುವ ಅರಣ್ಯ ಇಲಾಖೆಯ ವಿಚಾರವಾಗಿಯೂ ಮತ್ತು ಸೋಷಿಯಲ್ ವೆಲ್‌ಫೇರ್ ವಿಚಾರವಾಗಿಯೂ ಸಭೆಯಲ್ಲಿ ಮಾನ್ಯ ಸದಸ್ಯರು ಬಹಳ ರಚನಾತ್ಮಕ ಸಲಹೆಗಳನ್ನು ಕೊಟ್ಟಿರುತ್ತಾರೆ. ಈ ವಿಚಾರ ವಾಗಿ ನಾನು ಕೆಲವು ಸಲಹೆಗಳನ್ನು ಮಾತ್ರ ತಮ್ಮ ಮುಂದೆ ಇಡಲು ಇಷ್ಟಪಡುತ್ತೇನೆ. ಮೊನ್ನೆ ಮಾನ್ಯ ಅರಣ್ಯ ಮಂತ್ರಿಗಳವರು ಈ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗಕ್ಕೆ ಒಂದು ಮನೆಗೆ 200 ರೂಪಾಯಿಗಳನ್ನು ಕೊಡುವುದಾಗಿ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸಿರುವುದು ಬಹಳ ಸಂತೋಷಕರವಾದ ಸಂಗತಿ. ಆದರೆ ಬಯಲು ಪ್ರದೇಶದಿಂದ ಸಾಮಾನು ತರುವುದಕ್ಕೆ ಅರಣ್ಯದ ಕಡೆಗೆ ಹೋಗಬೇಕಾದರೆ 200 ಮೈಲಿ ಹೋಗಬೇಕಾಗುತ್ತದೆ ಆದ್ದರಿಂದ ಈಗ ಕೊಡುವ ಸಾಮಾನಿನ ದುಡ್ಡಿನ ಜೊತೆಗೆ ಅವನು ಇನ್ನಷ್ಟು ಖರ್ಚು ಮಾಡಬೇಕಾಗಿ ಬರುವ ಸಂಭವ ಇದೆ. ಇದಕ್ಕೆ ಸುಲಭವಾದ ಒಂದು ಉಪಾಯವನ್ನು ಮಾಡಿ ಆ ಸಾಮಾನುಗಳು ಅವರಿಗೆ ಸಿಕ್ಕುವ ಹಾಗೆ ಒಂದು ಪರಿಹಾರವನ್ನು ಕಲ್ಪಿಸಿದರೆ ಬಹಳ ಅನುಕೂಲವಾಗುತ್ತದೆ ಎಂದು ಬಹಳ ವಿನಯದಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ನಮ್ಮ ದೇಶದಲ್ಲಿ ಎಷ್ಟೋ ಕಡೆ ಬಹಳ ಜಮೀನು ಬಂಜರು ಬಿದ್ದಿದೆ, ಮತ್ತು ಅದು ಹಾಳಾಗಿ ಹೋಗುತ್ತಾ ಇದೆ. ಅಲ್ಲಿ ಸರಕಾರದವರು ಅರಣ್ಯ

ಬೆಳೆಸುತ್ತೇವೆ ಎಂದರೆ ಅದಕ್ಕೆ ನಾವೇನೂ ಅಡ್ಡಿ ಬರುತ್ತಾ ಇಲ್ಲ. ಅರಣ್ಯ ಇಲ್ಲದೇ ಸುಮ್ಮನೆ ಬಂಜರು ಬಿದ್ದಿರುವ ಜಮೀನನ್ನು ಬಹಳ ಹಿಂದುಳಿದಿರತಕ್ಕ ಜನಾಂಗಕ್ಕೆ ಕೊಟ್ಟು ಸಹಾಯ ಮಾಡಬೇಕೆಂದು ಅವರಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ.

ಸೋಷಿಯಲ್ ವೆಲ್‌ಫೇರ್ ವಿಚಾರದಲ್ಲಿ ಇಷ್ಟು ಜನಸಂಖ್ಯೆಗೆ ಇಷ್ಟು ಬಹಳ ಕಮ್ಮಿ ಗ್ರ್ಯಾಂಟ್ ಕೊಟ್ಟಿರುವುದು ಬಹಳ ದುಃಖಕರವಾದ ಸಂಗತಿ. ತಾವು ಕೊಟ್ಟಿರತಕ್ಕ ಗ್ರ್ಯಾಂಟನ್ನು ಲೆಕ್ಕಾ ಮಾಡಿದರೆ ಅವರು ಇರತಕ್ಕ ಜನಸಂಖ್ಯೆಗೆ ತಲಾ ಸರಾಸರಿ ಒಂದು ರೂಪಾಯಿ ಬೀಳುತ್ತದೆಯೋ ಇಲ್ಲವೋ. ಈ ರೀತಿ ಕೊಟ್ಟರೆ ಹೇಗೆ ಈ ಜನ ಮುಂದೆ ಬರುವುದು ಎಂದು ನಾನು ಸರಕಾರದವರಲ್ಲಿ ವಿನಯದಿಂದ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಸೋಷಿಯಲ್ ವೆಲ್‌ಫೇರ್ ಆಫೀಸರ್ ಆಗಿ ನೇಮಕ ಮಾಡುತ್ತೀರಿ ಎಂಬ ಆಶೆ ಕೆಲವರಲ್ಲಿ ಇದೆ. ಆ ರೀತಿಯ ಒಂದು ಆಶೆಯನ್ನು ಮಡಗಿ ಇಟ್ಟಿರುವಾಗ ಅವನು ಕಟ್ಟಿಕೊಂಡಿರುವ ಸಂಸಾರದವರು ಎಷ್ಟು ಕಷ್ಟಪಡುತ್ತಾರೆ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು, ಅವರ ಮಕ್ಕಳಿಗೆ ಒಂದು ದಾರಿಯನ್ನು ತೋರಿಸಿಕೊಡಬೇಕೆಂದು ಬಹಳ ವಿನಯದಿಂದ ಈ ಸಭೆಯಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸೋಷಿಯಲ್ ವೆಲ್‌ಫೇರ್ ಜನಾಂಗದಲ್ಲಿ 5-6 ಕಮ್ಯೂನಿಟಿಗಳು ಇವೆ, ಅದರಲ್ಲಿ ಬೋವಿ ಜನಾಂಗದ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ಸ್ವಾಮಿ ಈ ಜನ ದೇಶದಲ್ಲಿ ನಡೆಯತಕ್ಕ ಪ್ರತಿಯೊಂದು ರಚನಾತ್ಮಕವಾದ ಕೆಲಸಕ್ಕೂ ಎಂದರೆ ಕೆರೆ ಕಟ್ಟುವುದಾಗಲಿ ಆಣೆಕಟ್ಟು ಕಟ್ಟುವುದಾಗಲಿ, ಎರಡು ಮೂರು ಮೈಲಿ ಸುರಂಗ ಹಾಕುವ ಕೆಲಸ ಮಾಡುವುದಾಗಲಿ ಎಲ್ಲಕ್ಕೂ ಕೂಡ ಮುಂದೆ ಬಂದು ಕೆಲಸ ಮಾಡುತ್ತಾರೆ. ಇದನ್ನು ನಾನು ಹೋದದೆಲ್ಲಾ ನೋಡಿರುವ ವಿಚಾರ. ಈ ಜನಾಂಗದವರಿಗೆ ಮಾನ್ಯ ಸದಸ್ಯರು ನೋಡಿದ್ದಾರೆ ಸರಕಾರದವರು ನೋಡಿದ್ದಾರೆ. ಅವರು ಎಲ್ಲಿ ಕೆಲಸ ಮಾಡುತ್ತಾರೋ ಅಲ್ಲಿ ನಾಲ್ಕು ಗಳ, ಒಂದು ಚಾಪೆಯೇ ಅವರ ಮನೆ, ಅಲ್ಲೇ ಅವರು ವಾಸ ಮಾಡುವುದು, ಹಿಂದೆ ಎರಡು ಲಾಂಟಾನಾ ಮುಳ್ಳು ಮುಂದೆ ಎರಡು ಲಾಂಟಾನಾ ಮುಳ್ಳು ಇದೇ ಅವರಿಗೆ ಅವರ ಮನೆಯ ಮುಂದೆ ಇರುವ ಗೋಡೆ, ನಾನು ಈ ವಿಚಾರದಲ್ಲಿ ಹೆಚ್ಚಿಗೆ ಏನೂ ಹೇಳಬೇಕಾಗಿಲ್ಲ. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಇಂತಹ ಜನಗಳಿಗೆ ನಮ್ಮ ದೇಶದಲ್ಲಿ ಒಂದು ಅಗ್ರಿಕಲ್ಚರಲ್ ಕಾಲೋನಿ ಇಲ್ಲ, ಒಂದು ಹಾಸ್ಟೆಲ್ ಕಟ್ಟಡ ಇಲ್ಲ, ಅವರ ಕಷ್ಟಸುಖವನ್ನು ವಿಚಾರಿಸುವವರು ಇಲ್ಲ. ದೇಶಕ್ಕಾಗಿ ದುಡಿಯುವ ಈ ಜನಗಳಿಗೆ ನಮ್ಮ ಸರಕಾರದವರು ಅವರ ಮೇಲೆ ಬಹಳ ಕನಿಕರ ಇಟ್ಟು ಸಹಾಯಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬೆಂಗಳೂರಿನಲ್ಲಿ ಜಯನಗರದ ಹತ್ತಿರ ಅವರಿಗೆ ಒಂದು ಕಾಲೋನಿ ಮಾಡಿದ್ದರು. ಈ ಕಾಲೊನಿಗೆ ಹಿಂದೆಇದ್ದ ಮಂತ್ರಿಗಳು ತಳಪಾಯ ಹಾಕಲು 400ರೂಪಾಯಿಗಳ ಗ್ರ್ಯಾಂಟನ್ನು ಕೊಟ್ಟರು. ಆದರೆ ಆ ಜಮೀನು ಗ್ರಾಮಸ್ತರ ವ್ಯಾಜ್ಯದಿಂದ ಹೈಕೋರ್ಟಿಗೆ ಹೋಗುವುದರಲ್ಲಿತ್ತು, ಅಷ್ಟರಲ್ಲೇ ಯಾವುದೋ ಒಂದು ರೀತಿ ಗ್ರಾಮಸ್ತರನ್ನು ಒಪ್ಪಿಸಿದ್ದರಿಂದ ಅಲ್ಲಿ 40 ಜನ ಬಡವರು ಉಚಿತವಾಗಿ ಮನೆ ಕಟ್ಟಿಕೊಳ್ಳಲು ಅವಕಾಶವಾಗಿದೆ. ಈಗ ಟ್ರಸ್ಟ್ ಬೋರ್ಡಿನವರು ತಾವೇ ಆ ಕೆಲಸ ಮಾಡುವುದಾಗಿ ಲೇಔಟ್, ಡ್ರೈನ್ ಮುಂತಾದುವನ್ನು ಮಾಡಿ ಒಂದೊಂದು ಮನೆಗೆ 2 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಎರಡನೆಯ ಯೋಜನೆಯಲ್ಲಿ 400 ರೂಪಾಯಿಗಳ ಗ್ರ್ಯಾಂಟ್ ಕೊಟ್ಟಿದ್ದನ್ನು ಆ ಯೋಜನೆ ಮುಗಿದುದರಿಂದ ಲ್ಯಾಪ್ಸ್ ಮಾಡಿ ಮೂರನೆ ಯೋಜನೆಯಲ್ಲಿ ಗ್ರ್ಯಾಂಟಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಾಗಿ ಈ ಮನೆಯವರೇ ಹಣ ಕೊಡಬೇಕೆಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಪ್ರಶ್ನೆ ಕಳಿಸಿ ಎರಡು ತಿಂಗಳಾದರೂ ಜವಾಬು ಬಂದಿಲ್ಲ. ಮಂತ್ರಿಗಳು ಆ ಕಡೆ ಗಮನ ಕೊಡಬೇಕು. 800 ರೂಪಾಯಿ ಸೂಪರ್‌ವೈಜಿಂಗ್ ಚಾರ್ಜ ಬೇರೆ ಇದೆ ಇದೆಲ್ಲಾ ಕೊಡಬೇಕೆಂದರೆ ಹರಿಜನರು ಉದ್ಧಾರವಾಗುವ ಬಗೆ ಹೇಗೆ? ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಜನಾಂಗಕ್ಕೆ ಸಹಾಯ ಮಾಡಬೇಕೆಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡಿ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀಮತಿ ಶಾಂಬ್ರಾಣಿ ಯಲ್ಲವ್ವ (ರಾಣಿಬೆನ್ನೂರು) —ಮಾನ್ಯ ಸಭಾಪತಿಗಳೇ ಈ ವರೆಗೆ ರಾಜ್ಯ ಸರ್ಕಾರವು ಹರಿಜನರ ಗಿರಿಜನರ ಹಾಗೂ ಹಿಂದುಳಿದ ವರ್ಗದವರ ಕಲ್ಯಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಸತತ ಪ್ರಯತ್ನ ಮಾಡುತ್ತಿರುವುದಕ್ಕಾಗಿ ನಾನು ರಾಜ್ಯ ಸರಕಾರಕ್ಕೆ ಅಭಿವಂದನೆಗಳನ್ನು ಸಲ್ಲಿಸುತ್ತೇನೆ.

ದೇಶಾದ್ಯಂತ ಹರಿಜನರು ಸರ್ವರಿಗೂ ಬೇಕಾಗುವ ಪಾದರಕ್ಷೆಗಳನ್ನು ಒದಗಿಸುವ ಕಸಬಿನಲ್ಲಿ ತೊಡಗಿದ್ದಾರೆ. ಈ ಜನ ಹೆಚ್ಚಾಗಿ ಅಜ್ಞಾನ ಬಡತನ ಹಾಗೂ ನಿರಕ್ಷರತೆಗಳಿಂದ ಕೂಡಿದವರಾಗಿದ್ದು ಈ ಜನಕ್ಕೆ ಅವರ ಕಸಬಿಗೆ ರಾಜ್ಯ ಸರಕಾರದ ಮಾರಾಟ ತೆರಿಗೆಯಲ್ಲಿ ವಿನಾಯಿತಿ ಮಾಡಲಾಗಿದರೂ ಅಲ್ಲಲ್ಲಿ ಕಂಡುಬರುವ ತಾಂತ್ರಿಕ ದೋಷಗಳಿಂದಾಗಿ ಹರಿಜನರು ಅಧಿಕಾರಿಗಳ ಕೃಪಾಕಟಾಕ್ಷಕ್ಕೊಳಗಾಗಿಯೇ ಬಾಳಬೇಕಾಗುತ್ತದೆ. ದಯವಿಟ್ಟು ಈ ಅಜ್ಞ ಜನತೆಯನ್ನು ಅಧಿಕಾರಿಗಳ ಔದಾರ್ಯಕ್ಕೆ

(ಶ್ರೀಮತಿ ಸಾಂಬ್ರಾಣಿ ಯಲ್ಲವ್ವ)

ಬಿಟ್ಟುಕೊಡದಂತೆ ಕಾನೂನಿನಲ್ಲಿ ತಕ್ಕ ತಿದ್ದುಪಡಿ ಮಾಡಿ ಅವರು ಕೊಳ್ಳುವ ಇತರೆ ವಸ್ತುಗಳಿಗೆ ಸರ್ಟಿಫಿಕೇಟ್ ಮೊದಲಾದುವನ್ನು ದೊರಕಿಸುವಲ್ಲಿ ಉಂಟಾಗುತ್ತಿರುವ ಕಾಲ, ಶ್ರಮ, ಧನವ್ಯಯ ಮೊದಲಾದ್ದನ್ನು ತಡೆಯಬೇಕು. ರಾಜ್ಯ ಸರಕಾರದ ಮಾರಾಟವು ಹರಿಜನರಿಗೆ ನುಂಗಲಾರದ ತುತ್ತಾಗಿದೆ. ಈ ವಿಷಯವನ್ನು ಸರಕಾರದವರು ತೀವ್ರಗತಿಯಿಂದ ಪರಿಶೀಲಿಸಿ ರಕ್ಷಣೆಯ ಭರವಸೆಯನ್ನು ಈ ಜನತೆಗೆ ಸಹಕಾರ ನೀಡಬೇಕು. ಉಳಿದ ಉದ್ಯೋಗಗಳಿಗೆ ಸರಕಾರ ಎಲ್ಲ ತರದ ಸಹಾಯ ನೀಡುತ್ತಿದ್ದರೂ ಚರ್ಮಗಾರಿಕೆ ಉದ್ಯೋಗಕ್ಕೆ ಯಾವರೀತಿಯಿಂದಲೂ ಸಹಾಯ ಮಾಡಿಲ್ಲ. ಇದಕ್ಕಾಗಿ ಪ್ರತ್ಯೇಕವಾಗಿ ಲೆದರ್ ಬೋರ್ಡನ್ನು ರಾಜ್ಯದಲ್ಲಿ ಮಾಡಿ ಅದರ ಪ್ರಗತಿಗಾಗಿ ಹೆಚ್ಚಿನ ಧನಸಹಾಯ ಒದಗಿಸಬೇಕು.

ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ಹದಗೊಳಿಸಿದ ಚರ್ಮದ ಮೇಲೆ ಕಡೆಯ ಹಂತಕ್ಕೆ ಕರ ವಿಧಿಸಿದ್ದು ಇದರಿಂದ ಹರಿಜನರಿಗೆ ಅನ್ಯಾಯವಾಗುತ್ತಿದೆ. ಮೊದಲಿದ್ದ ಹಾಗೆ ಕರವನ್ನು ಹಸಿ ಚರ್ಮದ ಮೇಲೆ ಹಾಕಬೇಕು. ವಾಣಿಜ್ಯ ತೆರಿಗೆಯಲ್ಲಿ ಸೌಲಭ್ಯ ತೋರಿಸದಿದ್ದರೆ ಹರಿಜನರು ಬದುಕುವಂತಿಲ್ಲ. ಸರಕಾರಕ್ಕೆ ಒಂದು ಕಳಕಳಿಯ ವಿನಂತಿ ಮಾಡಿಕೊಳ್ಳುತ್ತೇನೆ. ಹರಿಜನರು ಇನ್ನೂವರೆಗೂ ಮಾನವ ಪ್ರಾಣಿಗಳು ವಾಸಮಾಡಲು ಸಾಧ್ಯವಿಲ್ಲದ ರೀತಿಯಲ್ಲಿ ಜೀವಿಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳು ಕಾಲ ಕಾಲಕ್ಕೆ ಕೈಕೊಳ್ಳುವ ತಮ್ಮ ಸಂಚಾರದಲ್ಲಿ ಕಂಡು ಕೊಂಡಿದ್ದರೂ ಪ್ರತ್ಯೇಕವಾಗಿ ಈವರೆಗೂ ಯಾವ ವಿಧವಾದ ಕ್ರಮವನ್ನೂ ಕೈಕೊಂಡಿಲ್ಲ. ಉದಾಹರಣೆಗೆ ಬೇಕಾದರೆ ಹುಬ್ಬಳ್ಳಿನಗರಸಭೆಯ ಆಡಳಿತಕ್ಕೆ ಒಳಪಟ್ಟ ಸಣ್ಣಕೇರಿ ಕರಿಗೊಂಡನವರ ಹಕ್ಕಲದಲ್ಲಿವಾಸಿಸುವ ಹರಿಜನ ಮನೆ ಕಟ್ಟಲು ಬೈಲು ಜಾಗವನ್ನು ಅಕ್ವೈರ್ ಮಾಡಿಕೊಡಲು, ಕಳೆದ ಹತ್ತು ವರ್ಷಗಳ ಹಿಂದೆ ರಾಜ್ಯ ಸರಕಾರದ ಮಂತ್ರಿಗಳಲ್ಲೂ, ಅಧಿಕಾರಿಗಳಲ್ಲೂ ಮೊರೆ ಇಡುತ್ತಿದ್ದರೂ ಅದು ಅಧಿಕಾರವರ್ಗದ ಮಾಗಿಲನ ವರೆಗೆ ಮುಟ್ಟಿಲ್ಲ. ಇದೇ ರೀತಿಯಲ್ಲಿ ಧಾರವಾಡ ತಾಲ್ಲೂಕಿನ ಹೆಬ್ಬಳ್ಳಿ ಗ್ರಾಮದಲ್ಲಿ ಹಾಗೂ ರಾಣಿಬೆನ್ನೂರು ತಾಲ್ಲೂಕಿನಲ್ಲಿ ವಾಸಿಸುವ ಹರಿಜನರ ವಸತಿ ವಿಷಯದಲ್ಲಿ ಇನ್ನೂ ಸರಕಾರವು ಗಮನ ಕೊಟ್ಟಿಲ್ಲ. ಇವರ ವಸತಿ ಪ್ರಶ್ನೆ ಕರಣಾಜನಕವಾಗಿದೆ. ಈ ಅಂಶವನ್ನು ಪರಿಶೀಲಿಸಿ ತೀವ್ರ ಪರಿಹಾರ ಕ್ರಮ ಕೈಕೊಳ್ಳಬೇಕೆಂದು ಸರಕಾರಕ್ಕೆ ಒತ್ತಾಯಪಡಿಸುತ್ತೇನೆ. ಹರಿಜನ ಮಕ್ಕಳ ಶಿಕ್ಷಣಕ್ಕಾಗಿ ಎಲ್ಲ ಸೌಲಭ್ಯಗಳನ್ನೂ ಒದಗಿಸಬೇಕು. ಸಮಾಜಮಂದಿರ; ಶಿಶುವಿಹಾರ ಮಹಿಳಾ ಕಲ್ಯಾಣ ಕೇಂದ್ರಗಳನ್ನು ಪ್ರತಿ ಹರಿಜನರ ಕೇರಿಯಲ್ಲಿ ತೆರೆಯಬೇಕು. ಈ ಕೇಂದ್ರದಲ್ಲಿ ಒಳ್ಳೆ ನುರಿತ ಅನುಭವಿತ ನೀತಿವಂತರಾದ ಹೆಂಗಸರನ್ನು ಸಮಾಜ ಕಲ್ಯಾಣ ಖಾತೆಯಿಂದ ನೇಮಿಸಬೇಕು. ಸಮಾಜ ಕಲ್ಯಾಣ ಖಾತೆಯ ಅಧಿಕಾರಿಗಳು ಇಲ್ಲಿದೇ ಇರುವುದರಿಂದ ಪ್ರತಿ ಜಿಲ್ಲೆಯಲ್ಲಿ ಖರ್ಚಾಗಬೇಕಾಗಿರುವಷ್ಟು ಆಗಿಲ್ಲ. ಇದು ಮಂತ್ರಿಗಳಿಗೂ ಗೊತ್ತು. ಹಾಗೂ ಎಲ್ಲ ಸದಸ್ಯರಿಗೂ ಗೊತ್ತು. ಸರಿಯಾದ ಅಫೀಸರನ್ನು ನೇಮಕ ಮಾಡದೆ ಸಮಾಜ ಕಲ್ಯಾಣ ಖಾತೆಯನ್ನು ಅಧೋಗತಿಗೆ ಇಳಿಸಿದಂತಾಗಿದೆ.

ನೌಕರಿಯಲ್ಲಿ ಸಹ ಹರಿಜನರಿಗೆ ಅನ್ಯಾಯವಾಗಿದೆ. ಹೆಚ್ಚಿನ ಭಡತಿ ಇಲ್ಲ ಪ್ರಮಾಣಕ್ಕೆ ತಕ್ಕಂತೆ ನೌಕರಿಯಲ್ಲಿ ತುಂಬಿಲ್ಲ. ಇದರ ಬಗ್ಗೆ ಸಚಿವರು ಯಾವ ಗಮನವನ್ನೂ ಕೊಟ್ಟಿಲ್ಲ.

ಹಳ್ಳಿಗಳಲ್ಲಿ ಹರಿಜನರಿಗೆ ಕುಡಿಯಲು ನೀರಿಲ್ಲ, ಸವರ್ಣೀಯರ ಬಾವಿಗಳಿಗೆ ಹರಿನರು ಹೋಗಿ ನೀರು ಹಾಕಿಸಿ ಕೊಂಡು ಬರುವಂಥಾದ್ದಿದೆ. ಇವುಗಳ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಾಗಿ ವಿನಂತಿ. ರಾಣಿಬೆನ್ನೂರಿನಲ್ಲಿ ಲಂಬಾಣಿ ಜನರ ಸಲುವಾಗಿ ಕುಡಿಯುವ ನೀರಿನ ಬಗ್ಗೆ ಬಾವಿ ತೋಡಿಸಬೇಕೆಂದು ಮಂತ್ರಿಗಳಿಗೆ ಕೇಳಿಕೊಂಡಿದ್ದೆ. ಇದರ ಬಗ್ಗೆ ಕ್ರಮ ಕೈಕೊಂಡಿದ್ದು ಇನ್ನು ಕಂಡುಬಂದಿಲ್ಲ. ತಾಲ್ಲೂಕು ಬೋರ್ಡಿನವರು ತೆಗೆದ ಬಾವಿಯಲ್ಲಿ ನೀರಿನ ಬದಲಾಗಿ ಕಲ್ಲು ಬಂದಿದೆ, ಇದರಲ್ಲಿ ನೀರು ಬರುವ ಹಾಗೆ ಸರಕಾರದವರು ಹೆಚ್ಚು ಹಣ ಮಂಜೂರು ಮಾಡಿ ಇದೇ ವರ್ಷ ನೀರಿನ ಸೌಲಭ್ಯ ಒದಗಿಸಿ ಕೊಡಬೇಕೆಂದು ಸರಕಾರದಲ್ಲ ವಿನಂತಿ ಮಾಡಿಕೊಳ್ಳುತ್ತೇನೆ. ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕಲ್ಪಿಸಿ ಕೊಟ್ಟಿದ್ದಕಾಗಿ ಅಧ್ಯಕ್ಷರನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ.

ಶ್ರೀ ಎಸ್. ಅಂಜಯ್ಯ (ಕೊರಟಗೆರೆ).—ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಇಲಾಖೆಯ ಸುಮಾರು ಒಂದೂವರೆಕ್ಕಾಲು ಕೋಟಿ ರೂಪಾಯಿಗಳ ಬೇಡಿಕೆಯೇನಿದೆ ಅದನ್ನು ವಿರೋಧಿಸುತ್ತಾ ನಾಲ್ಕಾರು ಮಾತುಗಳನ್ನು ಸಲಹೆಯ ರೂಪದಲ್ಲಿ ಹೇಳುತ್ತೇನೆ, ಮಹಿಳಾಮಂತ್ರಿಗಳು ಸಮಾಜ ಕಲ್ಯಾಣ ಖಾತೆಯನ್ನು ವಹಿಸಿಕೊಂಡ ಮೇಲೆ ಸಮಾಜ ಕಲ್ಯಾಣವಾಗುತ್ತದೆ, ಹರಿಜನರು ಉದ್ಧಾರವಾಗುತ್ತಾರೆ, ಹೊರಗೆ ಗುಡಿಸಲುಗಳಲ್ಲಿರುವವರಿಗೆ ಮನೆ ದೊರೆಯುತ್ತದೆ, ಹೆಂಚಿನಮನೆ ಕಟ್ಟಿಕೊಳ್ಳಲು ಅವಕಾಶಕೊಡುತ್ತಾರೆ ಎಂದು ಭಾವಿಸಿದ್ದೆವು. ಆದರೆ ಇಂದಿನ ದಿವಸ ಆಗಿರುವ ಕಲ್ಯಾಣವೆಲ್ಲವನ್ನೂ ನೋಡಿದರೆ ಎಳ್ಳಷ್ಟೂ ಸಹಾಯವಾಗಿಲ್ಲ. ಈ ತಾಯಿ ಬಂದರೆ ಹರಿಜನರಿಗೆ

ಅನೇಕ ಸೌಲಭ್ಯಗಳು ಸಿಕ್ಕುತ್ತವೆ; ಒಳ್ಳೆಯ ವಿದ್ಯಾಭ್ಯಾಸ, ಸಮಾಜದಲ್ಲಿ ಮತ್ತು ಅಧಿಕಾರವರ್ಗ ದಲ್ಲಿ ಅನುಕೂಲವಾಗುತ್ತದೆ ಎಂದು ನಂಬಿದ್ದೆವು. ಆದರೆ ಇಂದು ನಮ್ಮ ಆಶೋತ್ತರವೆಲ್ಲಾ ಬದಿಗೊತ್ತಲ್ಪಟ್ಟಿದೆ. ಅವರು ಅಧಿಕಾರ ವಹಿಸಿದಾಗಿನಿಂದ, 1962 ರಿಂದ ಯಾವ ಹಾಸ್ಟೆಲಾಗಲಿ, ಅವುಗಳಲ್ಲಿರುವವರಿಗೆ ಅನುಕೂಲವಾಗಲಿ ಹೆಚ್ಚಿಲ್ಲ, ಹಾಸ್ಟೆಲುಗಳಲ್ಲಿರುವವರಿಗೆ ಬಟ್ಟೆಬರೆ, ಸರಿಯಾದ ಆಹಾರ ವಗೈರೆ ಸರಿಯಾಗಿ ದೊರೆಯುತ್ತಿಲ್ಲ, ಇದು ಬಹಳ ಶೋಚನೀಯ ಉದಾಹರಣೆ ಯಾಗಿ ಹೇಳುವುದಾದರೆ ಹಾಸ್ಟೆಲುಗಳನ್ನು ಕಟ್ಟಿಸುವುದು ಮತ್ತು ಇತರ ಕಟ್ಟಡ ಗಳನ್ನು ತಯಾರಿಸುವಾಗ ಅಲ್ಲಿರುವ ರೆಂಟೆಡ್ ಬಿಲ್ಡಿಂಗುಗಳಲ್ಲಿ ಕೆಲಸ ಮಾಡುತ್ತಿರುವ ಹಾಸ್ಟೆಲುಗಳು ಮತ್ತು ಇಲ್ಲಿ ನಡೆಯುವ ಕ್ರಮಗಳನ್ನು ನೋಡಿದರ ಅವರ ಮನಸ್ಸಿಗೆ ತೋಚಿದಂತೆ ಅವರ ವ್ಹಿಂಸ್ ಅಂಡ್ ಫಾನ್ಸೀಸ್‌ಗೆ ಅನುಸಾರವಾಗಿ ನಡೆಸುತ್ತಾರೆ, ಇದನ್ನು ನೋಡಿದರೆ ಹರಿಜನರು ಇನ್ನೂ ಹಿಂದುಳಿದಿದ್ದಾರೆಯೇ ಹೊರತು ಇನ್ನೂ ಮುಂದೆ ಹೋಗಿಲ್ಲ.

ಇನ್ನು ಹರಿಜನರಿಗಾಗಿ ಗ್ರಾಂಟುಗಳನ್ನು ಕೊಡವ ವಿಚಾರ ನೋಡಿದರೆ ಹರಿಜನರಿಗಾಗು ತ್ತಿರುವ ಅನ್ಯಾಯಗಳು ವರ್ಣಿಸಲಸಾಧ್ಯ, ಇಲ್ಲಿ ಕೆಲವರು ಏಜಂಟರುಗಳು ಪುಡಾರಿಗಳಾಗಿ ಕೆಲಸ ಮಾಡುತ್ತಿರುತ್ತಾರೆ. ಸರಕಾರದಿಂದ ಸಾಲವನ್ನು ಕೊಡಿಸುತ್ತೇನೆಂದು ಹೇಳಿ 300 ರೂಪಾಯಿ ಗಳಷ್ಟು ಸಾಲ ದೊರತರೆ ಅದರಲ್ಲಿ ನೂರು ರೂಪಾಯಿಗಳು ಏಜಂಟರು ಮತ್ತಿತರ ಖರ್ಚುಗಳಿಗಾಗಿ ನೂರು ಹೀಗೆ ಎಲ್ಲ ಹೋಗಿ ಕೊನೆಗೆ ಅವನ ಕೈಗೆ ಸಿಗುವುದೂ ನೂರೇ ರೂಪಾಯಿಗಳು. ಇದರಿಂದ ಹರಿಜನರಿಗೆ ಏನು ಉಪಯೋಗ ಮಾಡಿದ ಹಾಗೆ ಆಯಿತು ? ಇದಕ್ಕೆ ಬದಲಾಗಿ ಇನ್ನು ಮುಂದೆ ಯಾವುದಾದರೂ ಪರ್ಮನೆಂಟು ಫುಟಿಂಗ್ ಮೇಲೆ ಏನಾದರೂ ಸಹಾಯಗಳನ್ನು ಕೊಡಬೇಕು. ಅವರಿಗೆ ಶಾಶ್ವತವಾದ ಇಮ್ಮೂವಬಲ್ ಪ್ರಾಪರ್ಟಿ ಎಂದರೆ ಒಂದು ಜಮೀನು ಬೇಕು. ಪ್ರತಿಯೊಂದು ಹರಿಜನ ಸಂಸಾರಕ್ಕೂ ಕೊನೆಯ ಪಕ್ಷ ಐದು ಎಕರೆಗಳಷ್ಟು ಭೂಮಿಯನ್ನು ಸಾಗು ಮಾಡುವವರಿಗಾಗಿ ಎಂದು ಸರಕಾರ ಕೊಡಿಸಿ ಕೊಡಬೇಕು. ಅದಾದ ಮೇಲೆ ಅವರಿಗೆ ಬೇಕಾದ ಬಾವಿ, ಕುರಿ, ಕೋಣ, ಎತ್ತು ಗಳು ಎನ್ನುವುದನ್ನು ಕೊಡಬಹುದು. ಇದಕ್ಕಾಗಿ ಸರಕಾರ ಈಗ ಬಿ. ಡಿ ಓ. ಗಳ ಮೂಲಕ ಭೂಮಿಯನ್ನು ಹಂಚಿಸಿ ಕೊಡಬೇಕು. ಅಲ್ಲದೆ ಕೊಟ್ಟಿರುವ ಹಣ ಸರಿಯಾಗಿ ವಿನಿಯೋಗವಾಗು ತ್ತಿದೆಯೇ ಮತ್ತು ಅದು ಹೇಗೆ ನಷ್ಟವಾಗುತ್ತಿದೆ ? ಎನ್ನುವುದನ್ನು ಯಾರಾದರೂ ತನಿಖೆ ಮಾಡಿ ದ್ದಾರೆಯೇ? ಇವು ಯಾವುದನ್ನೂ ಗಮನಿಸುತ್ತಿಲ್ಲ. ಅದ್ದರಿಂದ ಪರ್ಮನೆಂಟಾಗಿ ಹರಿಜನರ ಸಂಸಾ ರಕ್ಕೆ ಎಂದು ಐದು ಎಕರಗಳಷ್ಟು ಭೂಮಿಯನ್ನು ಮುಫತ್ತಾಗಿ ಕೊಡಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಜಮೀನು ವಿಲೇವಾರಿ ಬಗ್ಗೆ ರೆವೆನ್ಯೂ ಇನ್‌ಸ್ಪೆಕ್ಟರನ್ನು ನೋಡಬೇಕು ಎಂದರೆ ಅದು ಬಹು ಕಷ್ಟಸಾಧ್ಯವಾದ ಮಾತು. ಮಹಾರಾಜರನ್ನಾದರೂ ನೋಡಬಹುದು ಆದರೆ ರೆವೆನ್ಯೂ ಇಲಾಖೆ ಯಲ್ಲಿರುವ ರೆವೆನ್ಯೂ ಇನ್ಸ್‌ಪೆಕ್ಟರನ್ನು ನೋಡುವುದು ಎಂದರೆ ಬಹು ಕಷ್ಟ, ಅದೇ ರೀತಿ ಶ್ಯಾನು ಭೋಗರನ್ನು ನೋಡುವುದೂ ಕಷ್ಟ. ಇದಕ್ಕೆ ಮೇಲೆ ತಹಶೀಲುದಾರರು ಇದ್ದಾರೆ. ಅವರ ಆಟಾ ಟೋಪವನ್ನು, ದರ್ಪವನ್ನೂ ಕೇಳುವವರೇ ಇಲ್ಲ. ಯಾವನಾದರೂ ಒಬ್ಬ ಹರಿಜನನಾದವನು ಭೂಮಿ ಗಾಗಿ ಒಂದು ಅರ್ಜಿ ತಹಶೀಲುದಾರರಿಗೆ ಕೊಟ್ಟರೆ ಅದೇನಾಗಿದೆ ಎಂಬ ಬಗ್ಗೆ ಅವನಿಗೆ ಉತ್ತರ ಕೊಡುವುದೇ ಇಲ್ಲ. ಅಲದೆ ಅವರು ಇಲ್ಲಿರುವ ಗೋಮಾಳ ಅಥವಾ ಈಚಲು ಮಾಗದ ಭೂಮಿ, ಇತ್ಯಾದಿ ಗಳಿಗಾಗಿ ಅರ್ಜಿಗಳನ್ನು ಹರಿಜನರಾದವರು ಕೊಟ್ಟರೆ ಅಂತಹ ಅರ್ಜಿಗಳನ್ನು ಪತ್ತೆ ಇಲ್ಲದಂತೆ ಮಾಡಿಬಿಡುತ್ತಾರೆ. ಏನಾದರೂ 20-30 ಎಕರೆಗಳಷ್ಟು ಜಮೀನು ಇದ್ದರೆ ಅವುಗಳನ್ನು ಬೇರ ರೈತ ರಿಗೆ ಹಂಚಿಬಿಟ್ಟು ಹರಿಜನರಿಗೆ ಏನೂ ಭೂಮಿ ಸಿಗದಂತೆ ಮಾಡುತ್ತಾರೆ. ಇದನ್ನೆಲ್ಲಾ ತಪ್ಪಿಸಬೇಕಾದರೆ ಈಗಿರುವ ಲ್ಯಾಂಡು ಗ್ರಾಂಟು ರೂಲ್ಸುಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಕಡ್ಡಾಯವಾಗಿ 5 ಎಕರೆಗಳಷ್ಟು ಭೂಮಿ ಹರಿಜನರಿಗೆ ಸಿಗುವಂತೆ ಮಾಡಬೇಕೆಂದು ಸರಕಾರದಲ್ಲಿ ಬೇಡುತ್ತೇನೆ. ಇದು ನನ್ನ ಆಸೆ.

ಇನ್ನು ಹರಿಜನರಿಗೆ ಎಜುಕೇಷನ್ನು ಸರಿಯಾಗಿ ಕೊಡದೇ ಇದ್ದರೆ ಅವರು ಮುಂದುವರಿಯುವು ದಿಲ್ಲ. ಯಾವ ಹಿಂದುಳಿದ ವರ್ಗದವರಿಗೆ ಸರಿಯಾದ ವಿದ್ಯಾಭ್ಯಾಸ ಕೊಡದೇ ಹೋದರೆ ಅವರು ಮುಂದುವರಿಯುವುದಕ್ಕೆ ಸಾಧ್ಯವಿಲ್ಲ ಎನ್ನುವ ತತ್ವವನ್ನು ಸರಕಾರ ಒಪ್ಪಿಕೊಂಡಿರುವಾಗ ಅದರಂತೆ ಕಾರ್ಯಗತ ಮಾಡುವುದನ್ನು ಸರಕಾರ ಮರೆತಿದ್ದಾರೆ. ಇದರಿಂದ ಹರಿಜನರು ಮುಂದಕ್ಕೆ ಬರಬೇ ಕೆಂದರೆ ಹೇಗೆ ತಾನೇ ಸಾಧ್ಯ? ಈಗ ಸರಕಾರ 7-12-15 ಎಂದು ಸ್ಕಾಲರುಷಿಪ್ಪುಗಳನ್ನು ಕೊಡುತ್ತ ಹೋದರೆ ಅನುಕೂಲವಾಗುತ್ತದೆಯೇ ? ಅವನ ಸ್ಥಿತಿಯನ್ನು ಗಮನಕ್ಕೆ ತಗದುಕೊಂಡು ಸರಿಯಾದ ಅನುಕೂಲಗಳನ್ನು ಕೊಟ್ಟರೆ ಅವರು ಮುಂದುವರಿಯುವುದಕ್ಕೆ ಸಾಧ್ಯವಾದೀತು. ಇಲ್ಲದೇ ಇದ್ದರೆ ಅವರಿಗಾಗಿ ಖರ್ಚು ಮಾಡುವ ಹಣ ನಷ್ಟವಾಗುತ್ತದೆ. ಇದಕ್ಕಾಗಿ ನೇಮಕವಾಗಿರುವ ಸೂಪರ್‌ವೈಸು ಮಾಡುವ ಜನರು ಸರಿಯಾಗಿ ಅನುಕೂಲಗಳನ್ನು ಮಾಡದೇ ಇರುವುದರಿಂದ ಅವರ

(ಶ್ರೀ ಎಸ್. ಅಂಜಯ್ಯ)

ಸ್ಥಿತಿ ಅಧೋಗತಿಗೆ ಇಳಿಯುತ್ತಿದೆ. ಈ ಇಲಾಖೆಯಲ್ಲಿ ಒಬ್ಬರು ಸೋಷಿಯಲ್ ವೆಲ್‌ಫೇರು ಡೈರಕ್ಟರು ಎಂದು ಮತ್ತು ಅವರಿಗೆ ಒಬ್ಬರು ಅಸಿಸ್ಟೆಂಟು ಡೈರಕ್ಟರು ಎಂದು ನೇಮಕವಾಗಿದ್ದವರು ಹರಿಜನರಿಗೆ ಏನೊಂದು ತೊಂದರೆಗಳನ್ನು ಕೊಟ್ಟು ಒಂದು ಅಹಂಕಾರ ಮತ್ತು ದರ್ಪಶಕ್ತಿನಿಂದ ಮೆರೆದರು ಎನ್ನುವುದನ್ನು ಇಲ್ಲಿ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಇಂತಹ ಅಧಿಕಾರಿಗಳಿದ್ದರೆ ಇವರಿಂದ ಸಮಾಜ ಸೇವೆ ಮಾಡುವುದಕ್ಕೆ ಸಾಧ್ಯವೇ ? ಇಂತಹವರ ಮೇಲೆ ಸರಕಾರಕ್ಕೆ ಹೇಳಿದರೂ ಅವರು ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೇ ನಿರ್ಲಕ್ಷಿಸಿರುವುದನ್ನು ನೋಡಿ ನನಗೆ ತುಂಬಾ ವ್ಯಸನಕರವಾಗಿದೆ.

ಇನ್ನು ರೆಕ್ರೂಟ್‌ಮೆಂಟ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ಸು ಮತ್ತು ಟ್ರೈಬ್ಸ್‌ಗಳ ವಿಚಾರದಲ್ಲಿ ನೋಡಿದರೆ ಅಲ್ಲಿರುವ ಅಧಿಕಾರಿಗಳು ಸರಕಾರದ ಆಡಳಿತವನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿದ್ದಾರೆಯೇ ಆ ಪ್ರಕಾರ ಷೆಡ್ಯೂಲ್ಡ್ ಕಾಸ್ಟಿನವರಿಗೆ ಮತ್ತು ಟ್ರೈಬ್ಸ್ ನವರಿಗೆ ಸರಕಾರ ಎಷ್ಟು ಕಡೆಗಳಲ್ಲಿ ಕೆಲಸವನ್ನು ಕೊಟ್ಟಿದ್ದಾರೆ ? ಇಲ್ಲಿಯೇ ನಮ್ಮ ಸರಕಾರದ ಸೆಕ್ರೆಟೇರಿಯಟ್ಟಿನಲ್ಲಿ ಎಷ್ಟು ಹರಿಜನರ ಜವಾನರುಗಳಿದ್ದಾರೆ ? ಎಷ್ಟು ಜನ ಫಸ್ಟ್ ಡಿವಿಜನ್ನು ಕ್ಲಾರ್ಕುಗಳಿದ್ದಾರೆ ? ಎಷ್ಟು ಜನ ಸೂಪರಿಂಟೆಂಡೆಂಟರಿದ್ದಾರೆ ? ಎಷ್ಟು ಜನ ಗೆಜೆಟೆಡ್ ಅಧಿಕಾರಿಗಳಿದ್ದಾರೆ ಎಂದು ಕೇಳಿದರೆ ಅದಕ್ಕೆ ಒಬ್ಬರು ಪಿ. ಎಸ್. ಸಿ. ಚೇರ್ಮನ್ನರು, ಒಬ್ಬರು ರಿಜಿಸ್ಟ್ರಾರ್ ಆಫ್ ಕೋ-ಆಪರೇಟೀವ್ ಸೊಸೈಟಿ, ಒಬ್ಬರು ಎಲೆಕ್ಟ್ರಿಸಿಟಿ ಚೇರ್ಮನ್ನರು ಹೀಗೆ ನಾಲ್ಕಾರು ಹೆಸರುಗಳನ್ನು ಹೇಳಿಬಿಟ್ಟರೆ ಹರಿಜನರಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆಯೇ ? ಹಿಂದುಳಿದ ಈ ಜನಾಂಗದ ದಾಮಾಷಾ ಪ್ರಕಾರ ಅಧಿಕಾರಿಗಳು ಇಲ್ಲಿ ನೇಮಕವಾಗಿಲ್ಲ. ಆದುದರಿಂದ ಈಗಿರುವ ಹಿಂದುಳಿದ ಜನಾಂಗದ ಪ್ರಕಾರ ನೇಮಕಗಳನ್ನು ಸರಕಾರ ಮಾಡಬೇಕೆಂದು ಇಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮೂರು ಜನ ಮಂತ್ರಿಗಳು ಹರಿಜನ ಜನಾಂಗಕ್ಕೆ ಸೇರಿರುವರೂ ಮಂತ್ರಿಮಂಡಲದಲ್ಲಿದ್ದಾರೆ.

ಶ್ರೀ ಎಸ್. ಅಂಜಯ್ಯ.—ಇರಬಹುದು. ಆದರೆ ದಾಮಾಷಾ ಪ್ರಕಾರ ಆಗಿಲ್ಲ. ಸರಕಾರದವರು ತಮ್ಮ ಪಕ್ಷವನ್ನು ಬೆಳೆಸುವುದಕ್ಕಾಗಿ ವಿಮೆನ್ ವೆಲ್‌ಫೇರ್ ಸೆಂಟರುಗಳನ್ನು ಮಾಡಿದ್ದಾರೆ. ಅದರಲ್ಲೂ ನಮ್ಮ ಸಮಾಜಕಲ್ಯಾಣ ಖಾತೆಯ ಮಂತ್ರಿಗಳಾಗಿ ಬಂದಿರುವವರು ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಿ ಅಲ್ಲಿರುವ ಹಿಂದುಳಿದಿರುವ ಜನರನ್ನು ಮುಂದುವರಿಯುವಂತೆ ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಆದರೆ ಈಗ ನೇಮಕ ಮಾಡುವಂತಹ ಅಧಿಕಾರಿಗಳು ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡಲು ಹಿಂದೆ ಬೀಳುತ್ತಿರುವುದರಿಂದ ಹಳ್ಳಿಗಳಲ್ಲಿರುವ ಹಿಂದುಳಿದಿರುವ ಈ ಜನಾಂಗವು ಮುಂದೆ ಬರುವುದಕ್ಕೆ ಹೇಗೆ ತಾನೇ ಆದೀತು ? ಇದರಿಂದಾಗಿ ವಿಮೆನ್ ವೆಲ್‌ಫೇರು ಸೆಂಟರುಗಳ ಪ್ರಗತಿಗೆ ಧಕ್ಕೆಯುಂಟಾಗುತ್ತದೆ.

ಇನ್ನು ನಮ್ಮ ಪ್ರಾಂತದಲ್ಲಿ ಕುಡಿಯುವ ನೀರಿನ ಬಾವಿ ಪರಿಸ್ಥಿತಿ ಬಹು ಶೋಚನೀಯವಾಗಿದೆ. ನನ್ನ ಕ್ಷೇತ್ರದಲ್ಲಿರುವ 35 ಗ್ರಾಮಗಳಲ್ಲಿ ಕುಡಿಯುವ ಬಾವಿಯೇ ಇರುವುದಿಲ್ಲ. ಈ ಕಾಂಗ್ರೆಸ್ಸು ಸರಕಾರ ಬಂದು 17 ವರ್ಷಗಳಲ್ಲಿ ಇಲ್ಲಿನ 34 ಹಳ್ಳಿಗಳಿಗಾಗಿ ಇನ್ನೂ ಕುಡಿಯುವ ನೀರಿನ ಬಾವಿಯನ್ನು ಕೊಡಿಸಿಕೊಡಲು ಈ ಸರಕಾರಕ್ಕೆ ಆಗಲಿಲ್ಲ. ವರ್ಷಕ್ಕೆ ಎರಡು ಬಾವಿಗಳಂತೆ ಮಾಡಿದ್ದರೂ ಇಷ್ಟು ಹೊತ್ತಿಗೆ ನಮ್ಮ ಭಾಗಕ್ಕೆ ಕುಡಿಯುವ ನೀರಿನ ಸೌಕರ್ಯಗಳು ಜನಕ್ಕೆ ಸಿಗುತ್ತಿತ್ತು. ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು ಇದರ ಕಡೆಗೆ ಗಮನಕೊಡದೆ ಇದ್ದರೆ ದೇಶದ ಜನತೆಗೆ ಕಲ್ಯಾಣ ಹೇಗೆ ಮಾಡಿದಂತಾಗುತ್ತದೆ ? ನಮ್ಮ ಮಾನ್ಯ ಸಮಾಜಖಾತೆಯ ಮಂತ್ರಿಯವರಿಗೆ ಕಲ್ಯಾಣವಾಗುತ್ತದೆಯೇ ಹೊರತು ಸಾಮಾನ್ಯ ಜನಕ್ಕೇನೂ ಕಲ್ಯಾಣವಾದಂತಾಗಲಿಲ್ಲ.

ಇನ್ನು ಡಿಸ್ಟ್ರಿಕ್ಟು ಸೋಷಿಯಲ್ ವೆಲ್‌ಫೇರು ಆಫೀಸರುಗಳೆಂದು ನೇಮಕ ಮಾಡಿದವರನ್ನು ಯಾರ ಮೇಲೆಯೋ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವರನ್ನು ಕೆಳಕ್ಕೆ ಇಳಿಸಿದರ . ಇದು ಹೇಗೆ ಇದೆ ಎಂದರೆ ಹಿಂದೆ ಯಾದವ ಕುಲವನ್ನೇ ನಾಶಮಾಡಬೇಕು ಎಂದು ಕೃಷ್ಣನನ್ನು ಕೊಲ್ಲುವುದಕ್ಕಾಗಿ ಪೂತನಿ ಎಂಬುವಳನ್ನು ಕಳುಹಿಸಿ ಅವಳ ವಶವಾಗುತ್ತಾಳೆಂದು ಮಾಡಿದಂತೆ ಇಲ್ಲಿಯೂ ಸರಕಾರದ ಆಡಳಿತ ಕಾಣುತ್ತಿದೆ. 17 ಜನ ಈ ವೆಲ್‌ಫೇರು ಅಧಿಕಾರಿಗಳನ್ನು ನೇಮಕ ಮಾಡಿದವರು ನಿಮ್ಮ ಸರಕಾರವಲ್ಲವೇನು ?. ಆಗ ನಿಮ್ಮ ಸರಕಾರದಲ್ಲೇ ಇದ್ದ ಮಾನ್ಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಜತ್ತಿಯವರೇ ಅಲ್ಲವೇನು ಇವರುಗಳನ್ನು ನೇಮಕ ಮಾಡಿದ್ದು. ಇಂತಹ ಮೇಲು ದರ್ಜೆ ಅಧಿಕಾರಿಗಳಾಗಿದ್ದವರನ್ನು ಕೆಳದರ್ಜೆಗೆ ಇಳಿಸುವುದು ಯಾವ ನ್ಯಾಯ ? ಇದೇ ರೀತಿಯಾಗಿ ತಾವು ಆ ಕಾಲದಲ್ಲೇ ನೇಮಕ ಮಾಡಿದ ಬಿ. ಡಿ. ಓಗಳು ಮತ್ತು ತಹಶೀಲುದಾರರುಗಳು ಎಂಬ ಅಧಿಕಾರಿಗಳನ್ನು ರೆಡ್ಯೂಸು ಮಾಡಿದ್ದೀರೇನು ? ಹಾಗೆ ಅಂತಹ ಅಧಿಕಾರಿಗಳನ್ನು ರೆಡ್ಯೂಸು ಮಾಡದ ಇದ್ದಲ್ಲಿ ವೆಲ್‌ಫೇರ್

ಅಧಿಕಾರಿಗಳನ್ನು ಹೀಗೆ ಕೆಳಕ್ಕಿಳಿಸಿದುದರಿಂದ ಇವರುಗಳು ಬೀದಿಯ ಭಿಕಾರಿಗಳಾಗಿ ಅವರ ಹೆಂಡತಿ ಮಕ್ಕಳನ್ನು ಸಾಯುವಂತೆ ಮಾಡುತ್ತಿರುವುದು ಸರಿಯೇ? ಇಂತಹ ಅನ್ಯಾಯಗಳಿಂದಾಗಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳ ಮೇಲೆ ಇದ್ದ ನಂಬಿಕೆಯೂ ಜನರಲ್ಲಿ ಕಡಿಮೆಯಾಗುತ್ತಿದೆ. ಆದುದರಿಂದ ಈಗಲಾದರೂ ಸರಕಾರ ಈ ಜನಾಂಗದ ಅಭಿವೃದ್ಧಿಗಾಗಿ ತಕ್ಕ ಕ್ರಮಗಳನ್ನು ತೆಗೆದುಕೊಂಡು ಇವರ ಸ್ಥಿತಿಯನ್ನು ಉತ್ತಮ ಪಡಿಸುತ್ತಾರೆಂದು ಭಾವಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಅಧ್ಯಕ್ಷರೇ. ಈ ದಿವಸ ನಮ್ಮ ಮುಂದೆ ಇರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ ಒಂದೆರಡು ಸಲಹೆಗಳನ್ನು ಸರಕಾರದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಕಾಲ ಬಹಳ ಕಡಿಮೆ ಇರುವುದರಿಂದ ಒಂದೆರಡು ವಿಚಾರಗಳಲ್ಲಿ ಮಾತ್ರ ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಹರಿಜನರಿಗಾಗಿ ವಾಸದ ಮನೆಗಳನ್ನು ಕಟ್ಟಿಸುವುದರ ಬಗ್ಗೆ ಅನೇಕರು ಹೇಳಿದ್ದಾರೆ. ಅದನ್ನು ತೀವ್ರವಾಗಿ ಯೋಚನೆ ಮಾಡಬೇಕಾದುದು ಅಗತ್ಯ. ಆದರೆ ಸಾಕಾದಷ್ಟು ಮನೆಗಳು ಕಳೆದ ಎರಡು ವರ್ಷಗಳಿಂದ ಹರಿಜನರಿಗೆ ಆಗಿಲ್ಲ. ಇದನ್ನು ಆದಷ್ಟು ಬೇಗ ತೀವ್ರವಾಗಿ ಕಾರ್ಯಗತಮಾಡುತ್ತೇವೆಂದು ಮಾನ್ಯ ಸಹಕಾರ ಸಚಿವರು ಹೇಳಿರುವುದನ್ನು ಸ್ವಾಗತಿಸುತ್ತೇನೆ ಮತ್ತು ಆದಷ್ಟು ಬೇಗ ಕಾರ್ಯಗತಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸರ್ವೀಸಸ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಇಲ್ಲಿ ಹೇಳಬೇಕಾಗಿದೆ. ಬೀರಪ್ಪ ಕಮಿಟಿ ಎಂದು ಹಿಂದೆ ಮಾಡಿ ಅದರ ರಿಪೋರ್ಟು ಕೂಡ ಸರಕಾರಕ್ಕೆ ಬಂದಿದೆ. ಅದರಲ್ಲಿ ಹರಿಜನರು ಮತ್ತು ಗಿರಿಜನರಿಗಾಗಿ ಸರ್ವೀಸಸ್‌ಗಳಲ್ಲಿ ಎಷ್ಟು ರೆಪ್ರಸೆಂಟೇಷನ್ನು ಇದೆ ಎಂಬುದನ್ನು ಹೇಳಿದ್ದಾರೆ. ಇತ್ತೀಚೆಗೆ ಅಂತಹ ಒಂದು ಸರ್ವೆ ಮಾಡಿಸಿಲ್ಲ.

ಬೀರಪ್ಪ ಸಮಿತಿಯವರ ವರದಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರಲ್ಲಿರತಕ್ಕ ಲಿಟರೇಟ್ಸ್ 4.6 ಪರ್ಸೆಂಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸಿನಲ್ಲಿ ಲಿಟ್ರೇಟ್ಸ್ 0.2 ಪರ್ಸೆಂಟ್ ಎಂದು ಹೇಳಿದೆ. ಆ ವರದಿಯಲ್ಲಿ ಇನ್ನೂ ಮುಂದಕ್ಕೆ ಹೋದರೆ: ಅವರು ಹೀಗೆ ಹೇಳಿದ್ದಾರೆ:

The steps taken by the appointing authorities to fill up the reserved vacancies are not adequate. The publicity given is not wide enough.

ಬೀರಪ್ಪ ಸಮಿತಿಯ ಶಿಫಾರಸುಗಳನ್ನು ಸರ್ಕಾರದವರು ಇಂಪ್ಲಿಮೆಂಟ್ ಮಾಡುವುದಕ್ಕೆ ಇಲ್ಲಿಯವರೆಗೂ ಪ್ರಯತ್ನ ಮಾಡಿಲ್ಲ. ಅದರಲ್ಲಿ ಕ್ಲಾಸ್ 1, ಕ್ಲಾಸ್—2, ಕ್ಲಾಸ್—3, ಮತ್ತು ಕ್ಲಾಸ್—4 ಇಷ್ಟರಲ್ಲಿ ನಮ್ಮ ಇಡೀ ರಾಜ್ಯದಲ್ಲಿ 1-1-61ರಲ್ಲಿದ್ದ ಒಟ್ಟು ನಿಮ್ನವರ್ಗದ ಅಧಿಕಾರಿಗಳ ಸಂಖ್ಯೆ—13, ಎಂದು ಹೇಳಿದೆ. ಕ್ಲಾಸ್ ಒಂದರಲ್ಲಿದ್ದ ಜನರಲ್ ಆಫೀಸರುಗಳ ಸಂಖ್ಯೆ—673, ಇದ್ದು ಈ ದರ್ಜೆಯಲ್ಲಿದ್ದ ನಿಮ್ನವರ್ಗದವರ ಸಂಖ್ಯೆ—13 ಮಾತ್ರ. ಇನ್ನು ಕ್ಲಾಸ್ ಎರಡರಲ್ಲಿ:—ಜನರಲ್ ಅಧಿಕಾರಿಗಳ ಸಂಖ್ಯೆ:—2,369 ಇದರಲ್ಲಿ ನಿಮ್ನವರ್ಗದವರ ಸಂಖ್ಯೆ—119 ಇನ್ನು ಕ್ಲಾಸ್ ಮೂರರಲ್ಲಿದ್ದ ಜನರಲ್ ಅಧಿಕಾರಿಗಳ ಸಂಖ್ಯೆ 68,838. ಈ ಹುದ್ದೆಯಲ್ಲಿದ್ದ ನಿಮ್ನವರ್ಗದವರ ಸಂಖ್ಯೆ-4289, ಕ್ಲಾಸ್—4ರಲ್ಲಿದ್ದ ಜನರಲ್ ವರ್ಗದವರ ಸಂಖ್ಯೆ—22,158, ನಿಮ್ನವರ್ಗದವರ ಸಂಖ್ಯೆ 2,255. ಹೀಗೆ ಒಟ್ಟಿನಲ್ಲಿದ್ದ ನಿಮ್ನವರ್ಗದವರ ಸಂಖ್ಯೆ-6,647. ನಿಜವಾಗಿಯೂ ಈ ಸಂಖ್ಯೆ ಬಹಳ ಕಡಿಮೆಯಿದೆ ಎಂಬುದು ಕಾಣುತ್ತದೆ. ಇನ್ನು ಮೂರು ವರ್ಷಗಳಲ್ಲಿ ಉದ್ಭವವಾಗತಕ್ಕ ಹುದ್ದೆಗಳ ಲೆಕ್ಕವನ್ನು ಸಹ ಕೊಟ್ಟಿದ್ದಾರೆ: ಕ್ಲಾಸ್ ಒಂದರಲ್ಲಿ—180 ಸ್ಥಾನಗಳು ಕ್ಲಾಸ್ ಎರಡರಲ್ಲಿ—1,016 ಸ್ಥಾನಗಳು, ಕ್ಲಾಸ್ ಮೂರರಲ್ಲಿ—17,796 ಮತ್ತು ಕ್ಲಾಸ್ 4ರಲ್ಲಿ—5,367 ಎಂದು ಹೇಳಿದ್ದಾರೆ. ಇನ್ನು ಮೂರು ವರ್ಷಗಳಲ್ಲಿ ಒಟ್ಟು 24,359 ಹುದ್ದೆಗಳಲ್ಲಿ 4,288 ಹುದ್ದೆಗಳು ಇವರಿಗೆ ಸಿಗಬೇಕೆಂದು ಹೇಳಿದ್ದಾರೆ. ಆದರೆ ಬೀರಪ್ಪ ವರದಿಯು ಬಂದು ಇಲ್ಲಿಗೆ ಎರಡು ವರ್ಷಗಳ ಮೇಲಾಯಿತು. ಇಲ್ಲಿಯವರೆಗೆ ಈ ಹುದ್ದೆಗಳಲ್ಲಿ ಎಷ್ಟು ಜನರನ್ನು ಭರ್ತಿಮಾಡಿದ್ದಾರೆಂದು ನಾನು ಕೇಳಬಯಸುತ್ತೇನೆ. ಇನ್ನು ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದ 17 ಜನ ಆ ಹರಿಜನ ಅಧಿಕಾರಿಗಳನ್ನು ಕೆಲಸದಿಂದ ಕಿತ್ತುಹಾಕಿರುತ್ತೀರಿ. ದೇಶಕ್ಕೆ ಸ್ವಾತಂತ್ರ ಬಂದಮೇಲೆ ಹರಿಜನರಿಗೆ ಆಗಿರತಕ್ಕ ಅನ್ಯಾಯಗಳಲ್ಲಿ ಇದು ಅತಿ ಹೆಚ್ಚಿನದು. ಸಾವಿರಾರು ಟೆಂಪರರಿ ಹುದ್ದೆಗಳನ್ನೆಲ್ಲಾ ರೆಗ್ಯುಲರೈಸ್ ಮಾಡಿ ಇವರನ್ನು ಕೈಬಿಡಲಾಗಿದೆ. ಕ್ಲಾಸ್ 3ರಲ್ಲಿದ್ದ ಇತರ ಇಬ್ಬರು ಅಧಿಕಾರಿಗಳನ್ನು ಅಪ್‌ಗ್ರೇಡ್ ಮಾಡಿ ಇತ್ತೀಚೆಗೆ ಅವರನ್ನು ರೆಗ್ಯುಲರೈಸ್ ಮಾಡಿರುತ್ತೀರಿ. ಹರಿಜನ ಅಧಿಕಾರಿಗಳನ್ನು ಕೈಬಿಟ್ಟು ಅದೆ ಹುದ್ದೆಯ ಹರಿಜನೇತರ ಅಧಿಕಾರಿಗಳನ್ನು ರೆಗ್ಯುಲರೈಸ್ ಮಾಡಲು ಕಾರಣವೇನು. ಇದನ್ನೆಲ್ಲಾ ನೋಡಿದರೆ ಹರಿಜನರ ವಿಷಯದಲ್ಲಿ ಎಷ್ಟರಮಟ್ಟಿಗೆ ಮಮತೆಯಿದೆಯೆಂಬುದು ಇದರಿಂದ ವೇದ್ಯವಾಗುತ್ತದೆ. ಅನೇಕ ಇರ್ರೆಗುಲರ್ ಹುದ್ದೆಗಳ ಬಗ್ಗೆ ಪಿ.ಎಸ್.ಸಿ. ಇಂದ ಕನ್‌ಕರೆನ್ಸ್ ತರಿಸಿದ್ದೀರಿ. ಈ ಹರಿಜನರ ವಿಚಾರದಲ್ಲೂ ಹಾಗೆ ಕನ್‌ಕರೆನ್ಸ್ ತರಿಸಬೇಕಾಗಿತ್ತು. ಅದನ್ನು ಮಾಡದೇ ಇರುವುದನ್ನು ನೋಡಿದರೆ ಇವರ ಬಗ್ಗೆ ಎಷ್ಟು ಮಮತೆಯಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಇನ್ನು

(ಶ್ರೀ ಬಿ. ಎಚ್. ಲಕ್ಷ್ಮಣಯ್ಯ)

ಒಬ್ಬ ಹರಿಜನ ಮಂತ್ರಿಗಳು ಅರಣ್ಯ ಇಲಾಖೆ ವಹಿಸಿಕೊಂಡಿದ್ದಾರೆ. ಅವರು ಆ ಇಲಾಖೆಯಲ್ಲಿ ಸ್ವಲ್ಪ ಅಭಿವೃದ್ಧಿ ಮಾಡಿರಬಹುದು. ಹೆಚ್ಚಿಗೆ ಹಣ ಸರ್ಕಾರಕ್ಕೆ ಬರುವಂತೆ ಪ್ರಯತ್ನಿಸಿರಬಹುದು, ಆ ಇಲಾಖೆಗೆ ಆದಾಯ ಬಂದಿರಬಹುದು ಆದರೆ ಅವರು ಹರಿಜನರ ವಿಷಯದಲ್ಲಿ ....

Mr. SPEAKER.—What is the use of my ringing the bell repeatedly, does he think that the Chair was no better business here?

ಶ್ರೀ ಬಿ. ಎಲ್. ಲಕ್ಷ್ಮಣಯ್ಯ.—ಇಷ್ಟು ಹೇಳಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ—ಜಮಖಂಡಿಯಲ್ಲಿ ಹರಿಜನ ಬೋರ್ಡಿಂಗ್ ಹೋಮಿನಲ್ಲಿ ನಡೆದ ಒಂದು ವಿಚಾರ ಘಟನೆಯನ್ನು ನಾನು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ: ಅಲ್ಲಿ ಶ್ರೀ ಎ. ಬಿ. ದೇಸಾಯಿ ಎಂಬುವವರು ಹರಿಜನ ಹೆಣ್ಣು ಮಗಳಮೇಲೆ ಅತ್ಯಾಚಾರ ನಡೆಸಿದ್ದಾರೆಂದು ಒಂದು ಪತ್ರಿಕೆಯಲ್ಲಿ ಬಂದಿದೆ. ಅದನ್ನು ತಮ್ಮ ಮೂಲಕ ಸರ್ಕಾರಕ್ಕೆ ಮುಂದಿನ ತನಿಖೆಯ ಬಗ್ಗೆ ಕೊಡುತ್ತೇನೆ. ಇನ್ನು ಈ ಬೋರ್ಡಿಂಗ್ ಹೋಂ ಬಗ್ಗೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆಂಬುದನ್ನು ಮಾನ್ಯ ಸಚಿವರ ಉತ್ತರ ಕೊಡುವಾಗ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ತಿಳಿಸಿದ ವಿಚಾರದ ಬಗ್ಗೆ ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು ಒಂದು ವಿಚಾರಣೆ ನಡೆಸಲು ಏನು ವ್ಯವಸ್ಥೆ ಮಾಡಿದ್ದಾರೆಂಬುದನ್ನೂ ಸಹಾ ತಿಳಿಸಬೇಕು. ಸಂತವಾಣಿ ಎಂಬ ಪತ್ರಿಕೆಯಲ್ಲಿ ಈ ವಿಚಾರ ಬಂದಿದೆ. ತಾ: 3-2-1964ರಲ್ಲಿ ಆ ರಾತ್ರಿ ಕುಮಾರಿ ಪಾರ್ವತಿ ಎಂಬ ಹರಿಜನ ಹುಡುಗಿಯ ಮೇಲೆ ಅತ್ಯಾಚಾರ ನಡೆಯಿತೆಂದು ತಿಳಿಸಿದೆ. ಇದನ್ನು ವಿಚಾರ ಮಾಡಬೇಕು. (ಅಂದು ದಿನ ಪತ್ರಿಕೆಯನ್ನು ಅಧ್ಯಕ್ಷರ ಕಡೆಗೆ ಕೊಡಲಾಯಿತು).

ಇನ್ನು ಎರಡನೆಯ ವಿಷಯವೆಂದರೆ:—ಶಿವಮೊಗ್ಗಾ ಜಿಲ್ಲಾ ತೀರ್ಥಹಳ್ಳಿಯ ತಾಲ್ಲೂಕಿನಲ್ಲಿ ಎರಡು ಹಳ್ಳಿಗಳಲ್ಲಿ ಒಂದು—ಹೆಗಲತ್ತಿ ಮತ್ತು ಇನ್ನೊಂದು ಹಳ್ಳಿ ಈ ಎರಡು ಹಳ್ಳಿಗಳಲ್ಲಿ ಸುಮಾರು ನೂರಾರು ಎಕರೆ ಜಮೀನನ್ನು ಕೇರಳದವರು ಬಂದು ಅಲ್ಲಿದ್ದ ಮರಮುಟ್ಟುಗಳನ್ನು ಕಡಿದು ಆ ಜಮೀನನ್ನು ಅಕ್ರಮದಿಂದ ಸಾಗುವಳಿ ಮಾಡುತ್ತಿದಾರೆಂದು ನಾವು ಇಲ್ಲಿ ಎಷ್ಟೋ ಸಾರ್ತಿ ಹೇಳಿದ್ದೇವೆ. ಈ ವಿಚಾರ ಶಿವಮೊಗ್ಗದಲ್ಲಿರತಕ್ಕ ಅರಣ್ಯ ಮತ್ತು ರೆವಿನ್ಯೂ ಇಲಾಖೆ ಅಧಿಕಾರಿಗಳಿಗೆಲ್ಲಾ ಗೊತ್ತಿದೆ, ಅಲ್ಲಿ ಅವರು ಅಣ್ಣಾನಾಯಕನ ಮನೆಯನ್ನು ಭಸ್ಮಮಾಡಿ, ಅಲ್ಲಿ ಅಕ್ಕಪಕ್ಕದಲ್ಲಿ ಜಂಗಮ್ಯಾರೂ ಬದುಕುವಂತೆಯೇ ಇಲ್ಲ. ಅಲ್ಲಿ ಅವರು ಕಾಡನ್ನೆಲ್ಲಾ ಭಸ್ಮಮಾಡಿದ್ದಾರೆ. ಹೀಗೆ ಕಾನುಗೋಡಿನ ಹತ್ತಿರವೂ ಒಂದು ಸಾವಿರ ಎಕರೆ ಜಮೀನನ್ನು ಅಕ್ರಮದಿಂದ ಸಾಗುವಳಿ ಮಾಡಿಕೊಂಡು ಬಂದಿದ್ದಾರೆಂದು ತಿಳಿದು ಬಂದಿದೆ. ಅದನ್ನು ತಡೆಗಟ್ಟುವುದಕ್ಕೆ ಸರ್ಕಾರದವರಿಗೆ ಇದುವರೆಗೂ ಸಾಧ್ಯವಾಗಿಲ್ಲ. ಆ ಜಮೀನನ್ನು ಅವರಿಂದ ಬಿಡಿಸಲು ಇವರಿಗೆ ಸಾಧ್ಯವಾಗಿಲ್ಲ........

Mr. SPEAKER.—Before I pass on the paper, I want to know whether (you) Sri Gopal Gowda is *bona fide* satisfied about the correctness of what is mentioned in this paper

The other day it was very seriously mentioned by two of the Hon'ble Members, whose names I need not mention again, that a certain paper had leaked and that was given to me. I was really shocked to hear it. After what happened last year and in spite of the care taken by Government, if such a thing were to repeat itself, I thought there must be something basically wrong with Government.

4-00 P.M.

Sri C. J. MUCKANNAPPA.—What I received by post I sent it on to the Chair.

There is this question—"summarise conversation the between the Yakhsha and Yudistara" I am just quoting from the question paper...

Mr. SPEAKER.—I am holding it over for tomorrow. I want the Hon'ble Members first to be staisfied about the *bona fides* of this......

Sri C. J. MUCKANNAPPA.—Sir, suppose, the Speaker receives a way complaint......

Mr. SPEAKER.—Can't the Hon'ble Memeber put it in a different rather than drag me in to a controversy ?

Sri C. J. MUCKANNAPPA.—Suppose I receive a letter in this heavenly State......

Mr. SPEAKER.—That is exactly what should not happen. Let the Hon'ble Member kindly hear me. This is what exactly should not happen. Simply because a member receives it by post, should he pass it on to the Speaker ? Is that his responsibility ?

Sri C. J. MUCKANNAPPA. There are certain cases where anonymous petitions have proved beyond doubt the truth of certain things.

Mr. SPEAKER.—I want every Hon'ble Member to make himself certain and be satisfied before he passes on such things to the Speaker.

Sri C. J. MUCKANNAPPA.—How is it possible to go and make an enquiry ? What will be the difficulty ?

Mr. SPEAKER.—Therefore does the Hon'ble Member feel that his responsibility is that whatever he receives anonymous petitions, etc., he is entitled to pass on the same on the Floor of the House to the Speaker and ask him to forward it to Government to hold investigation ?

Sri C. J MUCKANNAPPA.—If the Chair feels that I have irresponsibly behaved or made an irresponsible statement, it is equally so in the case of the Education Minister, who rushes to the Press saying that the Question Papers have not leaked out. At least, there is this one question , which I quoted, which has leaked out. There is this fifty per cent truth. But according to the Education Minister, it is 100 per cent falsehood.

Mr. SPEAKER.—He says, the Member has made an irresponsible statement, the Eudcation Minister too has done something ...I do not understand his logic.

Sri C. J. MUCKANNAPPA.—There is fifty per cent truth in this, Sir.

Mr. SPEAKER.—There may be 100 per cent. But the Member should consider the gravity and status of an anonymous petition before communicating it to the House and to the Speaker.

ಶ್ರೀ ಎಸ್. ಗೋಪಾಲ ಗೌಡ.–ಈಗ ಸಮಯವಲ್ಲದ ಭಾಷಣ ಮಾಡಬಾರದು ಎಂಬುದಾಗಿ ತಾವು ನನಗೆ ಹೇಳಿದಿರಿ. ಆ ಪತ್ರಿಕೆಯನ್ನು ತಮಗೆ ಕೊಟ್ಟಿದ್ದೇನೆ, ಆ ಪತ್ರಿಕೆಯನ್ನು ಕೊಟ್ಟಿದ್ದಕ್ಕೆ ತಮಗೆ ಹಕ್ಕು ಬರುತ್ತದೆಂದು ತಿಳಿದುಕೊಳ್ಳಬಾರದು. ಅದನ್ನು ತಾವು ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ತಾವು ಮಾಡಬೇಕಾದುದು ಅಷ್ಟು!

ಅಧ್ಯಕ್ಷರು.—ನಾನು ಮಾಡಬೇಕಾದುದು ಅಷ್ಟೇ ಎಂದು ಸದಸ್ಯರು ಹೇಳುವುದಕ್ಕಾಗುವುದಿಲ್ಲ. ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಡಬೇಕು. ನನ್ನ ಕರ್ತವ್ಯ ನಾನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ನಾನು ಕೇಳಿದ ಪ್ರಶ್ನೆಗೆ ಉತ್ತರ ಗೊತ್ತಿಲ್ಲವೆಂದು ಅವರು ಹೇಳಿದರೆ ನಾನು ಆ ಪತ್ರಿಕೆಯನ್ನು ಸರ್ಕಾರಕ್ಕೆ ಕೊಡುವುದಿಲ್ಲ.

ಶ್ರೀ ಎಸ್. ಗೋಪಾಲ ಗೌಡ —ಕೊಡದಿದ್ದರೆ ಅದನ್ನು ಹರಿದು ಹಾಕಿ, ಕಸದ ಬುಟ್ಟಿಗೆ ಹಾಕಿ, ಅಥವಾ ಸುಟ್ಟು ಹಾಕಿ, ನಾನಂತೂ ಆ ವಿಷಯವನ್ನು ಈ ಸಭೆಯಲ್ಲಿ ಹೇಳಿದ್ದೇನೆ; ಪತ್ರಿಕೆಯನ್ನು ಕೊಟ್ಟಿದ್ದೇನೆ.

Mr. SPEAKER.—I am prepared to take serious notice and pass it on to the Government for enquiry.

ಶ್ರೀ ಎಸ್. ಗೋಪಾಲ ಗೌಡ.—ಎರಡು ಘಟನೆಗಳ ಬಗ್ಗೆ......

Mr. SPEAKER.—The Hon'ble Member may kindly resume his seat. What is it that Sri Muckannappa wants ?

(Sri S. Gopala Gowda was trying to speak.)

Mr. SPEAKER.—I am not allowing Sri Gopala Gowda to speak.

ಶ್ರೀ ಎಸ್. ಗೋಪಾಲ ಗೌಡ.—ನನ್ನ ಹತ್ತಿರ ಈ ತರಹ ವ್ಯವಹಾರ ಮಾಡುತ್ತಿದ್ದೀರಿ ಎಂದು ನೋಡಿ ನನಗೆ ಬಹಳ ವಿಷಾದವಾಗುತ್ತದೆ. ಈ ಎರಡು ಘಟನೆಗಳ ಬಗ್ಗೆ ನನಗೆ ಗೊತ್ತಿರುವುದನ್ನು ಹೇಳೋಣವೆಂದರೆ ತಾವು ನನ್ನನ್ನು ದಬಾವಣೆ ಮಾಡಿ ಕುಳ್ಳಿರಿಸುವುದಕ್ಕೆ ಪ್ರಯತ್ನ ಮಾಡಿದರೆ, ಇನ್ನು ನಾನೇನು ಮಾಡಲಿ ?

ಅಧ್ಯಕ್ಷರು.—ಶ್ರೀಮಾನ್ ಗೋಪಾಲ ಗೌಡರು, ದಯವಿಟ್ಟು ಕುಳಿತುಕೊಳ್ಳಬೇಕು. Order, Order. I am very sorry. What does the Hon'ble Member mean ?

ಶ್ರೀ ಎಸ್. ಗೋಪಾಲ ಗೌಡ.—ಕುಳಿತುಕೊಳ್ಳುವುದಿಲ್ಲ, ನನ್ನಿಂದ ಸಾಧ್ಯವಿಲ್ಲ.

Mr. SPEAKER.—I ask the member to retire from the House.

ಶ್ರೀ ಎಸ್. ಗೋಪಾಲ ಗೌಡ.—ಬೇಕಾದ್ದು ಮಾಡಿ........

(Sri S. Gopala Gowda retired from the House).

Mr. SPEAKER.—What does the Hon'ble Member mean by asking me to throw it in to the waste paper basket ? Is it the language to be used in the House? Such papers should never be given to the Speaker. If this is repeated, I will have to take 'stronger act on. What does the Hon'ble Member mean by saying throw it in to the waste paper basket' ? Was that the purpose for which it was given to me ? I want the Hon'ble Member to be satisfied that there is something *bona fide*. If he is not prepared to take that much of responsibility, am I a post office to pass it on to the Government ?

Sri C. J. MUCKANNAPPA.—Even supposing I am convinced of the *bona fides* of the paper, suppose the Government makes an enquiry, for reasons of prestige, they may say that what is contained in the paper is false. Please give me an opportunity to explain. Mr. Jatti is already just on his springs. It is Government machinery which makes the enquiry and not I and you. For reasons of prestige, they may say that it is false, it is yellow journalism which we need not regard. Then what is my fate ?

Mr. SPEAKER.—First of all members must themselves be honestly satisfied. If they are satisfied, I am here to protect them, if I am satisfied. If they are not themselves satisfied, how can I be satisfied ? How can I pass it on to the Government, if the members do not have the courtesy or keenness to see that I am satisfied ? I am simply pass it on and if I don't feel like it, I may throw it in to the waste paper basket—what does this mean ?

Sri C. J. MUCKANNAPPA.—Sir, then, the Chair is giving a good handle to the Press to publish such information.

Mr. SPEAKER.—Publish which information ?

Sri C. J. MUCKANNAPPA.—Such information, Sir. There is the Editor, who has declared himself as an Editor and Publisher of a paper. How dares he enough to publish such things and distribute it to the world? Therefore Government should look into such things.

Mr. SPEAKER.—Now the responsibility of the Press, the Editor or the Publisher, the Editor being taken to task under Press law all this is somethng different from the status of a member. It is radically different.

Sri Sri C. J. MUCKANNAPPA.—Sir, today, we are in a different world. What is happening in U.P.? The High Court Judges were summoned. Warrants were issued for their arrest and production before the House. What are your powers today? After all, what is the power bestowed on the Speaker of the House?

Mr. SPEAKER.—The Hon'ble Member is going away from the point.

C. J. MUCKANNAPPA.—I have just given an example.

Mr. SPEAKER.—What has the U.P. affair got to do with this?

Sri C. J. MUCKANNAPPA.—Such tremendous changes are taking place in history.........

Mr. SPEAKER.—What is the relevancy?

Sri C. J. MUCKANNAPPA.—That is what I would like to State. Because an irresponsible publication has been made, people believe that there is such a thing and that has happened. I believed it. I belived such a thing might have happened and I thought it a matter to be brought to the notice of the Government through the Speaker. It is up to the Government if there is such an irresponsible publication to pull up that Press.

Mr. SPEAKER.—If the Press has printed something irresponsible. I want members to be responsible and not at all believe any sush irresponsible statements. That was why I began by saying—if the members are satisfied in their mind, not in my mind, I am prepared to have it enquired into. If the members are not prepared to tell me that they are satisfied, what should I do? Because there is a piece of publication by an editor who has declared himself under the Press regulation or under any other Statute, is it open to any Hon'ble Member to bring it here, and ask him to have it enquired into? If all such things are brought here and the members ask that an enquiry should be made—is that all the within the scope of the Business of the House?

Sri C. J. MUCKANNAPPA.—What is to be brought... .....

Mr. SPEAKER.—Let us not discuss it any more.

Sri C. J. MUCKANNAPPA.—Sir, you dragged me......

Mr. SPEAKER.—I did not. Did I drag the member? He must be a little careful about his words. So far as this paper is concerned, there is no leakage and I have no intention of passing it on. But if the member wants more time, I will deal with it tomorrow.

Sri C. J. MUCKANNAPPA.—I was going through the paper and the moment you mentioned by name......

Mr. SPEAKER.—Because the member you said that he got it from the pigeonhole.

The Hon'ble Minister may reply to the debate.

† ಶ್ರೀಮತಿ ಯಶೋಧರ ದಾಸಪ್ಪ (ಸಮಾಜ ಕಲ್ಯಾಣ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದುವರೆಗೂ ಸಮಾಜ ಕಲ್ಯಾಣ ವಿಚಾರವಾಗಿ ಈ ಮಾನ್ಯ ಸಭೆಯ ಸದಸ್ಯರು ಕೊಟ್ಟಿರುವ ಸಲಹೆ ಮತ್ತು ಟೀಕೆಗಳ ವಿಚಾರವಾಗಿ ಅಂಕಿಅಂಶಗಳೊಡನೆ ಈ ಮಾನ್ಯ ಸಭೆಗೆ ಸರ್ಕಾರದವರಿಂದ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳು ನಡೆದಿವೆ, ಎಷ್ಟು ಈ ಕಾರ್ಯಕ್ಕೆ ಖರ್ಚಾಗಿದೆ, ವಿನಿಯೋಗ ವಾಗಿದೆ, ಈ ಹಣ ಯಾವ ಯಾವ ರೀತಿಯಲ್ಲಿ ಸದುಪಯೋಗವಾ ಗಿದೆ, ದುರುಪಯೋಗವಾಗಿದೆ ಎಂಬುದನ್ನು ಯಾವ ರೀತಿಯ ಮುಚ್ಚುಮರೆಯೂ ಇಲ್ಲದೆ ಸತ್ಯಾಂಶದೊಡನೆ ಈ ಮಾನ್ಯ ಸಭೆಯ ಎದುರಿನಲ್ಲಿ ಇಡಲು ನಾನು ಬಯಸುತ್ತೇನೆ. ಕೆಲವು ಮಾನ್ಯ ಸದಸ್ಯರು ಈ ಹಣ ಎಷ್ಟು ಖರ್ಚಾಗಿದೆ, ಯಾವ ರೀತಿ ಆಗಿದೆ ಎನ್ನುವುದನ್ನು ಅಂಕಿ ಅಂಶಗಳೊಡನೆ ತಿಳಿಸಬೇಕು ಎಂದು ಹೇಳಿದರು. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಳೆಯ ಮೈಸೂರಿಗೆ 100 ಲಕ್ಷ 34 ಸಾವಿರ ರೂಪಾಯಿಗಳು ಖರ್ಚಾಗಿದೆ. ಎರಡನೆಯ ಮತ್ತು ಮೂರನೆಯ ಯೋಜನೆಯಲ್ಲಿ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮುಗಳಿಗೆ ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ 473 ಲಕ್ಷ 52 ಸಾವಿರ ರೂಪಾಯಿಗಳು ಖರ್ಚಾಗಿವೆ. ಷೆಡ್ಯೂಲ್ ಟ್ರೈಬಿನವರಿಗೆ 51 ಲಕ್ಷ 83 ಸಾವಿರ ರೂಪಾಯಿಗಳು ಖರ್ಚಾಗಿದೆ. ಡೀನೋಟಿಫೈಯ್ಡ್ ಟ್ರೈಬ್ಸ್‌ಗೆ 47 ಲಕ್ಷ 28 ಸಾವಿರ ರೂಪಾಯಿಗಳು, ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್‌ನವರಿಗೆ 14 ಲಕ್ಷ 5 ಸಾವಿರ ರೂಪಾಯಿಗಳು, ಉಳಿದ ಹಿಂದುಳಿದ ವರ್ಗದವರಿಗೆ 33 ಲಕ್ಷ 47 ಸಾವಿರ ರೂಪಾಯಿಗಳು ಖರ್ಚಾಗಿವೆ. ಎಲ್ಲಾ ಸೇರಿ ಒಟ್ಟು 620 ಲಕ್ಷ 15 ಸಾವಿರ ರೂಪಾಯಿಗಳು ಖರ್ಚಾಗಿದೆ. ಜನಸಂಖ್ಯೆ 1961ನೇ ಇಸವಿಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರು 31,17,000 ಜನಗಳಿದ್ದರು, 1,92,000 ಜನ ಷೆಡ್ಯೂಲ್ ಟ್ರೈಬ್ಸ್‌ನವರು ಇದ್ದರು. ಡೀನೋಟಿಫೈಡ್ ಟ್ರೈಬ್ಸ್‌ನವರು 6,60,000 ಜನಗಳಿದ್ದರು. ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್‌ನವರು 4,00,000 ಜನಗಳಿದ್ದರು. ಈಗ ಒಟ್ಟು ನಮ್ಮ ರಾಜ್ಯದ ಜನ ಸಂಖ್ಯೆ 2 ಕೋಟಿ 36 ಲಕ್ಷ ಜನರಿದ್ದಾರೆ. ಈ ಜನ ಸಂಖ್ಯೆಯ ಆಧಾರದ ಮೇಲೆ ಒಟ್ಟಿಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮಾಜ ಕಲ್ಯಾಣಕ್ಕಾಗಿ ಒದಗಿಸಿರುವುದು 440 ಲಕ್ಷ ರೂಪಾಯಿಗಳು. ಅದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರ ಕಲ್ಯಾಣಕ್ಕಾಗಿ 215 ಲಕ್ಷ ರೂಪಾಯಿಗಳು, ಷೆಡ್ಯೂಲ್ಡ್ ಟ್ರೈಬ್ಸ್‌ನವರ ಕಲ್ಯಾಣಕ್ಕಾಗಿ 55 ಲಕ್ಷ ರೂಪಾಯಿಗಳು, ಡೀನೋಟಿಫೈಡ್‌ನವರ ಕಲ್ಯಾಣಕ್ಕಾಗಿ 46 ಲಕ್ಷ ರೂಪಾಯಿಗಳು, ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್‌ನವರಿಗೆ 6 ಲಕ್ಷ ರೂಪಾಯಿಗಳನ್ನೂ ಇನ್ನು ಉಳಿದದ್ದನ್ನು ಉಳಿದ ಹಿಂದುಳಿದ ವರ್ಗದವರಿಗೂ ಒದಗಿಸಲಾಗಿದೆ. ಈ ಮೂರನೇ ಯೋಜನೆಯಲ್ಲಿ ಒಟ್ಟು ಒದಗಿಸಿದ್ದ ಹಣದಲ್ಲಿ ಇದುವರೆಗೂ ಖರ್ಚಾಗಿರತಕ್ಕದ್ದು 240 ಲಕ್ಷ ರೂಪಾಯಿಗಳು. ಇನ್ನು 1966ನೇ ಇಸವಿಯ ಕೊನೆಯವರೆಗೆ ನಮಗೆ 220 ಲಕ್ಷ ರೂಪಾಯಿಗಳು ಸಲ್ಲಬೇಕಾಗಿದೆ. ಈ ವರ್ಷದ ಯೋಜನೆಯಲ್ಲಿ ಸಿಬ್ಬಂದಿಗೋಸ್ಕರ 10.592 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಹಾಸ್ಟೆಲ್, ಸ್ಕೂಲ್ಸ್, ಮಿಡ್ ಡೇ ಮೀಲ್ಸ್ ಮತ್ತು ಸ್ಕಾಲರ್‌ಷಿಪ್‌ಗೋಸ್ಕರ 29.182 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ವೆಲ್‌ಫೇರ್ ಆಫ್ ಷೆಡ್ಯೂಲ್ಡ್ ಟ್ರೈಬ್ಸ್‌ಗೋಸ್ಕರ 2.885 ಲಕ್ಷ ರೂಪಾಯಿಗಳು ಒದಗಿಸಲಾಗಿದ. ವೆಲ್‌ಫೇರ್ ಆಫ್ ಅದರ್ ಬ್ಯಾಕ್ ವರ್ಡ್ ಕ್ಲಾಸಿನವರಿಗೆ 1.166 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ವೆಲ್‌ಫೇರ್ ಆಫ್ ಡಿನೋಟಿಫೈಯ್ಡ್ ಟ್ರೈಬ್ಸ್‌ಗೋಸ್ಕರ 1.233 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ವೆಲ್‌ಫೇರ್ ಆಫ್ ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್‌ಗೋಸ್ಕರ 0.472 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. Award of Government of India Post-Matric Scholarships to Scheduled Casts, Scheduled Tribes andother Backward classes 22 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಪಬ್ಲಿಕ್ ಹೆಲ್ತ್‌ಗೋಸ್ಕರ 0.813 ರೂಪಾಯಿಗಳನ್ನು ಒದಗಿಸಲಾಗಿದೆ. Maintenance of Women Welfare Centres ಗೋಸ್ಕರ 7.607 ರೂಪಾಯಿಗಳನ್ನು ಒದಗಿಸಲಾಗಿದೆ. Maintenance of tailoring units 1.190 lakhs. Contribution to Scheduled Castes and Scheduled Tribes Amelioration Fund 1.00. ಅಂತೂ ಇವುಗಳಿಗೆಲ್ಲಾ ಒಟ್ಟು 78.14 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಆಮೇಲೆ under the Plan during 1964-65. State ಸರ್ಕಾರಿನಲ್ಲಿ 55 ಲಕ್ಷ ರೂಪಾಯಿಗಳು ಬಂದಿದೆ. ಇದರಲ್ಲಿ welfare of scheduled castes 30.67 lakhs. Completion of incomplete Hostel buildings 3.71 lakhs. Welfare of Sceduled tribes 6.87 lakhs. Welfare of Denotified tribes 5.75 lakhs. Welfare of Nomadic and Semi-Nomadic tribes 4.50 lakhs. Welfare of other Backward classes 3.50 lakhs. ಆಮೇಲೆ ಸೆಂಟ್ರಲ್ ಸರ್ಕಾರಿನಿಂದ ಬಂದಿರತಕ್ಕದ್ದು welfare of

scheduled castes (Sweepers and Scavengers 4 lakhs. Welfare of scheduled tribes 4 lakhs. Welfare of denotified tribes 6 lakhs. ಎಲ್ಲರಿಗೂ ಒಟ್ಟಿಗೆ ಸೇರಿ 14 ಲಕ್ಷ ರೂಪಾಯಿಗಳು. ಸ್ಟೇಟ್ ಸೆಕ್ಟಾರ್ ಮತ್ತು ಸೆಂಟ್ರಲ್ ಸೆಕ್ಟಾರ್ ಸೇರಿ 64 ಲಕ್ಷ ರೂಪಾಯಿಗಳಾಗುತ್ತವೆ. Under plan 69 lakhs. Under non-plan 78.14 lakhs. ಪ್ಲಾನ್ಡ್ ಮತ್ತು ನಾನ್-ಪ್ಲಾನ್ಡ್ ಎಲ್ಲಾ ಸೇರಿ 147.14 ಲಕ್ಷ ರೂಪಾಯಿಗಳಾಗುತ್ತವೆ. ಸಮಾಜ ಕಲ್ಯಾಣ ಖಾತೆಗೆ 3ನೇ ಯೋಜನೆಯಲ್ಲಿ ಇಷ್ಟು ಹಣ ಖರ್ಚಾಗುತ್ತದೆ. ಇದರಲ್ಲಿ ವಿದ್ಯಾಭ್ಯಾಸಕ್ಕೋಸ್ಕರ ಎಷ್ಟು ಹಣ ಖರ್ಚಾಗಿದೆ ಎನ್ನುವ ವಿಷಯವನ್ನು ವಿಶದವಾಗಿ ಹೇಳಿದರೆ ಮಾನ್ಯ ಸದಸ್ಯರಿಗೆ ಗೊತ್ತಾಗುತ್ತದೆ. ಕೆಲವು ಮಾನ್ಯ ಸದಸ್ಯರು ಹರಿಜನರ ಸಮಾಜ ಕಲ್ಯಾಣ ಕೆಲಸ ಯಾವ ರೀತಿಯಲ್ಲೂ ಸುಧಾರಣೆ ಆಗಿಲ್ಲ. ಈ ಹಣ ಸರಿಯಾದ ರೀತಿಯಲ್ಲಿ ಉಪಯೋಗವಾಗಿಲ್ಲ ಎಂದು ಹೇಳಿದರು. ಆಮೇಲೆ ಮೆರಿಟ್ ಸ್ಕಾಲರ್‌ಷಿಫ್ ವಿಚಾರವನ್ನು ಸಹ ಹೇಳಿದರು. ಇದರಲ್ಲಿ ಎರಡು ಸಲ ಮೆರಿಟ್ ಸ್ಕಾಲರ್‌ಷಿಪ್ ಕೊಟ್ಟಿದ್ದೇವೆ. ಮೊದಲನೆಯ ಸಾರಿ ಮೆರಿಟ್ ಸ್ಕಾಲರ್ 8.77 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಅದರ ಮೇಲೆ ಸುಮಾರು 12 ಸಾವಿರ ಜನ ಮಿಡಲ್ ಸ್ಕೂಲ್ ಮಕ್ಕಳಿಗೆ ಮತ್ತು ಸುಮಾರು 3,700 ಜನ ಹೈಸ್ಕೂಲು ವಿದ್ಯಾರ್ಥಿಗಳಿಗೆ ಮೆರಿಟ್ ಸ್ಕಾಲರ್ ಷಿಪ್ ಎಂದು 50 ನಂಬರಿಗಿಂತ ಹೆಚ್ಚಿಗೆ ನಂಬರನ್ನು ತೆಗೆದುಕೊಂಡಿರತಕ್ಕವರಿಗೆ 50 ರೂಪಾಯಿ ಮತ್ತು 75 ರೂಪಾಯಿಗಳನ್ನು ಈಗ ಎರಡು ವರ್ಷಗಳಿಂದ ಕೊಟ್ಟಿದೆ. ಮಕ್ಕಳು ವಿದ್ಯಾವಂತರಾಗ ಬೇಕು ಎನ್ನುವ ಅಪೇಕ್ಷೆಯಿಂದ ಅವಕ್ಕಾಗಿ 14 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದು ಅದರಲ್ಲಿ 8.77 ಲಕ್ಷ ರೂಪಾಯಿಗಳ ಮೆರಿಟ್ ಸ್ಕಾಲರ್‌ಷಿಪ್ ಕೊಟ್ಟಿದ್ದೇವೆ. ಎಷ್ಟು ಜನ ಮಕ್ಕಳಿಗೆ ಇದನ್ನು ಇನ್ನು ಮುಂದೆಯೂ ಮುಂದುವರಿಸಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಇಂಡಿಯಾ ಸರ್ಕಾರದಿಂದ ಬರತಕ್ಕ ಹಣವನ್ನು ಮಕ್ಕಳ ಸ್ಕಾಲರ್‌ಷಿಪ್‌ಗೋಸ್ಕರ ಕೊಟ್ಟಿದ್ದೇವೆ ಹರಿಜನರ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವುದಕ್ಕೋಸ್ಕರ ಸೆಂಟ್ ಪರ್ಸೆಂಟ್ ಇಂಡಿಯಾ ಸರ್ಕಾರದವರಿಂದ ಬರುತ್ತದೆ. ಪೋಸ್ಟ್ ಮೆಟ್ರಿಕ್ ಯೋಜನೆಯಲ್ಲಿ ಸ್ಕಾಲರ್‌ಷಿಪ್‌ಗೋಸ್ಕರ 55½ ಲಕ್ಷ ರೂಪಾಯಿಗಳು ಷೆಡ್ಯೂಲ್ ಕ್ಯಾಸ್ಟಿನವರಿಗೆ ಬಂದಿದೆ. ¾ ಲಕ್ಷ ರೂಪಾಯಿ ಷೆಡೂಲ್ಡ್ ಟ್ರೈಬಿನವರಿಗೆ ಬಂದಿದೆ. 37½ ಲಕ್ಷ ರೂಪಾಯಿಗಳು ಇತರ ಹಿಂದುಳಿದ ವರ್ಗದವರ ಮಕ್ಕಳಿಗೆ ಬಂದಿದೆ. ಇದರಲ್ಲಿ 12,277 ಜನ ಹರಿಜನ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಸಿಕ್ಕಿದೆ. 136 ಜನ ಷೆಡ್ಯೂಲ್ಡ್ ಟ್ರೈಬಿನವರಿಗೆ ಸ್ಕಾಲರ್ ಷಿಪ್ ಸಿಕ್ಕಿದೆ. 4,600 ಜನ ಬೇರೆ ಹಿಂದುಳಿದವರ ಮಕ್ಕಳಿಗೆ ಸ್ಕಾಲರ್‌ಷಿಪ್ ಸಿಕ್ಕಿದೆ. 1959 ರಿಂದ 1963 ರವರೆಗೆ ಸ್ಕಾಲರ್‌ಷಿಪ್‌ಗೋಸ್ಕರ ಇಂಡಿಯಾ ಸರ್ಕಾರದಿಂದ ರಾಜ್ಯ ಸರ್ಕಾರದವರಿಗೆ 93,49,000 ರೂಪಾಯಿಗಳು ಸಂದಾಯವಾಗಿದೆ.

ನಮ್ಮ ಸಂಸ್ಥಾನದಿಂದ ನಾನ್‌ಪ್ಲಾನ್ಡ್ ಸ್ಕೀಂಗಳಲ್ಲಿ ಪ್ರತಿವರ್ಷ ವಿದ್ಯಾಭ್ಯಾಸಕ್ಕೋಸ್ಕರ ಖರ್ಚುಮಾಡತಕ್ಕದ್ದು, ಹಾಸ್ಟಲುಗಳನ್ನು ಮುಂದುವರೆಸುವುದಕ್ಕೆ 12,49,110 ರೂಪಾಯಿ, ಮಿಡ್‌ಡೇ ಮೀಲ್ಸ್‌ಗೋಸ್ಕರ 1,50,000 ರೂಪಾಯಿ, ಮೇಂಟೆನೆನ್ಸ್ ಆಫ್ ಹರಿಜನ್ ವೆಲ್‌ಫೇರ್ ಸೆಂಟರ್ಸ್ 44 ಸಾವಿರ ರೂಪಾಯಿ, ಅವಾರ್ಡ್ ಆಫ್ ಸ್ಕಾಲರ್‌ಷಿಪ್ಸ್ ಅಂಡ್ ಸ್ಟೈಪೆಂಡ್ಸ್ 3,45,000 ರೂಪಾಯಿ ಪೇಮೆಂಟ್ ಆಫ್ ಟ್ಯೂಷನ್ ಫೀ—ಒಬ್ಬ ಸದಸ್ಯರು ಮಾತನಾಡುತ್ತ ಟ್ಯೂಷನ್ ಕೊಟ್ಟರೆ ಒಳ್ಳೆಯದು ಎಂದು ಹೇಳಿದರು—ಟ್ಯೂಷನ್ ಫೀ ಕೊಡಲು 19,7000 ರೂಪಾಯಿ ಖರ್ಚು ಮಾಡಿದ್ದೇವೆ. ಗ್ರಾಂಟ್ ಇನ್ ಎಡ್ ಟು ರೆಕಗ್ನೈಸ್ಡ್ ಹಾಸ್ಟಲ್ಸ್ 4 ಲಕ್ಷ ರೂಪಾಯಿ, ಹೀಗಾಗಿ, ಪ್ರತಿ ವರ್ಷ ನಾನ್‌ಪ್ಲಾನ್ಡ್ ಸ್ಕೀಮುಗಳಲ್ಲಿ 22,57,810 ರೂಪಾಯಿಗಳ ಖರ್ಚು ಬರುತ್ತದೆ. ಮೆರಿಟ್ ಸ್ಕಾಲರ್‌ಷಿಫ್‌ಗಾಗಿ 8,77,000 ರೂಪಾಯಿಗಳೂ ಸೇರಿ ಒಟ್ಟು 31,34,810 ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕೋಸ್ಕರ ನಾನ್‌ಪ್ಲಾನ್ಡ್ ಸ್ಕೀಂಗಳಲ್ಲಿ ಖರ್ಚು ಮಾಡುತ್ತಿದ್ದೇವೆ.

ಹಾಸ್ಟಲುಗಳಿಲ್ಲ ಎಂದು ಕೆಲವರು ಹೇಳಿದರು. ಇರುವ ಹಾಸ್ಟಲುಗಳು ಕೆಲವು ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಹೇಳಿದರು. ಸಮಾಜಕಲ್ಯಾಣ ಇಲಾಖೆಯಿಂದ 195 ಹಾಸ್ಟಲುಗಳು ಷೆಡ್ಯೂಲ್‌ಕ್ಯಾಸ್ಟ್ ವಿದ್ಯಾರ್ಥಿಗಳಿಗೋಸ್ಕರ ನಡೆಯುತ್ತಿವೆ. ಅದರಲ್ಲಿ 122 ಎರಡನೆಯ ಯೋಜನೆಯ ಕೊನೆಯ ಹೊತ್ತಿಗೆ ಇದ್ದುವು. ಮೂರನೆಯ ಯೋಜನೆಯಲ್ಲಿ 73 ಹೆಚ್ಚಾಗಿ ಆಗಿವೆ. ಅದಕ್ಕಾಗಿ 35.80 ಲಕ್ಷ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಕೆಲವು ಪ್ರಾರಂಭವಾಗಿವೆ ಈಗಾಗಲೇ 23,44,000 ರೂಪಾಯಿಗಳು ಕಟ್ಟಡಗಳಿಗಾಗಿ ಖರ್ಚಾಗಿದೆ. ಅನೇಕ ಸದಸ್ಯರು ಹೇಳಿದರು ಹಾಸ್ಟಲುಗಳನ್ನು ಹೊಸದಾಗಿ ಏಕೆ ಮಾಡುತ್ತ ಇಲ್ಲ ಎಂದು. ಎಷ್ಟೋ ಹಾಸ್ಟಲುಗಳು ಅರ್ಧ ಮರ್ಧವಾಗಿವೆ. ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, ಅನೇಕ ಕಡೆ ದೊಡ್ಡ ದೊಡ್ಡ ಕಟ್ಟಡಗಳಾಗಿವೆ ಆದರೆ ಅಡಿಗೆ ಮನೆ, ನೀರುಮನೆ, ಕಕ್ಕಸು, ಬಾವಿ ಇಲ್ಲವೆ ಇರತಕ್ಕ ಅನೇಕ ಹಾಸ್ಟಲುಗಳನ್ನು ನಾನು ಹೋದ ಕಡೆಗಳಲ್ಲೆಲ್ಲ ನೋಡಿಕೊಂಡು ಬಂದಿದ್ದೇನೆ. ಆದುದರಿಂದ ಅರ್ಧಮರ್ಧ ಆಗಿರುವ

(ಶ್ರೀಮತಿ ಯಶೋಧರ ದಾಸಪ್ಪ)

ಹಾಸ್ಟಲುಗಳನ್ನು ಸರಿಪಡಿಸುವುದಕ್ಕೆ ಹೆಚ್ಚಿನ ಗಮನ ಕೊಡುವುದು ನನ್ನ ಕೆಲಸವಾಗಿದೆ. ಎಂದರೆ ಅರ್ಧಮರ್ಧ ಆಗಿರುವ ಕಾಲೋನಿಗಳು, ಅರ್ಧಮರ್ಧ ಆಗಿರುವ ಮನೆಗಳು, ಅರ್ಧಮರ್ಧ ಆಗಿರುವ ಕಮ್ಯೂನಿಟಿ ಸೆಂಟರ್ಸ್ ಇವುಗಳಿಗೆ ಏನು ಹಣವನ್ನು ಈಗ ಮೂರನೆ ಯೋಜನೆಯಲ್ಲಿ ಕೊಟ್ಟಿರುತ್ತಾರೆಯೋ ಅದನ್ನು ಖರ್ಚುಮಾಡಿಕೊಂಡು ಎಲ್ಲಿ ಅವಶ್ಯಕತೆ ಇದೆಯೋ, ಎಲ್ಲಿ ಹರಿಜನರ ಸಂಖ್ಯೆ ಹೆಚ್ಚಾಗಿದೆಯೋ, ಬಡತನ ಜಾಸ್ತಿಯಾಗಿದೆಯೋ, ಎಲ್ಲಿ ಬಹಳ ಹಿಂದುಳಿದಿದ್ದಾರೆಯೋ ಅಂಥ ಕಡೆ ಒಂದೊಂದು ಕಾಲೊನಿಯನ್ನು ಕಟ್ಟುವುದು, ಒಂದೊಂದು ಹಾಸ್ಟಲನ್ನು ಕಟ್ಟುವುದು ಇಷ್ಟು ಸಾಧ್ಯವಾಗುತ್ತದೆಯೋ ಹೊರತು ಎಲ್ಲ ಕಡೆಯೂ ಕಟ್ಟುವುದಕ್ಕಾಗುತ್ತ ಇಲ್ಲ. ಈಗಾಗಲೇ 16 ಡಿಸ್ಟ್ರಿಕ್ಟ್‌ಗಳಲ್ಲಿ, ಹೆಡ್‌ಕ್ವಾರ್ಟರ ಸ್ಥಳಗಳಲ್ಲಿ ಹಾಸ್ಟಲುಗಳಿವೆ. ಮೂರು ಡಿಸ್ಟ್ರಿಕ್ಟಗಳಲ್ಲಿ ಇಲ್ಲ. ಅಲ್ಲಿ ಅಮಿಲಿಯೋರೇಷನ್ ಫಂಡ್‌ನಿಂದ ಹಣವನ್ನು ತೆಗೆದುಕೊಂಡು ಕಾರವಾರ, ಮಂಗಳೂರು, ಮತ್ತು ಶಿವಮೊಗ್ಗ ಈ ಮೂರು ಜಿಲ್ಲೆಗಳಲ್ಲಿ ಹಾಸ್ಟಲ್ ಇಲ್ಲದೆ ಇರುವುದರಿಂದ ಅಲ್ಲಿ ಕಟ್ಟಲು ಪ್ರಯತ್ನ ಮಾಡಿದ್ದೇವೆ. ಈಗ 29 ತಾಲ್ಲೂಕುಗಳಲ್ಲಿ ಹಾಸ್ಟಲುಗಳಿಗೆ ಸ್ವಂತ ಕಟ್ಟಡಗಳಿವೆ. ಉಳಿದ ತಾಲ್ಲೂಕುಗಳಲ್ಲಿ ಫೇಸ್ಡ್ ಪ್ರೋಗ್ರಾಂ ಹಾಕಿಕೊಂಡು ಎಷ್ಟು ಸಾಧ್ಯವೋ ಅಷ್ಟನ್ನೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಅರ್ಧಮರ್ಧ ಆಗಿರುವ ಹಾಸ್ಟಲುಗಳನ್ನು ಸರಿಪಡಿಸುವುದಕ್ಕೆ ಇಷ್ಟು ಹಣ ಖರ್ಚಾಗಿದೆ ಎನ್ನುವುದನ್ನು ತಾವೆಲ್ಲರೂ ದಯವಿಟ್ಟು ತಿಳಿಯಬೇಕು.

ಶ್ರೀ ಗೋಪಾಲ ಸಾರೆನ್ನ.—ಮಂಗಳೂರಿನಲ್ಲಿ ಸ್ವಂತ ಕಟ್ಟಡವಿಲ್ಲ.

ಶ್ರೀಮತಿ ಯಶೋಧರ ದಾಸಪ್ಪ.—ಮಂಗಳೂರಿನಲ್ಲಿ ಸ್ವಂತ ಕಟ್ಟಡ ಇಲ್ಲದೆ ಇರುವುದರಿಂದ ಅಲ್ಲಿಗೆ ಒಂದನ್ನು ಮಂಜೂರುಮಾಡಿದ್ದೇವೆ. ಕಾರವಾರ ಮತ್ತು ಶಿವಮೊಗ್ಗ ಜಿಲ್ಲೆಗಳಿಗೂ ಮಂಜೂರು ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಒಂದೊಂದು ಹಾಸ್ಟಲು ಇರಬೇಕು, ಕಾಲೇಜುಗಳಲ್ಲಿ ಹರಿಜನರ ಮಕ್ಕಳು ಓದುವುದಕ್ಕೆ ಅನುಕೂಲವಾಗಬೇಕು ಮತ್ತು ತಾಲ್ಲೂಕು ಮಟ್ಟದಲ್ಲಿ ಹೈಸ್ಕೂಲುಗಳಿರುವುದರಿಂದ ಅಲ್ಲಿಯೂ ಹಾಸ್ಟಲುಗಳಾಗಬೇಕು. ಈ ರೀತಿ ವಿಚಾರ ತಿಳಿದುಕೊಂಡು ಅನುಭವದಿಂದ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾಡಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಕೆಲವು ಕಡೆ ಹಾಸ್ಟಲುಗಳ ಕೆಲಸ ಅರ್ಧಮರ್ಧವಾಗಿ ಅಲ್ಲಿರುವುದಕ್ಕೆ ಸಾಧ್ಯವಿಲ್ಲದೆ ಸಣ್ಣ ಸಣ್ಣ ಬಾಡಿಗೆ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳು ಅರ್ಧಮರ್ಧ ಆಗಿರುವುದನ್ನು ಪೂರ್ತಿಮಾಡದೆ ಹಾಗೆಯೇ ಬಿಡುವುದೇ? ನೀರುಮನೆ, ಅಡಿಗೆಮನೆ, ಊಟದಮನೆ, ಬಾವಿ ಇಲ್ಲದೆ ಅರ್ಧಕೆಲಸವಾಗಿ ನಿಂತಿರತಕ್ಕ ಹಾಸ್ಟಲುಗಳನ್ನು ಸಂಪೂರ್ಣವಾಗಿಮಾಡಿ ಅದರಲ್ಲಿ ಮಕ್ಕಳು ಇರುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಕ್ಕೆ ಮುತುವರ್ಜಿ ವಹಿಸುತ್ತಿದ್ದೇನೆ.

ಎಕನಾಮಿಕ್ ಏಡ್ ವಿಚಾರದಲ್ಲಿ ಕೆಲವರು ಸದಸ್ಯರು ಮಾತನಾಡುವಾಗ ಹೇಳಿದರು: ಜನಗಳಿಗೆ ಆ ಸಹಾಯ ಸರಿಯಾಗಿ ಸಿಕ್ಕುತ್ತಿಲ್ಲ, ಕೋಳಿ, ಕುರಿ, ಹಸು, ಎಮ್ಮೆ ಇವುಗಳನ್ನು ಕೊಟ್ಟರೆ ಮಾರಿಕೊಳ್ಳುತ್ತಾರೆ ಎಂದು ಹೇಳಿದರು. ಆದೇ ರೀತಿ ಮನೆಗಳನ್ನು ಕಟ್ಟಿಕೊಳ್ಳಲು 400 ರೂಪಾಯಿ ಕೊಡುತ್ತಿದ್ದರು. ನನಗೆ ಹಿಂದೆ ಇದ್ದ ಮಂತ್ರಿಗಳು ಇದು ದುರುಪಯೋಗವಾಗುತ್ತದೆ, ಕೊಡುವ 400 ರೂಪಾಯಿಗಳು ಸದುಪಯೋಗವಾಗುತ್ತ ಇಲ್ಲ, ಜನಗಳಿಗೆ 400 ರೂಪಾಯಿ ಸಿಕ್ಕುತ್ತಿಲ್ಲ, ಆ ಹಣದಿಂದ ಮನೆಯನ್ನು ಕಟ್ಟುವುದೂ ಆಗುವುದಿಲ್ಲ. ಸಬ್ಸಿಡಿ ಕೊಡುವುದನ್ನು ನಿಲ್ಲಿಸಬೇಕು ಎಂದು ಬಹಳ ತೀವ್ರವಾಗಿ ಇಂಡಿಯಾ ಸರ್ಕಾರದವರೊಡನೆ ಚರ್ಚೆಮಾಡಿ ಆ ಹಣವನ್ನು ಹರಿಜನರ ವಿಧ್ಯಾಭ್ಯಾಸಕ್ಕೆ ಉಪಯೋಗಿಸಬೇಕು, ಮನೆಗಳಿಗೆ ಕೊಡುವುದು ಬೇಡ ಎಂದು ಹೇಳಿದ್ದರ ಮೇಲೆ ಮೈಸೂರು ಸಂಸ್ಥಾನವೊಂದಕ್ಕೆ ಮಾತ್ರ ಮನೆಗಳಿಗೆ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ್ದಾರೆ. ಈಗ ಎರಡು ವರ್ಷಗಳಿಂದ ನಾನು ಸರ್ವ ಪ್ರಯತ್ನಪಟ್ಟರೂ ಕೂಡ ಮೂರನೆಯ ಯೋಜನೆ ಮುಗಿಯುವವರೆಗೂ ಸಬ್ಸಿಡಿ ಸಿಕ್ಕುವುದು ಸಾಧ್ಯವಾಗುವುದಿಲ್ಲ ಎಂದು ಅವರು ಹೇಳಿದ್ದರ ಮೇಲೆ ಸಹಕಾರ ಸಂಘಗಳಿಂದ ಸಾಲವನ್ನು ಕೆಲವು ಮನೆಗಳಿಗೆ ಒದಗಿಸಲಾಗಿದೆ. ಮನೆಕಟ್ಟುವುದಕ್ಕೆ ಹಣವಿಲ್ಲದೆ ಇದ್ದರೂ ದರಖಾಸ್ತಿನಲ್ಲಿ ಸ್ವಲ್ಪ ಜಮೀನು ಕೊಟ್ಟಿದ್ದರೆ ಮುಂದೆ ಎಂದಾದರೂ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದ್ದರಿಂದ ಈಗ 800 ಎಕರೆ ಜಮೀನನ್ನು ದರಖಾಸ್ತಿನಲ್ಲಿ ಈಗಾಗಲೇ ತೆಗೆದುಕೊಂಡಿದೇವೆ.

ತಾಂತ್ರಿಕ ಶಾಲೆಗಳಲ್ಲಿ ಓದುವವರಿಗೆ ತಿಂಗಳಿಗೆ 25 ರೂಪಾಯಿ ಕೊಡುತ್ತಿದ್ದರು. ಈ ವರ್ಷದಿಂದ 45 ರೂಪಾಯಿ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಸ್ಕಾಲರ್‌ಷಿಪ್‌ಗಳನ್ನು ಕೊಡುವುದರಲ್ಲಿ ಮೊದಮೊದಲು ನಿಧಾನವಾಗುತ್ತಿತ್ತು. ವರ್ಷದ ಕೊನೆಯಲ್ಲಿ ಸ್ಕಾಲರ್‌ಷಿಪ್‌ಗಳು ಬರುತ್ತಿವೆ ಎಂದು ಅನೇಕ ದೂರುಗಳು ಬಂದುದರಿಂದ ಹಿಂದಿನ ವರ್ಷ ಸ್ಕಾಲರ್‌ಷಿಪ್ ಏನೇನು ಬರುತ್ತಿತ್ತೋ ಅದನ್ನು ಅಡ್ವಾನ್ಸಾಗಿ, ಸ್ಕ್ರೂಟಿನಿ ಮಾಡುವುದಕ್ಕೆ ಮೊದಲು ಕೊಡಬೇಕು, ಆ ಮಕ್ಕಳಿಗೆ

ಅವರು ಕಾಲೇಜಿಗೆ ಹೋಗುತ್ತಿದ್ದ ಹಾಗೆಯೇ ಸ್ಕಾಲರ್‌ಷಿಪ್ ಏರ್ಪಾಡಾಗಿ ಅವರಿಗೆ ಕೊಡಬೇಕು ಎಂದು ಈ ವರ್ಷ ಅದನ್ನು ಕೂಡ ಜಾರಿಗೆ ತರಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಅವರು ವಿದ್ಯಾವಂತರಾಗಿ ಎಷ್ಟು ಪಾತ್ರ ಮುಂದೆ ಬಂದಿದಾರೆನ್ನುವುದಕ್ಕೆ ಕೆಲವು ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಟೆಕ್ನಿಕಲ್ ಸಬ್ಜೆಕ್ಟುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ತೆಗೆದುಕೊಂಡರೆ ಮೆಡಿಕಲ್ ಕಾಲೇಜಿನಲ್ಲಿ 246 ಜನ ವಿದ್ಯಾರ್ಥಿಗಳಿದ್ದಾರೆ; ಇಂಜಿನಿಯರಿಂಗ್‌ನಲ್ಲಿ 174 ಜನ ಹುಡುಗರಿದ್ದಾರೆ, ಅಗ್ರಿಕಲ್ಚರ್‌ನಲ್ಲಿ 21 ಜನರಿದ್ದಾರೆ, ವೆಟರ್ನರಿಯಲ್ಲಿ ಒಬ್ಬರಿದ್ದಾರೆ, ಡಿಪ್ಲೊಮೊ ಇನ್ ಸಿವಿಲ್, ಮೆಕ್ಯಾನಿಕಲ್ ಮತ್ತು ಇಲೆಕ್ಟ್ರಿಕಲ್‌ನಲ್ಲಿ 417 ಜನ ಓದುತ್ತಿದ್ದಾರೆ. ಇವರಿಗೆಲ್ಲ ಸ್ಕಾಲರ್‌ಷಿಪ್ ಯಾವುದೇ ತೊಂದರೆಯೂ ಇಲ್ಲವಂತೆ ಕೊಡುತ್ತಿದ್ದೇವೆ.

ಹಾಸ್ಟಲುಗಳ ಸೌಕರ್ಯದ ವಿಚಾರದಲ್ಲಿ, ಹರಿಜನರಿಗಾಗಿ ಹಾಸ್ಟಲುಗಳನ್ನು ನಡೆಸಲು ವಾಲಂಟರಿ ಆರ್ಗನೈಜೇಷನ್ಸ್ ಮುಂದೆ ಬಂದರೆ ಅವರಿಗೆ ಗ್ರಾಂಟ್—ಇನ್—ಏಡ್ ಕೊಡುತ್ತೇವೆ. ಸುಮಾರು 29.69 ಲಕ್ಷ ರೂಪಾಯಿ ಈಗ ನಮ್ಮ ರಾಜ್ಯದಲ್ಲಿರುವ 195 ಹಾಸ್ಟಲುಗಳನ್ನು ನೋಡಿಕೊಳ್ಳುವುದಕ್ಕೆ ಐದು ಲಕ್ಷ ರೂಪಾಯಿ ಗ್ರಾಂಟ್—ಇನ್—ಏಡ್ ಹಾಸ್ಟಲುಗಳಿಗೆ ಕೊಡುವುದಕ್ಕೆ ಕೂಡ ಇಟ್ಟಿದ್ದೇವೆ.

4-30 P M.

24,480 ಜನ ಹರಿಜನ ಮಕ್ಕಳಿಗೂ 9,190 ಜನ ಗಿರಿಜನ ಮಕ್ಕಳಿಗೂ 8,537 ಜನ ಡಿ ನೋಟಿಫೈಡ್ ಮತ್ತು ಇತರ ಟ್ರೈಬ್ಸ್‌ನ ಮಕ್ಕಳಿಗೂ ಪ್ರತಿ ವರ್ಷವೂ ಉಡುಪಿನ ಬಟ್ಟೆ ಕೊಡುತ್ತಿದ್ದೇವೆ. ಹೋದವರ್ಷದಿಂದ ಐ. ಎ. ಎಸ್. ಮತ್ತು ಐ. ಪಿ. ಎಸ್. ಪ್ರೀ ಎಕ್ಸಾಮಿನೇಷನ್‌ಗೆ ಶಿಕ್ಷಣಕ್ಕೆ ಏರ್ಪಾಡು ಮಾಡಿದ್ದೇವೆ. ಇದರಲ್ಲಿ ಸರಿಯಾದ ಫಲಿತಾಂಶ ಬರಲಿಲ್ಲವೆಂದು ಹೇಳಿದರು; ನಿಜ, ಇದು ಇನ್ನೂ ಪ್ರಾರಂಭದೆಶೆಯಲ್ಲಿದೆ. ಮೊದಲನೆಯ ವರ್ಷ, ಮಕ್ಕಳದೋ, ಶಿಕ್ಷಕರದೋ ಅಥವಾ ಯಾರದೋ ದೋಷವಿರಬಹುದು. ಇದಕ್ಕೆ ಕಾರಣವನ್ನು ಪತ್ತೆಹಚ್ಚಬೇಕೆಂದೂ ಮುಂದೆ ಸರಿಯಾದ ವಿದ್ಯಾರ್ಥಿಗಳನ್ನು ಚುನಾಯಿಸಬೇಕೆಂದೂ ಯೋಚನೆ ಮಾಡುತ್ತಿದ್ದೇವೆ. ಹೋದ ಸಾರಿ ಬಂದವರನ್ನೆಲ್ಲ ತೆಗೆದುಕೊಂಡೆವು. ಚುನಾವಣೆ ಮಾಡುವ ಕಾರ್ಯವನ್ನು ವಿದ್ಯಾ ಇಲಾಖೆಗೆ ವಹಿಸಿದ್ದುದರಿಂದ ಅವರೇ ವಿದ್ಯಾರ್ಥಿಗಳನ್ನು ಚುನಾಯಿಸಿದರು. ಇನ್ನು ಮುಂದೆ ಎಚ್ಚರಿಕೆಯಿಂದ ನೋಡಿ ಮಕ್ಕಳು ಚೆನ್ನಾಗಿ ಉತ್ತೀರ್ಣರಾಗಲು ಸರ್ವ ಪ್ರಯತ್ನ ಮಾಡುತ್ತೇವೆ. ಇನ್ನು ವಿಮೆನ್ ವೆಲ್‌ಫೇರ್ ಸೆಂಟರ್ಸ್ ಅಥವಾ ಮಹಿಳೆಯರ ಯೋಗಕ್ಷೇಮ ಕೇಂದ್ರಗಳ ವಿಷಯವನ್ನು ಹೇಳಿದರು, ಅದನ್ನು ಕೇಳಿ ಬಹಳ ವ್ಯಸನವಾಯಿತು. ಮಾನ್ಯ ಸದಸ್ಯರು ಅವು ಸರಿಯಾಗಿ ನಡೆಯುತ್ತಿಲ್ಲವೆಂದು, ತಪ್ಪಿದ್ದರೆ ತಿದ್ದಿಕೊಳ್ಳುವುದು ನಮ್ಮ ಕರ್ತವ್ಯ. ಆದರೆ ಅವುಗಳಿಂದೇನೂ ಪ್ರಯೋಜನವಿಲ್ಲವೆಂದು ಹೇಳಿದರೆ ಕಷ್ಟವಾಗುತ್ತದೆ. ಎರಡನೆಯ ಮತ್ತು ಮೂರನೆಯ ಯೋಜನೆಯ ಅವಧಿಯಲ್ಲಿ ಪ್ರಾರಂಭವಾದ 250 ಮಹಿಳಾ ಯೋಗಕ್ಷೇಮ ಕೇಂದ್ರಗಳಿಗೆ 726 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಪ್ರತಿಯೊಂದು ಕೇಂದ್ರದಲ್ಲಿಯೂ ಮೂರರಿಂದ 5 ವರ್ಷದವರೆಗಿನ ಮಕ್ಕಳ ಸಲುವಾಗಿ ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಈ ಯೋಜನೆಯಿಂದ ಫಲ ಪಡೆಯಲು ಬಹಳ ಜನರು ಮುಂದೆ ಬರುತ್ತಿದ್ದಾರೆ. ಹಳ್ಳಿಗಾಡಿನಲ್ಲಿ ಇದರ ಅವಶ್ಯಕತೆ ಬಹಳವಾಗಿ ಕಂಡುಬಂದಿದೆ. ಚಿಕ್ಕ ವಯಸ್ಸಿನ ಮಕ್ಕಳಲ್ಲಿ ಶಾಲೆಗೆ ಹೋಗುವ ಅಭ್ಯಾಸ ಬೆಳೆಯುವುದಲ್ಲದೆ, ಈ ನರ್ಸರಿ ಶಾಲೆಗಳಲ್ಲಿ ಮಕ್ಕಳ ಶುಚಿ, ಆರೋಗ್ಯ ಮುಂತಾದುವನ್ನು ನೋಡಿಕೊಂಡರೆ, ಅವರು ಮುಂದೆ ವಿದ್ಯಾವಂತರಾಗುವುದಕ್ಕೆ ಮತ್ತು ಒಳ್ಳೆಯ ಪ್ರಜೆಗಳಾಗುವುದಕ್ಕೆ ಒಳ್ಳೆಯ ಸಾಧನವಾಗುತ್ತದೆ. ಆದುದರಿಂದ ಈ ಕೇಂದ್ರಗಳನ್ನು ಹೆಚ್ಚು ಮಾಡಬೇಕೆಂಬುದು ನಮ್ಮ ಧ್ಯೇಯವಾಗಿದೆ. ಎಲ್ಲಿ ಜನಸಂಖ್ಯೆ ಹೆಚ್ಚಾಗಿದೆ ಅಲ್ಲಿ ಸಾಧ್ಯವಾದಷ್ಟು ಮಾಡಬೇಕೆಂದು ಉದ್ದೇಶಿಸಿದ್ದೇವೆ. ಈ ಕೇಂದ್ರಗಳಲ್ಲಿ ಕೆಲಸ ಮಾಡುವ ಉಪಾಧ್ಯಾಯಿನಿಗೆ ಸರಿಯಾದ ಶಿಕ್ಷಣ ವಿರಬೇಕೆಂದು ಧಾರವಾಡದಲ್ಲಿ ಒಂದು ಶಿಕ್ಷಣ ಕೇಂದ್ರವನ್ನು ತೆರೆದು ಅಲ್ಲಿ ಪ್ರತಿವರ್ಷವೂ ನೂರು ಜನರಿಗೆ ಶಿಕ್ಷಣ ಕೊಡುವ ಏರ್ಪಾಡು ಮಾಡಿದ್ದೇವೆ. ಪ್ರತಿವರ್ಷವೂ ಹೆಣ್ಣುಮಕ್ಕಳನ್ನು ಅಲ್ಲಿಗೆ ಕಳುಹಿಸಿ ಶಿಕ್ಷಣ ಕೊಡಿಸುತ್ತಿದ್ದೇವೆ.

ಮಕ್ಕಳಿಗೆ ಮಧ್ಯಾಹ್ನದ ಊಟಕ್ಕೆ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು ಪ್ರತಿವರ್ಷವೂ ಖರ್ಚು ಮಾಡುತ್ತಿದ್ದೇವೆ. ಪಾರಿಭಾಷಿಕ ಮತ್ತು ವೃತ್ತಿಶಿಕ್ಷಣ ಪಡೆಯುತ್ತಿರುವ ಮಕ್ಕಳಿಗೆ ಅವರ ಶಿಕ್ಷಣದ ಸಂಬಂಧವಾಗಿ ಪ್ರವಾಸ ಮಾಡಲು 100 ರೂಪಾಯಿವರೆಗೆ ಅಥವಾ ಇನ್ನೂ ಹೆಚ್ಚಿನ ಖರ್ಚಾದರೆ ಅದನ್ನೂ ಕೊಡುತ್ತಿದ್ದೇವೆ. ಹರಿಜನ ಮಕ್ಕಳಿಗೆ ಸಲಕರಣೆಗಳು ಮತ್ತು ಪುಸ್ತಕಗಳನ್ನು ಕೊಂಡು ಕೊಳ್ಳಲು ಪ್ರತಿ ವಿದ್ಯಾರ್ಥಿಗೆ 200 ರೂಪಾಯಿ ಸಹಾಯ ಕೊಡುತ್ತಿದ್ದೇವೆ.

(ಶ್ರೀಮತಿ ಯಶೋಧರ ದಾಸಪ್ಪ)

ಅಪೂರ್ಣವಾಗಿರುವ ಹಾಸ್ಟೆಲುಗಳನ್ನು ಪೂರ್ಣ ಮಾಡಲು ಹೆಚ್ಚು ಹಣ ಖರ್ಚಾಗುತ್ತಿದೆ. ಪ್ರತಿ ಜಿಲ್ಲಾ ಕೇಂದ್ರದಲ್ಲಿಯೂ ಒಂದು ಹಾಸ್ಟೆಲನ್ನೂ ಮಾಡಬೇಕೆಂದಿದ್ದೇವೆ, ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗಾಗಿ.

ಸಾಮಾಜಿಕ ಅಭಿವೃದ್ಧಿ ಕಾರ್ಯಗಳಿಗಾಗಿ, ಎಂದರೆ ಇವರ ಆರೋಗ್ಯ, ವಸತಿ ಸೌಕರ್ಯ ಮತ್ತು ಇತರ ಯೋಜನೆಗಳಿಗಾಗಿ, ಎರಡನೆಯ ಮತ್ತು ಮೂರನೆಯ ಯೋಜನೆಗಳ ಅವಧಿಯಲ್ಲಿ ಹರಿಜನರಿಗೆ 185.11 ಲಕ್ಷ ರೂಪಾಯಿಗಳನ್ನೂ ಗಿರಿಜನರಿಗೆ 1846 ಲಕ್ಷ, ಡೀನೋಟಿಫೈಡ್ ಟ್ರೈಬ್ಸ್‌ಗೆ 1183 ಲಕ್ಷ, ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್ 630 ಲಕ್ಷ, ಹೀಗೆ ಒಟ್ಟು 22170 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಇಷ್ಟಲ್ಲದೆ ಹರಿಜನರಿಗಾಗಿ ಬಾವಿಗಳನ್ನು ತೆಗೆದಿರುವುದು 1042, ಹಳೆಯ ಬಾವಿಗಳನ್ನು ರಿಪೇರಿ ಮಾಡಿರುವುದು 397, ಕಮ್ಯೂನಿಟಿ ಸೆಂಟರುಗಳು 628, ಅಪ್ರೋಚ್‌ರೋಡ್‌ಗಳು 8, ರೇಡಿಯೋಸೆಟ್ಸ್ 65 ಇಷ್ಟೆಲ್ಲ ಅನುಕೂಲಗಳನ್ನು ಕಲ್ಪಿಸಲಾಗಿದೆ. ಅಲ್ಲದೆ 61,190 ರೂಪಾಯಿಗಳನ್ನು ಮನೆಗಳನ್ನು ಕಟ್ಟಿಕೊಳ್ಳಲು ಸಹಾಯಧನ ಕೊಟ್ಟಿದೆ. ಹೀಗೆಯೇ ಇತರ ನಿಮ್ನವರ್ಗದವರಿಗೂ ಈ ಕೆಳಕಂಡಂತೆ ಸಹಾಯ ನೀಡಲಾಗಿದೆ:

	ಗಿರಿಜನರಿಗೆ.	ಡೀನೋಟಿಫೈಡ್‌ಟ್ರೈಬ್ಸ್,	ನೊಮ್ಯಾಡಿಕ್ ಇತ್ಯಾದಿ.
ಬಾವಿಗಳನ್ನು ತೆಗೆದದ್ದು	66	118	28
ಹಳೆ ಬಾವಿಗಳ ರಿಪೇರಿ	—	—	—
ಕಮ್ಯೂನಿಟಿ ಸೆಂಟರ್ಸ್	11	—	—
ಅಪ್ರೋಚ್‌ರೋಡ್ಸ್	42	—	—
ಹೌಸಿಂಗ್‌ಸಬ್ಸಿಡೀಸ್	1669	2964	1593

ಅಸ್ಪೃಶ್ಯತಾನಿವಾರಣೆಯ ಕಾನೂನನ್ನು ಏಕರೂಪವಾಗಿ ಮಾಡಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಮದರಾಸು, ಬೊಂಬಾಯಿ, ಉತ್ತರ ಪ್ರದೇಶ ಮುಂತಾದ ರಾಜ್ಯಗಳಲ್ಲಿರುವ ಕಾನೂನಿನ ಒಳ್ಳೆಯ ಅಂಶಗಳನ್ನು ಸೇರಿಸಿ ಒಂದು ಕರಡನ್ನು ತಯಾರು ಮಾಡಿ, ಅದನ್ನು ಲಾ ಇಲಾಖೆಯಲ್ಲಿ ಪರೀಕ್ಷೆ ಮಾಡುತ್ತಿದ್ದಾರೆ.

ಪೈಲಟ್ ಯೋಜನೆ ಎಂದು ಒಂದು ಹೊಸ ಯೋಜನೆಯನ್ನು ತಯಾರು ಮಾಡಿದ್ದೇವೆ. ಇದರ ಪ್ರಕಾರ ಒಂದು ರೆವಿನ್ಯೂ ಡಿವಿಜನ್ನಿನಲ್ಲಿ ಹತ್ತು ಹಳ್ಳಿಗಳನ್ನು ಚುನಾಯಿಸಿಕೊಂಡು ಪ್ರಾಯೋಗಿಕವಾಗಿ ಸರಕಾರ ಕೊಡುವ ಅಭಿವೃದ್ಧಿ ಕಾರ್ಯಗಳ ಹಣವೆಲ್ಲವನ್ನೂ ತೆಗೆದುಕೊಂಡು ಅಲ್ಲಿ ವಿನಿಯೋಗ ಮಾಡಿ ಸವರ್ಣೀಯರೂ ಹರಿಜನರೂ ಒಟ್ಟಿಗೆ ಸೇರಿಕೊಂಡು ಸಹೃದಯದಿಂದ ಜೀವನ ಮಾಡುವುದಕ್ಕೆ ಅನುಕೂಲವಾಗಲೆಂದು ಪ್ರಾರಂಭ ಮಾಡಿದ್ದೇವೆ. ಅಲ್ಲದೆ ಅಸ್ಪೃಶ್ಯತೆಯನ್ನು ಎಲ್ಲಿ ದೂರ ಮಾಡಿದ್ದಾರೋ ಅಲ್ಲಿಗೆ ಬಹುಮಾನ ಕೊಡಬೇಕೆಂದು ಒಂದೊಂದು ಜಿಲ್ಲಾ ಮಟ್ಟ ಮತ್ತು ತಾಲ್ಲೂಕು ಮಟ್ಟದಲ್ಲಿ ಹಳ್ಳಿಗಳನ್ನು ಚುನಾಯಿಸಿ ಸನ್ಮಾನಿಸಬೇಕೆಂದಿದ್ದೇವೆ. ಎಲ್ಲಿ ಒಂದೇ ಬಾವಿಯಲ್ಲಿ ಎಲ್ಲರೂ ನೀರು ತೆಗೆದುಕೊಂಡು ಉಪಯೋಗ ಮಾಡುತ್ತಿದ್ದಾರೋ ಅಲ್ಲಿಗೆ ಬಹುಮಾನ ಕೊಡಬೇಕೆಂದು ಮಾಡಿದ್ದೇವೆ. ತುರುವೇಕೆರೆ ತಾಲ್ಲೂಕಿನಲ್ಲಿ ಗಾಂಧಿ ಗ್ರಾಮ ಎಂದು ಒಂದು ಹಳ್ಳಿಯಲ್ಲಿ ಎಲ್ಲರೂ ಸೇರಿ ಜಾತಿ ಭೇದವಿಲ್ಲದೆ ಒಂದೇ ಬಾವಿಯ ನೀರನ್ನುಪಯೋಗಿಸುತ್ತಾ ಸುಖವಾಗಿ ಸಾಮರಸ್ಯದಿಂದ ಬಾಳುತ್ತಿದ್ದಾರೆ. ಅಲ್ಲಿಗೆ ಬಹುಮಾನ ಕೊಡಬೇಕೆಂದು ಮಾಡಿದ್ದೇವೆ. ಹೀಗೆ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುವುದಕ್ಕೆ ಪ್ರೋತ್ಸಾಹ ಕೊಡಲು ಏರ್ಪಾಡು ಮಾಡಿದ್ದೇವೆ. ಪೋಸ್ಟ್ ಮೆಟ್ರಿಕ್ ತರಗತಿಗಳಲ್ಲಿ ಓದುವ ಹರಿಜನ ವಿದ್ಯಾರ್ಥಿಗಳು ಜನರಲ್ ಹಾಸ್ಟೆಲುಗಳಿಗೆ ಸೇರುವಂತೆ ಪ್ರೋತ್ಸಾಹಿಸುತ್ತಿದ್ದೇವೆ, ಅವರಿಗೆ ಕೇಂದ್ರ ಸರಕಾರದಿಂದ ಬರಕಕ್ಕ ವೇತನದ ಹಣ ಸಾಲದಿದ್ದರೆ ಕಡಮೆ ಬೀಳುವ ಹಣವನ್ನು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಸರಕಾರದ ಗ್ರ್ಯಾಂಟ್ ಸಹಾಯ ಪಡೆಯುತ್ತಿರುವ ಹಾಸ್ಟೆಲುಗಳಲ್ಲಿ ಹರಿಜನ ಮತ್ತು ಗಿರಿಜನ ವಿದ್ಯಾರ್ಥಿಗಳನ್ನು ಶೇಕಡ 10 ರಷ್ಟಾದರೂ ತೆಗೆದುಕೊಂಡರೆ ಸಹಾಯ ಧನ ಕೊಡುತ್ತೇವೆಂದು ಮಾಡಲು ಹೊರಟಿದ್ದೇವೆ. ಯಾವ ಭೇದಭಾವವೂ ಇಲ್ಲದೆ ಎಲ್ಲರ ಮಕ್ಕಳನ್ನೂ ಸೇರಿಸಿಕೊಳ್ಳಬೇಕೆಂದು ಹೀಗೆ ಮಾಡಿದ್ದೇವೆ.

ಅಸ್ಪೃಶ್ಯತಾ ನಿವಾರಣೆ ಕಾನೂನಿನ ಪ್ರಕಾರ ಈಗಿರುವ ರೀತಿ, ಇದರ ಸಂಬಂಧವಾದ ಅಪರಾಧ ಮಾಡಿದರೆ ಏನು ಶಿಕ್ಷೆ ವಿಧಾಯಕವಾಗಿದೆಯೋ ಅದನ್ನು ತಿದ್ದುಪಾಟು ಮಾಡಿ ಇನ್ನೂ ಹೆಚ್ಚು ಶಿಕ್ಷೆ ಮಾಡುವುದಕ್ಕೆ ಅವಕಾಶ ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಇನ್ನು ಎಕನಾಮಿಕ್ ಅಪ್ ಲಿಫ್ಟ್‌ಗಾಗಿ ಈ ಕೆಳಗೆ ಕಂಡಂತೆ ಹಣವನ್ನು ಖರ್ಚು ಮಾಡಲಾಗಿದೆ.

ಮೊದಲನೆಯ ಯೋಜನೆಯ ಅವಧಿಯಲ್ಲಿ ಒಟ್ಟು 100.34 ಲಕ್ಷ ರೂಪಾಯಿ ವಿನಿಯೋಗವಾಗಿದೆ. ಎರಡು ಮತ್ತು ಮೂರನೆಯ ಯೋಜನಗಳಲ್ಲಿ—

	2ನೇ ಯೋಜನೆ	3ನೇ ಯೋಜನೆ
ಷೆಡ್ಯೂಲ್ಡ್ ಡ್‌ಕ್ಯಾಸ್ಟ್ಸ್	24.54	22.06
ಷೆಡ್ಯೂಲ್ಡ್ ಟ್ರೈಬ್ಸ್	5.72	3.68
ಡೀನೋಟಿಫೈಡ್ ಟ್ರೈಬ್ಸ್	5.79	3.41
ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್‌ಟ್ರೈಬ್ಸ್	5.03	4.12
ಇತರ ಹಿಂದುಳಿದ ವರ್ಗಗಳು	1.57	...

ಒಟ್ಟಿನಲ್ಲಿ 77 ಲಕ್ಷದ 92 ಸಾವಿರ ರೂಪಾಯಿ ಧನ ಸಹಾಯಕ್ಕಾಗಿ ಖರ್ಚು ಮಾಡಿದ್ದೇವೆ. ಹಳೆಯ ಮೈಸೂರಿನಲ್ಲಿ ಇತರ ಹಿಂದುಳಿದ ವರ್ಗಗಳಿಗೆ ಏನೂ ಖರ್ಚಿಲ್ಲ. ಹಿಂದೆ ಹಳೆಯ ಮೈಸೂರಿನಲ್ಲಿದ್ದ ಯೋಜನೆಯಲ್ಲಿ ಗೃಹಕೈಗಾರಿಕೆಗಳಿಗೆ ಸಹಾಯ ಧನವಾಗಿ 776 ಸಂಸಾರಗಳಿಗೆ 30,958 ರೂಪಾಯಿ ಕೊಟ್ಟಿದೆ, ಎತ್ತುಗಳು, ಬೀಜ, ಗೊಬ್ಬರ ಕೊಳ್ಳುವುದಕ್ಕಾಗಿ ಸಾಲವಾಗಿ 1,88,376 ರೂಪಾಯಿ ಕೊಡಲಾಗಿದೆ, ಮತ್ತು ಇದೇ ಸಂಬಂಧವಾಗಿ 1302 ಸಂಸಾರಗಳಿಗೆ ಸಹಾಯ ಧನವಾಗಿ 1,39,890 ರೂಪಾಯಿ ಕೊಟ್ಟಿದೆ. ಎರಡನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಾಧಿಸಿದ ಗುರಿ ಫಿಜಿಕಲ್ ಟಾರ್ಜೆಟ್ಸ್ ಬಗ್ಗೆ ವಿವರ ಹೇಳುತ್ತೇನೆ. ಸಬ್‌ಸಿಡೀಜ್ ಇನ್ ದಿಷೇಪ್ ಆಫ್ ರಾ ಮಟೀರಿಯಲ್ಸ್, ಟೂಲ್ಸ್, ಹ್ಯಾಂಡ್ ಇಂಪ್ಲೆಮೆಂಟ್ಸ್ ಫಾರ್ ಇಂಡಸ್ಟ್ರೀಜ್ ಇದಕ್ಕಾಗಿ 7,700 ಫಾಮಿಲೀಸ್‌ಗೆ ಸಹಾಯ ಕೊಟ್ಟಿದೆ. ಅಸಿಸ್ಟೆನ್ಸ್ ಇನ್ ದಿ ಷೇಪ್ ಆಫ್ ಪ್ಲೋ, ಬುಲ್ಲಕ್ಸ್, ಸೀಡ್ಸ್ ಅಂಡ್ ಮ್ಯಾನ್ಯೂರ್ ಇದನ್ನು 14,000 ಫಾಮಿಲೀಸ್‌ಗೆ ಸಹಾಯ ಕೊಟ್ಟಿದೆ. ಇದಲ್ಲದೆ, Financial assistance to Craft Co-operative Societies to augment their working Capital—ಈ ಯೋಜನೆಯ ಮೇರೆಗೆ 176 ಸೊಸೈಟಿಗಳಿಗೆ ಧನ ಸಹಾಯ ಕೊಟ್ಟಿದೆ. ಇನ್ನು ಅಗ್ರಿಕಲ್ಚರ್ ಕಾಲನೀಜ್ ಸ್ಟಾರ್ಟೆಡ್— ಷೆಡ್ಯೂಲ್ ಕ್ಯಾಸ್ಟ್ ಬಗ್ಗೆ 129 ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ 80 ಇದುವರೆಗೆ ಪ್ರಾರಂಭ ಮಾಡಲಾಗಿದೆ. ಇದರ ಲಾಭ ಅನುಕ್ರಮವಾಗಿ 3,398 ಮತ್ತು 1,650 ಸಂಸಾರಗಳಿಗೆ ಆಗಿದೆ. ಇದಲ್ಲದೆ 25 ಕಾಲನೀಜ್‌ಗಳನ್ನು ಡೀನೋಟೀಫೈಡ್ ಟ್ರೈಬ್ಸ್ ಸಲುವಾಗಿ ಪ್ರಾರಂಭ ಮಾಡಲ್ಪಟ್ಟಿದೆ. ಇದಲ್ಲದೆ ಟೈಲರಿಂಗ್ ಯುನಿಟ್ಸ್ 22 ಸ್ಟಾರ್ಟ್ ಮಾಡಿದ್ದೇವೆ. ಹೆಣ್ಣು ಮಕ್ಕಳಿಗೆ ಸೂಯಿಂಗ್ ಮಷೀನ್ಸ್ 283 ಕೊಟ್ಟಿದ್ದೇವೆ. ಟೈಲರಿಂಗ್ ಪ್ರೊಡಕ್ಷನ್ ಯುನಿಟ್ಸ್ 2 ಮಂಗಳೂರು ಹಾಗು ಬೆಂಗಳೂರಿನಲ್ಲಿ ಪ್ರೊಡಕ್ಷನ್ ಮಾಡುತ್ತಾ ಇವೆ. ಲ್ಯಾಕರ್ ಪ್ರೊಡಕ್ಷನ್ ಯುನಿಟ್ ಅಂದರೆ ಬಣ್ಣದ ಸಾಮಾನು ತಯಾರು ಮಾಡುವ ಒಂದು ಯುನಿಟ್ಟು ಚನ್ನಪಟ್ಟಣದಲ್ಲಿ ಕೆಲಸ ಮಾಡುತ್ತಾ ಇದೆ. ಇದಕ್ಕಾಗಿ ಹಾಸ್ಟೆಲ್ ಕೂಡ ಪ್ರಾರಂಭ ಮಾಡಲಾಗಿದ್ದು ಅನೇಕ ಹೆಣ್ಣು ಮಕ್ಕಳು ಅಲ್ಲಿ ಕಲಿಯುತ್ತಾ ಇದ್ದಾರೆ. ಇನ್ನು ಪ್ಲೋ ಬುಲ್ಲಕ್ಸ್ ಅಂಡ್ ಅಗ್ರಿಕಲ್ಚರ್ ಇಕ್ವಿಪ್ಮೆಂಟ್ಸ್ ಗಿವನ್ ಈ ರೀತಿ ಇವೆ. ಷೆಡ್ಯೂಲ್ಡ್ ಕ್ಯಾಸ್ಟ್‌ದವರಿಗೆ 17,550 ಜೊತೆ ಎತ್ತುಗಳು, ಷೆಡ್ಯೂಲ್ ಟ್ರೈಬ್ಸನವರಿಗೆ 4,400 ಜೊತೆ ಎತ್ತುಗಳನ್ನು ಮತ್ತು ಡೀನೋಟಿಫೈಡ್ ಟ್ರೈಬ್ಸದವರಿಗೆ 4,336 ಜೊತೆ ಎತ್ತುಗಳನ್ನು ಕೊಟ್ಟಿದೆ. ಮಿಲ್ಕಕೌಜ್ ಅಂಡ್ ಶೀ ಭಪೆಲೋಜ್ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ 1,044 ಮತ್ತು ಡೀನೋಟಿಫೈಡ್ ಟ್ರೈಬ್ಸನವರಿಗೆ 340 ಕೊಟ್ಟಿದ್ದೇವೆ. ಇನ್ನು ಸ್ಟೈಪೆಂಡ್ಸ್ ಗಿವನ್ ಟು ಟ್ರೇನೀಜ್ ಇನ್ ದಿ ಇಂಡಸ್ಟ್ರಿಯಲ್ ಟ್ರೇನಿಂಗ್ ಸೆಂಟರ್ಸನಲ್ಲಿ 611 ಕ್ಯಾಂಡಿಡೇಟ್ಸ್ ಹಾಗೂ 286 ಕ್ಯಾಂಡಿಡೇಟ್ಸ್ ಅಂಡರ್‌ಗೋಯಿಂಗ್ ಟ್ರೇನಿಂಗ್ ಇನ್ ಟ್ರೇಡ್ಸ್ ಇದ್ದಾರೆ.

ಈ ವರ್ಷ ಒಂದು ಹೊಸ ಸ್ಕೀಂ ಹೊಸದಾಗಿ ಪ್ರಾರಂಭ ಮಾಡಬೇಕೆಂದು ಮಾಡಿದ್ದೇವೆ. ಅಗ್ರಿಕಲ್ಚರಲ್ ಕಾಲೇಜ್ ಪ್ರಾರಂಭ ಮಾಡಿದ ಮೇಲೆ ಸರಕಾರಕ್ಕೆ ಒಂದು ವಿಷಯ ತಿಳಿದು ಬಂದಿದೆ. ಅನೇಕ ಕಡೆ ಬಡ ಹರಿಜನರಿಗೆ ಕೊಟ್ಟಿರತಕ್ಕಂಥ ಭೂಮಿಯನ್ನು ಸರಿಯಾಗಿ ರಿಕ್ಲೇಂ ಮಾಡಿಕೊಂಡು ಅವರು ವ್ಯವಸಾಯ ಮಾಡುತ್ತಾ ಇಲ್ಲಾ ಎಂಬುದು ತಿಳಿದು ಬಂದಿದೆ. ಆದುದರಿಂದ ಸರಕಾರದವರೇ ಭೂಮಿಯನ್ನು ಸುಧಾರಿಸಿ ಕೊಟ್ಟು ಅವರು ಅಗ್ರಿಕಲ್ಚರಲ್ ಕಾಲೋನಿಯಲ್ಲಿ ವ್ಯವಸಾಯ ಮಾಡಿಕೊಂಡು ಸುಖವಾಗಿ ಜೀವನ ಮಾಡುವುದಕ್ಕೆ ಒಂದು ಗಾಡಿ ಮತ್ತು ಒಂದು ಜತೆ ಎತ್ತು ಕೊಡಬೇಕೆಂದು ಮಾಡಿದ್ದೇವೆ. ಈ ಯೋಜನೆ ಚನ್ನಾಗಿ ಕೆಲಸ ಮಾಡುತ್ತದೆಂದು ನಾವು ಭಾವಿಸಿದ್ದೇವೆ. ಇದಲ್ಲದೆ ಕಾಲೋನಿ ಬಿಟ್ಟು ಹೋಗದೆ ಕಾಲೋನಿಯಲ್ಲಿಯೇ ಇರುವುದಕ್ಕೆ ಒಂದು ರೀತಿಯ ಉತ್ತೇಜನ ಕೊಡಬೇಕೆಂದು ಈ ಹೊಸ ಸ್ಕೀಂನಲ್ಲಿ ಯಾವನು ಅತ್ಯುತ್ತಮ ವ್ಯವಸಾಯ

(ಶ್ರೀಮತಿ ಯಶೋಧರ ದಾಸಪ್ಪ)

ಮಾಡಿದ್ದಾನೆಂದು ತೀರ್ಮಾನಿಸಲಾಗುವುದೋ ಅಂಥವನಿಗೆ ಒಂದು ಗಾಡಿ ಮತ್ತು ಒಂದು ಜತೆ ಎತ್ತು ಕೊಡಬೇಕೆಂದು ಪ್ರಾರಂಭ ಮಾಡಿದ್ದೇವೆ. ಈ ರೀತಿ ಕೊಡುವುದರಿಂದ ಅವರಿಗೆ ಅನುಕೂಲ ವಾಗುತ್ತದೆ ಮತ್ತು ಚೆನ್ನಾಗಿ ಕೆಲಸ ಮಾಡಬೇಕೆಂಬ ಭಾವನೆ ಬರುತ್ತದೆ ಎಂದು ಈ ರೀತಿ ಕೊಡ ಬೇಕೆಂದು ಮಾಡಿದೆ.

ಇನ್ನು ಸರ್ವಿಸ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಎಷ್ಟು ಪರ್ಸೆಂಟೇಜ್ ಮುಟ್ಟಬೇಕೋ ಅಷ್ಟು ಮುಟ್ಟಿಲ್ಲ ಎಷ್ಟು ಕೆಲಸ ಸಿಕ್ಕಬೇಕೋ ಅಷ್ಟು ಹಿಂದುಳಿದವರಿಗೆ ಆ ಪ್ರಮಾಣ ದಲ್ಲಿ ಸಿಕ್ಕಿಲ್ಲ ಎಂದು ಹೇಳಿದ್ದಾರೆ. ಈ ಗುರಿ ಮುಟ್ಟುವದಕ್ಕಾಗಿ ಸರಕಾರ ಪದೇ ಪದೇ ಎಲ್ಲಾ ಇಲಾಖೆಗಳಿಗೂ ತಿಳಿಸಿದ್ದೇವೆ. ಎಲ್ಲೆಲ್ಲಿ ಹರಿಜನ ಕ್ಯಾಂಡಿಡೇಟ್ಸ್ ದೊರೆಯುತ್ತಾರೋ ಅಂಥಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿ ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದೇವೆ. ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಸೋಷಿಯಲ್ ವೆಲ್‌ಫೇರ್ ಆಫೀಸರ್ ಗಮನಕ್ಕೆ ಕ್ಯಾಂಡಿಡೇಟ್ಸ್ ಇದ್ದಾರೆಂದು ತಂದರೆ ತಕ್ಷಣ ತೆಗೆದುಕೊಳ್ಳಬೇಕೆಂದು ಸರಕಾರ ಆಜ್ಞೆ ಹೊರಡಿಸಿದೆ. ಈಗ ಇರತಕ್ಕ ವಿವರ ಈ ರೀತಿ ಇದೆ:

	ಕ್ಲಾಸ್ 1	ಕ್ಲಾಸ್ 2	ಕ್ಲಾಸ್ 3	ಕ್ಲಾಸ್ 4
31-3-1960 ರಂದು ಇದ್ದ ರೀತ್ಯಾ	23	82	7,025	4,612
31-3-1961 ,,	26	105	7,570	5,212
31-3-1962 ,,	29	126	8,032	5,630

ಇಷ್ಟು ಇರತಕ್ಕಂಥ ಸಂಖ್ಯೆ?

31-3-1962ರ ವರೆಗೆ ಕ್ಲಾಸ್ 3ರಲ್ಲಿ 7 ಪರ್ಸೆಂಟ್ ಮತ್ತು ಕ್ಲಾಸ್ 4 ರಲ್ಲಿ 13 ಪರ್ಸೆಂಟ್ ಬಂದಿದೆ. ಇನ್ನೂ ಆರೇಳು ಪರ್ಸೆಂಟ್ ಬರಬೇಕಾಗಿದೆ. ಎಲ್ಲಿಯಾದರೂ ಕ್ವಾಲಿಫೈಡ್ ಆದವರು ಇದ್ದರೆ ತಕ್ಷಣ ತೆಗೆದುಕೊಳ್ಳುತ್ತೇವೆ. ಸರಕಾರದ ಗಮನಕ್ಕೆ ತಂದರೆ ಖಂಡಿತವಾಗಿ ತೆಗೆದು ಕೊಳ್ಳುತ್ತೇವೆ. ಇದುವರೆಗೆ ಸಂಗ್ರಹಿಸಿರತಕ್ಕಂಥ ಸಂಖ್ಯೆ ಹೇಳಿದ್ದೇನೆ. ಇದುವರೆಗೆ ಯಾರಾದರೂ ಕ್ವಾಲಿಫೈಡ್ ಆದವರನ್ನು ತೆಗೆದುಕೊಳ್ಳದೇ ಹೋದರೆ ಅಂಥಾದ್ದನ್ನು ಸರಕಾರದ ಗಮನಕ್ಕೆ ತರ ಬೇಕು ಅಂದರೆ ಖಂಡಿತವಾಗಿ ತೀವ್ರ ಪರಿಶೀಲಿಸಿ ಅಂಥವರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. 17 ಜನ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಹಿಂಬಡ್ತಿ ನೀಡಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಪದೇ ಪದೇ ಹೇಳಿದ್ದಾರೆ. ಇವರ ಬಗ್ಗೆ ನಿಮಗೆ ಎಷ್ಟು ಸಹಾನು ಭೂತಿ ಇದೆಯೋ ಅಷ್ಟೇ ಸಹಾನುಭೂತಿ ನನಗೂ ಇದೆ. ಹೈ ಕೋರ್ಟಿನಲ್ಲಿ ಈಗಾಗಲೇ ಇದು ಇತ್ಯರ್ಥವಾಗಿರುವುದರಿಂದ ನಾನು ಈ ಪ್ರಶ್ನೆ ಹೆಚ್ಚು ಚರ್ಚಿಸು ವುದಿಲ್ಲ. ನಿಮ್ಮಂತೆ ನನಗೂ ಈ ಅಧಿಕಾರಿಗಳ ಬಗ್ಗೆ ಕನಿಕರವಿದೆ. ಅವರಿಗೆ ಸಮಾನವಾದ ಹುದ್ದೆ ಗಳನ್ನು ಬೇರೆ ಇಲಾಖೆಗಳಲ್ಲಿ ಒದಗಿಸುವ ಬಗ್ಗೆ ನಾನು ಸಕಲ ಪ್ರಯತ್ನ ಮಾಡುತ್ತಿರುವೆನು. ಈ 17 ಜನ ಅಧಿಕಾರಿಗಳಗೋಸ್ಕರ ಅಲ್ಲಲ್ಲಿ ಹುಡುಕುತ್ತಾ ಇದ್ದೇನೆ. ಕೆಲವು ಸಲ ನಾನು ವೈಯಕ್ತಿಕ ವಾಗಿ ಹೋಗಿ ಪ್ರಯತ್ನ ಮಾಡಿದ್ದೇನೆ. ಇದು ನಿಮಗೆ ಗೊತ್ತಿಲ್ಲ. ಅನೇಕ ಸಲ ವೆಲ್‌ಫೇರ್ ಆಫೀ ಸರನ್ನು ನೋಡಿದ್ದೇನೆ. ರೇಲ್ವೆ ಇಲಾಖೆಯಲ್ಲಿಯೂ ಕೂಡ ಎಲ್ಲಿಯಾದರೂ ಸರಿಯಾದ ಹುದ್ದೆ ಒದಗಿಸಿ ಕೊಡಬೇಕೆಂದು ನಾನು ಸರ್ವ ಪ್ರಯತ್ನ ಮಾಡುತ್ತಿದ್ದೇನೆ. ಇದು ತಮಗೆ ಗೊತ್ತು ಇರ ಬಹುದು ಅಥವಾ ಗೊತ್ತು ಇರಲಿಕ್ಕಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಪೂತನಿಯ ಹಾಗೆ ವಿಷ ಕುಡಿಸಲು ಬಂದಿರಿ, ಬಹಳ ಅನ್ಯಾಯ ಮಾಡುತ್ತಿರುವಿರಿ ಎಂದು ಶ್ರೀ ಅಂಜನಪ್ಪನವರು ಮಾತನಾಡುತ್ತಾ ನಿಮ್ಮನ್ನು ಪೂತನಿಗೆ ಹೋಲಿಸಿದ್ದಾರೆ. ಅದಕ್ಕೆ ಉತ್ತರವಾಗಿ ನೀವು ಏನು ಆಚೀವ್ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಇಂಥ ಸಣ್ಣ ಪುಟ್ಟ ಟೀಕೆಗಳಿಗೆ ಉದ್ರೇಕಗೊಳ್ಳುವ ವಯಸ್ಸಿನಲ್ಲಿ ನಾನು ಇಲ್ಲ. ನಿಮಗೆ ಪೂತನಿ ಹಾಗೆ ಕಾಣುತಿರಬಹುದು. ನಾನು ಹೇಗೆ ಕಾಣು ತ್ತೇನೆಂಬುದು ಅವರವರ ಮನೋಭಾವವನ್ನು ಅವಲಂಬಿಸಿದೆ. ಈ ಮಂತ್ರಿ ಪದವಿಯನ್ನೇನೂ ವಿರೋಧ ಪಕ್ಷದವರು ನನಗೆ ಕೊಟ್ಟಿಲ್ಲ. ನನಗೆ ಈ ಪದವಿಬೇಕೆಂದು ನಾನೇನೂ ಕೇಳಿಲ್ಲ. ಈ ಮಂತ್ರಿ ಪದವಿ ಎಷ್ಟು ದಿವಸ ಇರುವುದೋ ಆ ಪರಮಾತ್ಮನಿಗೊಬ್ಬನಿಗೇ ಗೊತ್ತು. ನಾನು ತತ್ವ ಬಿಟ್ಟು ಹೋದರೆ ಟೀಕೆ ಮಾಡಬಹುದು. ನಾನು ರಾಜೀನಾಮೆ ಕೊಡುವುದು ತತ್ವದ ಪ್ರಶ್ನೆ

ಬಂದಾಗ್ಗೆ ಮಾತ್ರ. ಆದುದರಿಂದ ನಾವು ಮಾಡಿರುವ ಕೆಲಸ ನೋಡಬೇಕು ಮತ್ತು ಟೀಕೆ ಮಾಡಬೇಕು. ಏನಾದರೂ ತೊಂದರೆ ಇದ್ದರೆ ಸರಿಪಡಿಸಲು ಸಹಾನುಭೂತಿಯಿಂದ ನೋಡೋಣ. ನೀವು ಹೇಳುವುದರಲ್ಲಿ ಏನಾದರೂ ರಚನಾತ್ಮಕ ಟೀಕೆ ಇರಬೇಕು. ದೋಷ ನಿವಾರಣೆ ಮಾಡಲು ಈಗಾಗಲೇ ಸರಕಾರ ಇವ್ಯಾಲ್ಯುಯೇಷನ್ ಆಫೀಸರ್ ನೇಮಕ ಮಾಡಿದೆ. ಒಂದು ವರ್ಷ ಕೆಲಸ ಮಾಡಿಕೊಂಡು ಬಂದಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ಸಭೆಯಲ್ಲಿ ನಿಮ್ಮ ಕಣ್ಣು ತೆರೆಯುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಸಾರ್ವಜನಿಕರಲ್ಲಿ ಏನು ದೋಷ ಇದೆ, ಮುಖಂಡರಲ್ಲಿ ಏನು ದೋಷ ಇದೆ, ತಾಲ್ಲೂಕ್ ಬೋರ್ಡ್ ಆಗಲಿ ಬಿ.ಡಿ.ಓ. ಆಗಲಿ ನಮ್ಮ ವೆಲ್‌ಫೇರ್ ಆಫೀಸರ್ ಆಗಲಿ ಬೇರೆ ಇಲಾಖೆ ಅಧಿಕಾರಿಯಾಗಲಿ ಸಮಾಜದಲ್ಲಿ ಏನೇನು ಲೋಪದೋಷಗಳಿವೆ ಎಂಬುದನ್ನು ನಾವು ಆಲೋಚಿಸಬೇಕಾಗುತ್ತದೆ. ಏನೂ ತಿಳಿದುಕೊಳ್ಳದೆ ಸುಮ್ಮನೆ ಮಾತನಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಅಂಥ ಟೀಕೆಯಲ್ಲಿ ಏನೂ ಬಲ ಇಲ್ಲ.

ಆದ್ದರಿಂದ ನಾನು ಒಂದು ಎರಡು ವರ್ಷವಾಯಿತು. ಈ 2 ವರ್ಷದಲ್ಲಿ ಏನು ಕೆಲಸವಾಗಿದೆ ಅಂತ ಹೇಳಿ, ಅಂಕಿ ಅಂಶದ ಜೊತೆಯಲ್ಲಿ ಪುಸ್ತಕ ಬರೆದು, ರಿಪೋರ್ಟು ಬರೆದು ನಿಮ್ಮ ಎದುರಿಗೆ ಇಡುತ್ತೇವೆ. ಅದರಲ್ಲಿ ಏನೂ ಅನುಮಾನವಿಲ್ಲ, ಏನೂ ಅನುಮಾನಬೇಡ ಅಷ್ಟೇ ಅಲ್ಲ. ಇಲ್ಲಿಂದ ಏನಾದರೂ ದುಡ್ಡನ್ನು ಸೆಂಟ್ರಲ್ ಗವರ್ನಮೆಂಟಿನಿಂದ ಕೇಳಬೇಕಾದರೂ ಕೂಡ, ಇಲ್ಲಿ ನಾವು ಯಾವ ರೀತಿ ಕೆಲಸ ಮಾಡುತ್ತಿದ್ದೇವೆ, ಯಾವ ರೀತಿ ಹಣ ಸದುಪಯೋಗವಾಗುತ್ತಿದೆ, ಯಾವ ಯಾವ ಸ್ಕೀಮುಗಳನ್ನು ಮಾಡಿ ಅವುಗಳಿಂದ ಜನಗಳಿಗೆ ಉಪಯೋಗವಾಗುತ್ತಿದೆ ಎಂಬುದನ್ನೆಲ್ಲಾ ನೋಡಿ, ಅವರು ಹಣ ಕೊಡುತ್ತಾರೆ. ಇವತ್ತು 10 ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆಯೆಂದು ಹೇಳಿದರು. ಥರ್ಡ್ ಫೈವ್ ಇಯರ್ ಪ್ಲಾನಿನ ಮೊದಲನೆ ವರ್ಷದಲ್ಲಿ 10 ಲಕ್ಷ ರೂಪಾಯಿ ಲ್ಯಾಪ್ಸ್ ಆಗಿದೆ. ಆ 10 ಲಕ್ಷವನ್ನು ತಂದು ಖರ್ಚು ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಆದರೆ 10 ಲಕ್ಷ ಕೇಳಬೇಕಾದರೆ, ಮೊದಲು ನನ್ನ ಮನೆಯನ್ನು ಸರಿಮಾಡಿಕೊಳ್ಳಬೇಕು. ಸಮಾಜ ಕಲ್ಯಾಣ ಖಾತೆಯೊಳಗೆ ಏನೇನೋ ಹಣ ದುರುಪಯೋಗವಾಗುತ್ತಿದೆ ಎಂದು ಅವರು ಹೇಳಿದರು. ಹಾಸ್ಟೆಲಿನಲ್ಲಿ ಹಣ ದುರುಪಯೋಗವಾಗುತ್ತಿದೆ, ದುಡ್ಡು ತಿನ್ನುವ ಪುಡಾರಿಗಳಿದ್ದಾರೆ ಎಂದು ಅವರೇ ಒಪ್ಪಿಕೊಳ್ಳುತ್ತಾರೆ. ಈ ಎರಡು ವರ್ಷಗಳಿಂದ ಸಮಾಜ ಖಾತೆ ಇಲಾಖೆಯಿಂದ ಪುಡಾರಿಗಳಿಗೆ ಸಂಪಾದನೆ ಮಾಡುವ ಅವಕಾಶವಿಲ್ಲ. ಎಂದು ನಿರ್ಭಯವಾಗಿ ಹೇಳುತ್ತೇನೆ, ನಿರ್ವಂಚನೆಯಿಂದ ಹೇಳುತ್ತೇನೆ ಯಾರಿಗೂ ಸಹ ಒಂದು ಕಾಸು ತೆಗೆದುಕೊಳ್ಳುವುದಕ್ಕೆ ಅವಕಾಶ ಆಗುತ್ತಾ ಇಲ್ಲ. ಲ್ಯಾಪ್ಸ್ ಆದರೆ ಹಣ ತೆಗೆದುಕೊಳ್ಳುವುದಕ್ಕೆ ಶಕ್ತಿ ಇದೆ. ಸರಕಾರದಲ್ಲಿ ಹಣ ಇರುತ್ತದೆ. ಆದರೆ ಅದು ಕುರಿ ಕೋಳಿಯಲ್ಲಿ ಮುಕ್ತಾಯವಾದರೆ, ಹಣ ಎಲ್ಲಿ ಕೇಳಬೇಕು ? 200 ಲಕ್ಷ ರೂಪಾಯಿ ಹಣ ಬರಬೇಕು ಅಂತ ಹೇಳಿದರೆ, ನಾಳೆ ದಿವಸ ಪ್ಲಾನಿಂಗ್ ಕಮಿಶನ್ನಿನವರನ್ನಾಗಲಿ, ಗವರ್ನಮೆಂಟ್ ಆಫ್ ಇಂಡಿಯದವರನ್ನಾಗಲಿ, ನಮ್ಮ ಸರಕಾರದವರು ಕೇಳುವುದಕ್ಕೆ ಬಾಯಿ ಇದೆ. ಆದರೆ ಜನಗಳ ಮೇಲೆ ಕೊಡುವ ಹಣ ದುರುಪಯೋಗವಾಗಿದೆಯೆಂದರೆ, ಯಾವ ಬಾಯಿನಿಂದ ಕೇಳಬಹುದು ?

ಎಂಪ್ಲಾಯಿಮೆಂಟ್ ವಿಚಾರದಲ್ಲಿಯೂ ಕೂಡ, ಬೀರಪ್ಪ ಕಮಿಟಿಯವರು ಏನು ರೆಕಮೆಂಡೇಷನ್ ಮಾಡಿದ್ದಾರೆ, ಆ 22 ರಲ್ಲಿ 7ನ್ನು ಕಾರ್ಯಗತ ಮಾಡಿದ್ದೇವೆಂದು ತಮಗೆ ತಿಳಿಸಿದ್ದೇನೆ.

Probation ಮತ್ತು After care ವಿಚಾರದಲ್ಲಿ ಯಾರೂ ಮಾತನಾಡಲಿಲ್ಲ. ಅದರ ವಿಚಾರದಲ್ಲಿ 19 ಲಕ್ಷ ಖರ್ಚು ಮಾಡಿದ್ದೇವೆ. ಶ್ರೀ ಗೋಪಾಲ ಸಾಲೆನ್ನರವರು, ಕುರುಡು ಕುಂಟರನ್ನು ಹರಿಜನರ ಜೊತೆಗೆ ಏಕೆ ಸೇರಿಸುತ್ತೀರ ಎಂದು ಕೇಳಿದರು ಅಂದರೆ ಹರಿಜನ ಡಿಪಾರ್ಟ್‌ಮೆಂಟಿಗೆಂದು. ಬ್ರೇನ್‌ಗಿಂತ ಹಾರ್ಟ್ ಬಹಳ ಮುಖ್ಯ ಎಂದು ಹೇಳುತ್ತಿದ್ದರು.

ಶ್ರೀ ಜಿ. ದುಗ್ಗಪ್ಪ.—ಗಾಂಧೀಜಿಯವರದು ದೊಡ್ಡ ಹೆಸರು, ಅದನ್ನು ಉಪಯೋಗಿಸಬೇಡಿ.

ಶ್ರೀಮತಿ ಯಶೋಧರ ದಾಸಪ್ಪ.—ಗಾಂಧೀಜಿಯವರು ಇಲ್ಲದಿದ್ದರೆ ಹರಿಜನ ಎನ್ನುವ ಹೆಸರೇ ಬರುತ್ತಿರಲಿಲ್ಲ; ಅವರಿಲ್ಲದಿದ್ದರೆ ಹರಿಜನರು ಏನು ಮಾಡುತ್ತಿದ್ದರು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗಾಂಧೀಜಿ ಹೆಸರನ್ನು ಹೇಳುವುದರಲ್ಲಿ ನಿಮಗೆ ಇರುವ ಹಕ್ಕು, ಈ ಸಭೆಯಲ್ಲಿ ಇನ್ಯಾರಿಗೂ ಇಲ್ಲ. ಹರಿಜನರಿಗೆ ಅವರಿಂದ ಏನೂ ಸಾಧನೆಯಾಗಿಲ್ಲ ಎಂದು ಹೇಳಬಹುದು. ಆದರೆ ಗಾಂಧೀಜಿಯವರ ಹೆಸರು ಹೇಳುವುದಕ್ಕೆ ಅವರಿಗೆ ಹಕ್ಕು ಇದೆ, ನಮಗೆ ನಿಮಗೆ ಆ ಹಕ್ಕು ಇಲ್ಲ.

MR. SPEAKER.—Let the Hon'ble Minister proceed.

ಶ್ರೀಮತಿ ಯಶೋಧರ ದಾಸಪ್ಪ.—ಇನ್ನು ಕಟ್‌ಮೋಶನ್ನುಗಳಿಗೆ ಒಂದೊಂದಾಗಿ ಉತ್ತರ ಹೇಳಿದ್ದೇನೆ. ಶ್ರೀ ಸಿದ್ದಯ್ಯ ಕಾಶೀಮಠರು ಹಾಸ್ಟೆಲುಗಳ ವಿಷಯ ಹೇಳಿದರು. ಅವರ ಕಡೆ 3-4 ತಾಲ್ಲೂಕಿನಲ್ಲಿ ಆಗಬೇಕು. ಜಿಲ್ಲಾವಾರು ನೋಡಿಕೊಂಡು, ತಾಲ್ಲೂಕುವಾರು ಮಾಡಿಕೊಳ್ಳ

(ಶ್ರೀಮತಿ ಯಶೋಧರ ದಾಸಪ್ಪ)

ಬೇಕು. phased programme ಪ್ರಕಾರ, ಜನಸಂಖ್ಯೆ ಹೆಚ್ಚಾಗಿರುವ ಕಡೆ, ಹಾಸ್ಟಲುಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ 39 incomplete hostel ಗಳನ್ನು Complete ಮಾಡುವುದಕ್ಕೆ ಹಣ ಹೆಚ್ಚಾಗಿ ಬೇಕಾಗಿರುವುದರಿಂದ, ಸಾಧ್ಯವಾದಷ್ಟು ಹಣ ಒದಗಿಸಿ ಕೊಂಡು, ಲ್ಯಾಪ್ಸ್ ಆದ ಹಣ ಪಡೆದುಕೊಂಡು, ಅದರ ಮುಖಾಂತರ ತಾಲ್ಲೂಕುವಾರು ಹಣ ಕೊಡುವುದಕ್ಕೆ ಪ್ರಯತ್ನ ಮಾಡೋಣ. ಶ್ರೀರಂಗನಾಥರವರೂ ಲ್ಯಾಪ್ಸ್ ಆಗಿದೆ ಹಣ ಅಂತ ಹೇಳಿ ದರು. 2 ನೇ ಯೋಜನೆಯಲ್ಲಿ 207 ಲಕ್ಷ ರೂಪಾಯಿನಲ್ಲಿ, 204 ಲಕ್ಷ ಖರ್ಚು ಮಾಡಿದ್ದೇವೆ. III Five-year plan ನ, First year ನಲ್ಲಿ 10 ಲಕ್ಷ ರೂಪಾಯಿ ಲ್ಯಾಪ್ಸ್ ಆಗಿರುವುದು ನಿಜ. ಈ ಎರಡು ವರ್ಷ ಒಂದು ಕಾಸೂ ಲ್ಯಾಪ್ಸ್ ಆಗಿಲ್ಲ. ಬಂದಿರುವ ಹಣವೇ ಕಡಿಮೆ. ಸ್ವಲ್ಪ ಹಣ ಲ್ಯಾಪ್ಸ್ ಆಗಿದ್ದರೂ, ಮುಂದಕ್ಕೆ ಬೇಡಿ ಖರ್ಚು ಮಾಡುತ್ತೇವೆಯೇ ವಿನ, ಲ್ಯಾಪ್ಸ್ ಮಾಡುತ್ತೇವೆಂದು ಖಂಡಿತ ತಿಳಿದುಕೊಳ್ಳಬೇಡಿ.

ಕಟ್‌ಮೋಷನ್ನುಗಳಲ್ಲಿ ಏನೇನೋ ಕೇಳಿದ್ದೀರಿ. ಆ ವಿಷಯಗಳೆಲ್ಲವನ್ನೂ ನೂ ಕೂಡ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. pre-matric scholarship cutmotion ನಲ್ಲಿದೆ. ಖಂಡಿತವಾಗಿ ಮಕ್ಕಳಿಗೆ ಕೊಡಬೇಕು, ಅದು ನ್ಯಾಯ ಎರಡು ವರ್ಷ ಕೊಟ್ಟಿದ್ದೇವೆ. ಇನ್ನು ಮುಂದಕ್ಕೂ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇಷ್ಟು ಮಾತ್ರ ಹೇಳಬಲ್ಲೆ.

ಹೆಣ್ಣು ಮಕ್ಕಳ ಹಾಸ್ಟಲಿನಲ್ಲಿ ಶ್ರೀ ಗೋಪಾಲಗೌಡರು ಹೇಳಿದ್ದು ನನಗೆ ಎಲ್ಲಾ ಗೊತ್ತಿದೆ. ನನ್ನನ್ನು ದಯವಿಟ್ಟು ತಾವು ಈ ಹೌಸಿನ ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಹೇಳಿ. ಹೆಣ್ಣು ಮಕ್ಕಳ ಔಚಿತ್ಯ, ಹೆಣ್ಣು ಮಕ್ಕಳ ನಡೆನುಡಿ ವಿಚಾರದಲ್ಲಿ ನನಗಿಂತಲೂ ಹೆಚ್ಚಿನ ಪ್ರಾಧಾನ್ಯ, ಗೌರವ ಕೊಡತಕ್ಕಂಥವರು ಬೇರೆ ಇಲ್ಲ, ಎಲ್ಲಿಯೇ ಆಗಲಿ, ಹೆಣ್ಣು ಮಕ್ಕಳ ಕ್ಯಾರೆಕ್ಟರಿಗೆ ಚ್ಯುತಿ ಬರುವಂ ಥಾದ್ದನ್ನು ಏನಾದರೂ ನೋಡಿದರೆ, ಆ ತಕ್ಷಣ, ಕೂಡಲೆ, ಅದನ್ನು ಯಾವ ರೀತಿ ಸರಿಪಡಿಸಬೇಕೋ ಆ ರೀತಿ ಸರಿಪಡಿಸುವುದಕ್ಕೆ ಸದಾ ಸಿದ್ಧನಿದ್ದೇನೆ. ನಾನು ಹೋದ ಕಡೆ ಜಾಗಗಳಲ್ಲಿ ನನ ಕಿವಿಗೆ ಬಿದ್ದ ಕೂಡಲೆ, ಅಥವ ಟೆಲಿಗ್ರಾಂ ಮೂಲಕ ವರ್ತಮಾನ ಬಂದರೆ, ತಕ್ಷಣ ಅಟೆಂಡ್ ಮಾಡಿದ್ದೇನೆ. ಯಾರ್ಯಾರಿಗೆ ಹೇಳಬೇಕೋ ಅವರಿಗೆ ಹೇಳಿ, ಸತ್ಯಾಂಶ ತಿಳಿದುಕೊಂಡು, ಸರಿಯಾದ ಚಿಕಿತ್ಸೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪೋಲೀಸರು ಏನೂ ಕ್ರಮವನ್ನೂ ತೆಗೆದುಕೊಂಡಿಲ್ಲ.

ಶ್ರೀಮತಿ ಯಶೋಧರ ದಾಸಪ್ಪ.—ಅವರು ತಗೆದುಕೊಳ್ಳುತ್ತಾರೆ, ತೆಗೆದುಕೊಳ್ಳದೆ ಬಿಡುವುದಿಲ್ಲ.

Mr. SPEAKER.—I have gone through that article. It is a very unhappy episode, if it is true. I have passed on the paper to the Government. I trust the Government will enquire into the matter. Before I pass on to the next item I wish to inform the House that every Member must remember rule 289 which governs and binds him effectually. That says:

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter for the purpose of reply:
>
> Provided that the Speaker may at any time prohibit any member from making any such allegation if he is of opinion that such allegation is derogatory to the dignity of the Assembly or that no public interest is served by making such allegation."

Nothing was mentioned to me in compliance with this rule. It does not matter. I do not mind and even that I overlooked. But

I wanted to know if there is any truth in it. I have not been taken into confidence. Members should not mention anything of the type without intimation to me and the Minister concerned. I will shut out such remarks in future.

Sri C. J. MUCKANNAPPA.—Once the Chair has given a ruling that if a particular Member believes what the Press has reported is correct, that can be quoted.

Mr. SPEAKER.—I did not say that. The Member should not mention it on the floor of the House.

Sri C. J. MUCKANNAPPA.—There are instances where the entire thing was read out to the House and the Hon'ble Speaker has put the question: "whether the Member belives it *bone fide* or whether he is sure." When the Member said 'yes', the Hon'ble Speaker stated that it might go into the proceedings.

Mr. SPEAKER.—The Hon'ble Member must remember that I have done it under circumstances where I did not want to shut out the debate. If the rule is violated, I want every Member to point out such rules so that they should be enforced. Let him not make any comment. I will enforce the rule.

5-00 P.M.

ಶ್ರೀಮತಿ ಯಶೋಧರ ದಾಸಪ್ಪ.—ಅಗ್ರಿ ಕಲ್ಚರಲ್ ಕಾಲೋನಿ ವಿಚಾರವಾಗಿ ಮಾತನಾಡುವಾಗ ಇಷ್ಟನ್ನು ಮಾತ್ರ ಹೇಳಬಲ್ಲೆ. ಅಲ್ಲಿ ತೊಂದರೆಯಾಗಿದೆ, ಹಣ ದುರುಪಯೋಗವಾಗಿದೆ, ಕೆಲವು ಕಡೆ ಕಾಲೋನಿಗಳು ಸರಿಯಾಗಿ ನಡೆಯುತ್ತಾ ಇಲ್ಲ, ಗುಂಡಲುಪೇಟೆಯಲ್ಲಿ ನಾನು ನೋಡಿದ್ದೇನೆ. ಆ ಕಾಲೋನಿ ವಿಚಾರ ಆಂಟಿಕರಪ್ಷನ್ ಇಲಾಖೆಯವರಲ್ಲಿ ಇದೆ, ಮಂಗಳೂರಿನಲ್ಲಿ ಇರುವ ಕಾಲೋನಿಯಲ್ಲಿ ಏನು ತೊಂದರೆಯಾಗಿದೆ ಅದನ್ನು ಡೆಪ್ಯೂಟಿ ಕಮಿಷನರು ಮತ್ತು ಇನ್ನೊಬ್ಬ ಆಫೀಸರು ಅಲ್ಲಿ ಯಾವ ರೀತಿಯಾಗಿ ದುರುಪಯೋಗವಾಗಿದೆ ಎಂಬುದನ್ನು ತಿಳಿದುಕೊಳ್ಳುತ್ತಾ ಇದ್ದಾರೆ. ಯಾರೋ ಒಬ್ಬರು ಮಾನ್ಯ ಸದಸ್ಯರು ಹೆಂಗಸರು ಬಹಳ ಕೋಮಲ ಸ್ವಭಾವದವರು, ಅದಕ್ಕೇ ಸರಿಯಾಗಿ ನಡೆಯುತ್ತಿಲ್ಲ, ಯಾರಾದರೂ ಒಬ್ಬರು ಗಂಡಸರು ಬರಬೇಕು ಎಂದು ಹೇಳಿದರು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗಾಗಲೇ ಇದಕ್ಕೆ ಕೊಟ್ಟಿರತಕ್ಕ ಸಮಯ ಮುಗಿಯುತ್ತಾ ಬಂದಿರುವುದರಿಂದ ಇನ್ನೂ ಅರ್ಧ ಗಂಟೆ ಕಾಲ ಹೆಚ್ಚಿಗೆ ಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—My imperative duty is to put it to the House. If the House wants, I will extend time. Does the House suggest that the time should be extended ?

Sri C. J. MUCKANNAPPA.—Yes, by one hour.

Mr. SPEAKER.—I will extend the time by one hour. Let us finish earlier and take up the other Demands. I suppose it is the desire of the House that the time for these demands should be extended by one hour.

HON'BLE MEMBERS.—Yes.

Sri S. SIVAPPA.—This extension of time is indiscriminate. The Ministers havs no sense of proportion regarding time.

Mr. SPEAKER.—Where was the Leader of the Opposition all the while ?

Sri S. SIVAPPA.—It is not our fault. They should adjust themselves. The Chair has definitely allotted certain time for reply.

Mr. SPEAKER.—If the member does not want it, he may reject the suggestion.

Sri S. SIVAPPA.—You put restrictions on the members for their speeches. You must put restrictions on the Ministers also.

Mr. SPEAKER.—I said that I was prepared to put it to the vote of the House.

Sri S. SIVAPPA.—We want to hear them within a certain time.

Mr. SPEAKER.—The Hon'ble member may tell them to speak this much and nothing more.

ಶ್ರೀಮತಿ ಯಶೋಧರ ದಾಸಪ್ಪ.—ಅಗ್ರಿಕಲ್ಚರಲ್ ಕಾಲೋನಿ ಫೇಲ್ಯೂರ್ ಆಗುವುದಕ್ಕೆ ಕಾರಣ ಏನೆಂದರೆ ಮೊದಲು ಚುನಾಯಿಸಿದ ಜಾಗದಲ್ಲಿ ಬಾವಿ ತೆಗೆದರು. ಅಲ್ಲಿ ನೀರು ಬರುತ್ತದೆಯೇ ಇಲ್ಲವೇ ಎಂಬುದನ್ನು ನೋಡಬೇಕಾದ್ದು ಮೊದಲ ಕರ್ತವ್ಯವಾಗಿತ್ತು. ಆದರೆ ಆ ರೀತಿ ಮಾಡದೇ ಇದ್ದುದನ್ನು ಈಗ ಸರಿಪಡಿಸಿ ಮುಂದೆ ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ಒಂದು ಹೊಸ ಕಾನೂನನ್ನು ಮಾಡಿ ಮನೆ ಕಟ್ಟಲು 750 ರೂಪಾಯಿಗಳನ್ನು ಕೊಡಬೇಕು—ಮೊದಲು 400 ರೂಪಾಯಿಗಳನ್ನು ಕೊಡುತ್ತಾ ಇದ್ದರು—ಎತ್ತುಗಳಿಗೆ ಮೊದಲು 300 ರೂಪಾಯಿಗಳನ್ನು ಕೊಡುತ್ತಾ ಇದ್ದರು. ಈಗ 500 ರೂಪಾಯಿಗಳನ್ನು ಕೊಡಬೇಕು ಎಂದು ಮಾಡಿ.—

[SMT. NAGARATNAMMA HIREMATH (CHAIRMAN) in the Chair.]

ರೆಕ್ಲಮೇಷನ್ ಆಫ್ ಲ್ಯಾಂಡ್‌ಗೆ 100 ರೂಪಾಯಿ ಕೊಡಬೇಕೆಂತಲೂ ಆಗಿದೆ. ಒಂದು ವರ್ಷ ಯಾರು ಕಾಲೋನಿಗೆ ಹೋಗಿ ಅಲ್ಲೇ ಇರುತ್ತಾರೆ ಅವರಿಗೆ ತಿಂಗಳಿಗೆ ಒಂದು ಸಂಸಾರಕ್ಕೆ 50 ರೂಪಾಯಿನಂತೆ ಕೊಡಬೇಕೆಂತಲೂ ಆಗಿದೆ. ಏಕೆಂದರೆ ಮೊದಲ ವರ್ಷ ಅವರು ಅಲ್ಲಿಗೆ ಹೋದಾಗ ಮೇನ್‌ಟೆನೆನ್ಸ್‌ಗೆ ಕೊಡದಿದ್ದರೆ ಅವರು ಬೇರೆ ಕಡೆಗೆ ಎಲ್ಲಾದರೂ ಕೂಲಿ ಕೆಲಸಕ್ಕೆ ಹೋಗಿ ಅವರಿಗೆ ಕೊಟ್ಟಿರುವ ಕಾಲೋನಿ ಏನಿದೆ ಅದನ್ನು ಅಭಿವೃದ್ಧಿ ಮಾಡುವುದಕ್ಕೆ ತೊಂದರೆಯಾಗುತ್ತದೆ ಎಂದು ತಿಳಿದು ಅವರಿಗೆ ಒಂದು ಸಂಸಾರಕ್ಕೆ ಒಂದು ವರ್ಷದವರೆಗೂ ತಿಂಗಳಿಗೆ 50 ರೂಪಾಯಿನಂತೆ ಅವರ ಜೀವನೋಪಾಯ ನಡೆಸುವುದಕ್ಕೆ, ಜಮೀನು ಆಬಾದು ಮಾಡಿಕೊಳ್ಳುವುಕ್ಕೆ ಅವಕಾಶ ಕಲ್ಪಿಸಿ ಕೊಡಬೇಕೆಂದು ಹೊಸ ರೂಲ್ಸ್ ಮಾಡಿ ಆ ಕಾಲೋನಿಗಳು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ, ಅವುಗಳ ಮೇಲ್ವಿಚಾರಣೆಗೆ ಸ್ಪೆಷಲ್ ಆಗಿ ಒಬ್ಬ ಆಫೀಸರನ್ನು ನೇಮಕ ಮಾಡಿ ಅವರು ಈ ಕಾಲೋನಿಗಳು ಸರಿಯಾದ ರೀತಿಯಲ್ಲಿ ನಡೆಯುವಂತೆ ಅವುಗಳಿಗೆ ಕೊಟ್ಟ ಹಣ ಸದುಪಯೋಗವಾಗುವಂತೆ ಮಾಡಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾರೆ. ಮೊನ್ನೆ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಕೇಳಿದರು. ಈ ಕಾಲೋನಿಗಳಲ್ಲಿ ಮನೆ ಕಟ್ಟುವುದು ನಿಂತಿರುವುದರಿಂದ ಅದಕ್ಕೆ ಕಾರಣ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೆಂಟರ್‌ನಿಂದ ಹಣ ಬರದೇ, ಸ್ಟೇಟ್ ಸೆಕ್ಟರ್‌ನಿಂದ ಮಾತ್ರ ಹಣ ತೆಗೆದುಕೊಂಡು ಕಾಲೋನಿ ಕಟ್ಟಿರುವುದರಿಂದ ತೊಂದರೆಯಾಗಿದೆ. ಅಂದ ಮಾತ್ರಕ್ಕೆ ಅದು ಸರಿಯಾಗಿ ನಡೆಯುತ್ತಿಲ್ಲ, ಅವನ್ನು ನಿಲ್ಲಿಸಬೇಕೆಂದು ಹೇಳುವುದಕ್ಕೆ ಬದಲಾಗಿ ಅವು ಸರಿಯಾದ ರೀತಿಯಲ್ಲಿ ನಡೆಯುವಂತೆ ಮಾಡಲು ಕಮ್ಯೂನಿಟಿ ಸೆಂಟರ್ ಕೊಡಬಹುದು, ಬಾವಿ ಕೊಡಬಹುದು, ಅಲ್ಲಿರತಕ್ಕ ಜನಗಳಿಗೆ ಜಮೀನು ಆಬಾದು ಮಾಡಿಕೊಳ್ಳುವುದಕ್ಕೆ ಹಣ ಕೊಡಬಹುದು, ಈ ಎಲ್ಲಾ ಅನುಕೂಲಗಳನ್ನೂ ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ. ಅದೇ ರೀತಿಯಲ್ಲಿ ಅಲ್ಲಿರತಕ್ಕ ಜನರ ಮಕ್ಕಳಿಗೆ ನರ್ಸರಿ ಸ್ಕೂಲುಗಳನ್ನು ಮಾಡುವುದರಿಂದ ಅವರಿಗೆ ಬಹಳ ಉಪಯೋಗವಾಗುತ್ತದೆ. ಈ ರೀತಿಯಲ್ಲಿ ಆ ಕಾಲೋನಿಗಳನ್ನು ಮಾಡುವುದು ಬಹಳ ಒಳ್ಳೆಯದು ಎಂದು ನಾವು ತಿಳಿದಿರುವುದರಿಂದ ಅವನ್ನು ನಿಲ್ಲಿಸುವುದಿಲ್ಲ ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಏನು ಕ್ರಮಗಳನ್ನು ಮಾಡಬೇಕೋ ಅವನ್ನು ಮಾಡುತ್ತೇವೆ.

ಇನ್ನು ಹಣವನ್ನು ಕೊಡುವ ವಿಷಯವನ್ನು ಅನೇಕರು ಹೇಳಿದರು. ಈ ಮಂತ್ರಿಗಳು ಬಂದ ಮೇಲೆ ಈ ಕೆಲಸ ಸರಿಯಾಗಿ ಆಗುತ್ತಿಲ್ಲ ಎಂದು, ಅದು ಸತ್ಯ, ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಕೇಳಿದವರಿಗೆ, ಹೇಳಿದವರಿಗೆಲ್ಲಾ ನಾನು ಹಣವನ್ನು ಕೊಡುತ್ತಾ ಇಲ್ಲ ನಾನು ಹೋದ ಕಡೆಯಲ್ಲೆಲ್ಲಾ ನಾನು ನೋಡುತ್ತಾ ಇದ್ದೇನೆ. ಹೋದ ಸಲ ಗುಲ್ಬರ್ಗ ಜಿಲ್ಲೆ ಹಿಂದುಳಿದಿದೆ ಎಂದು

ಹೇಳಿದರು, ಅಲ್ಲಿ ಜನ ತೊಂದರೆಯಲ್ಲಿದ್ದಾರೆ ಎಂದು ತಿಳಿದಕೂಡಲೇ ಹಿಂದಿನ ವರ್ಷ ಲ್ಯಾಪ್ಸ್ ಆದದ್ದನ್ನು 30 ಸಾವಿರದ ರೂಪಾಯಿಗಳವರೆಗೂ ಅಲ್ಲಿ ಜನಗಳಿಗೆ ಕೊಟ್ಟು ಆಯಿತು. ಮೊನ್ನೆ ಬಿದರ್-ಗುಲ್ಬರ್ಗಕ್ಕೆ ಹೋದಾಗ ಕುಡಿಯುವ ನೀರಿನ ಕೆಲಸಕ್ಕಾಗಿ ಇಟ್ಟಿದ್ದ ಹಣ ಏನು ಲ್ಯಾಪ್ಸ್ ಆಗುತ್ತಾ ಇತ್ತು ಅದನ್ನೆಲ್ಲಾ ಕೊಟ್ಟು 7 ಬಾವಿಗಳನ್ನು ತೆಗೆದು ಸೌಕರ್ಯವನ್ನು ಮಾಡಿಕೊಟ್ಟದ್ದು ಆಯಿತು ಮತ್ತು ಎಲ್ಲೆಲ್ಲಿ ಕೈಯಲ್ಲಾಗದವರು ಮುದುಕರು ಮತ್ತು ಡಿಫೆಕ್ಟೀವ್ ಪೀಪಲ್ ಇದ್ದಾರೆ ಹರಿಜನ ಕೇರಿಯಲ್ಲಿ ಅಂತಹವರಿಗೆ ಹಸು ಎಮ್ಮೆಗಳನ್ನು ಕೊಡುತ್ತಾ ಇದ್ದೇವೆ, ಅವು ಸರಿಯಾದ ರೀತಿಯಲ್ಲಿ ಅವರ ಕೈ ಸೇರುವ ಹಾಗೆ ನೋಡಿಕೊಳ್ಳುತ್ತಾ ಇದ್ದೇವೆ. ಇದೇ ರೀತಿಯಲ್ಲಿ ಅವರಿಗೆ ಅನೇಕ ರೀತಿಯಲ್ಲಿ ಅರ್ಥಿಕ ನೆರವನ್ನು ನೀಡುತ್ತಾ ಇದ್ದೇವೆ. ಲಂಬಾಣಿ ಸೋಷಿಯಲ್ ವರ್ಕರ್ಸ್ ವೈಫ್ಸ್ ಯಾರೂ ಕೂಡ ಕೆಲಸ ಕೊಡಿ ಎಂದು ಅರ್ಜಿ ಹಾಕಿರಲಿಲ್ಲ, ಯಾರೂ ಕೂಡ ಕೆಲಸ ಕೊಡಿ ಎಂದು ಕೇಳಿರಲಿಲ್ಲ. ಆದರೂ ಕೂಡ ನಾನು ಹೋದ ಸಮಯದಲ್ಲಿ ಅವರ ಹತ್ತಿರ ಮಾತನಾಡಿದಾಗ ಯಾವಳಿಗೆ ಸಹಾಯಬೇಕು ಎಂದು ಕೇಳಿದಳೋ ಅವಳಿಗೆ ಸಹಾಯ ನೀಡಬೇಕೆಂದು ಹೇಳಿ ಬೇಕಾದ ಸೌಕರ್ಯ ಮಾಡಿಕೊಟ್ಟು ಬಂದಿದ್ದೇನೆ. ವೀರಾಜ ಪೇಟೆಗೆ ಹೋದಾಗ ಕೆಲವು ಹೆಣ್ಣುಮಕ್ಕಳು ನಮಗೆ ತೊಂದರೆಯಾಗಿದೆ ಎಂದು ಹೇಳಿದಾಗ ಅವರ ಹೆಸರುಗಳನ್ನು ಕೊಡಬೇಕೆಂದು ಹೇಳಿ ಅವರ ಹೆಸರನ್ನು ತೆಗೆದುಕೊಂಡು ಅವರಿಗೆ ಯಾವ ಸಹಾಯ ಬೇಕೋ ಅದನ್ನು ಮಾಡಿಕೊಟ್ಟಿದ್ದೇನೆ. ಇದನ್ನೆಲ್ಲಾ ಏಕೆ ಹೇಳುತ್ತಾ ಇದ್ದೇನೆ ಎಂದರೆ ಎಲ್ಲೆಲ್ಲಿ ಕಷ್ಟ ಇದೆ ತೊಂದರೆ ಇದೆ ಅದನ್ನು ಕಣ್ಣಾರೆ ನೋಡಿದ ಜಾಗದಲ್ಲಿ ಅಲ್ಲಿಗೆ ಕೊಟ್ಟ ಹಣ ಸದುಪಯೋಗ ವಾಗುವ ಹಾಗೆ ಒಂದು ಕಾಸೂ ಹಾಳಾಗದಂತೆ ನೋಡಿಕೊಂಡು ಅದನ್ನು ಹಂಚುವುದಕ್ಕೆ ಏರ್ಪಾಡು ಮಾಡುತ್ತಾ ಇದ್ದೇವೆ. ಈಗ ಶ್ರೀಮಾನ್ ಸಾಲಿಯಾನಾ ಅವರು ಮತ್ತು ಇನ್ನೂ ಅನೇಕ ಸದಸ್ಯರು ಹೇಳಿದರು. ಅನ್‌ಟಚಬಲಿಟಿ ಇದೆ, ಬಾವಿಯಲ್ಲಿ ನೀರು ತೆಗೆದುಕೊಂಡರೆ ತೊಂದರೆ ಯಾಗುತ್ತಿದೆ ಎಂದು. ನಾನು ಈ ಸಭೆಯಲ್ಲಿ ಹೇಳಿದ್ದಕ್ಕೆ ಅದನ್ನು ಒಪ್ಪಲಿಲ್ಲ, ಚೆನ್ನರಾಯಪಟ್ಟಣ ದಲ್ಲಿ ಅನ್‌ಟಚಬಿಲಿಟಿ ಪ್ರಶ್ನೆ ಬಂದು ತೊಂದರೆ ಆಯಿತು ಅಂತ ಅಂದ ತಕ್ಷಣ ಐ ಜಿ ಪಿ ಅವರಿಗೆ ಬರೆದು ಅದನ್ನು ಸರಿಪಡಿಸಿದ್ದೇವೆ. ಶ್ರೀರಂಗಪಟ್ಟಣದಲ್ಲೂ ಕೂಡ ಅದೇ ರೀತಿ ಆದಾಗ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಜಮಖಂಡಿಯಲ್ಲಿ ತೊಂದರೆಯಾಯಿತು ಎಂದ ತಕ್ಷಣ ಐ.ಜಿ.ಪಿ. ಅವರಿಗೆ ತಿಳಿಸಿ ಸೂಕ್ತ ಕ್ರಮ ಜರುಗಿಸುವುದರಲ್ಲಿ ಒಂದು ನಿಮಿಷವು ಕೂಡ ಹಿಂದುಳಿದಿಲ್ಲ.

ಇನ್ನು ಕೆಲವರು ಆಫೀಸರುಗಳು ಸರಿಯಾದ ರೀತಿಯಲ್ಲಿ ಹಣವನ್ನು ಸದುಪಯೋಗ ಮಾಡುವು ದಾಗಲಿ, ಅಥವಾ ಕೆಲಸ ಮಾಡುವುದರಲ್ಲಿ ಆಗಲಿ ಒಂದು ದಯಾಳುತ್ವದಿಂದ ನಡೆಯದೇ ಇರತಕ್ಕ ವಿಚಾರವನ್ನು ಅನೇಕರು ಈ ಸಭೆಯಲ್ಲಿ ಮಾತನಾಡಿದರು. ನಮ್ಮ ಇಲಾಖೆಯಲ್ಲಿ ಏನಾದರೂ ಆ ರೀತಿಯಲ್ಲಿ ಆಫೀಸರುಗಳು ಈ ಹರಿಜನರು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅವರ ವಿಚಾರದಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡಿಲ್ಲ ಎಂದು ತಾವು ತಿಳಿಸುವುದಾದರೆ ಖಂಡಿತವಾಗಿಯೂ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ತಯಾರಾಗಿದ್ದೇವೆ.

ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಸಮಾಜಕಲ್ಯಾಣ ಇಲಾಖೆಯಲ್ಲಿ ಮತ್ತು ಬೇರೆ ಇಲಾಖೆಗಳಲ್ಲಿ ಆಗಿ ಸೌಕರ್ಯವಾಗಿದ್ದರೂ ಮೀಸಲಾಗಿಟ್ಟಿರುವ ಹಣ ಸರಿಯಾಗಿ ವಿನಿಯೋಗವಾಗುತ್ತಿಲ್ಲ ಅದು ಸರಿಯಾಗಿ ಸದುಪಯೋಗವಾಗಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಚಂಪಾಬಾಯಿಯವರು ಹೇಳಿ ದರು ಮತ್ತು ತಹಶೀಲ್ದಾರರು ಮತ್ತು ತಾಲ್ಲೂಕು ಬೋರ್ಡ್ ಹರಿಜನರ ವಿಚಾರದಲ್ಲಿ ಸಹಾನುಭೂತಿ ಯಿಂದ ವರ್ತಿಸುತ್ತಿಲ್ಲ ಎಂದು ಹೇಳಿದರು. ಅದರ ಕಾರ್ಯಕ್ರಮ ಸರಿಯಾಗಿ ತಿಳಿಯದೆ ಹೀಗೆ ಹೇಳುತ್ತಿದ್ದಾರೆ. ಏನೇನು ಕೆಲಸವಾಗಿದೆ ಎಂಬುದಕ್ಕೆ ಅಂಕಿಅಂಶ ಕೊಟ್ಟರೆ ಅವರಿಗೆ ಏನೇನಾಗಿದೆ ಎಂಬುದು ಚೆನ್ನಾಗಿ ಗೊತ್ತಾಗಬಹುದು. ಹಣ ಲ್ಯಾಪ್ಸ್ ಆಗುತ್ತದೆ ಎಂದು ಯೋಚನೆ ಮಾಡ ಬೇಕಾಗಿಲ್ಲ. ಹಣ ಹೆಚ್ಚಾಗಿ ಬೇಕೆಂದು ತಿಳಿದಮೇಲೆ ಪ್ಲಾನಿಂಗ್ ಕಮಿಷನ್ನಿಗೆ ಬರೆದಿದ್ದೇವೆ, ಇವ್ಯಾಲ್ಯುಯೇಷನ್ ಆಫೀಸರಿಂದ ವರದಿ ಬಂದ ಮೇಲೆ ಎಲ್ಲಿ ಲೋಪದೋಷವಿದೆಯೋ ಅದನ್ನು ತಿದ್ದಿ ಸರಿಯಾದ ವರದಿ ತಯಾರಿಸಿ ಲ್ಯಾಪ್ಸ್ ಆಗಿರುವುದನ್ನು ಯಾವ ರೀತಿ ಬರಮಾಡಿಕೊಳ್ಳಬೇಕೋ ಆ ರೀತಿ ಬರಮಾಡಿಕೊಳ್ಳಲು ಪ್ರಯತ್ನ ಮಾಡುತ್ತೇವೆ. ಆದುದರಿಂದ ಹಣ ಲ್ಯಾಪ್ಸ್ ಆದುದರಿಂದ ಸೌಕರ್ಯ ಕಡಿಮೆಯಾಯಿತು ಎಂದು ಯೋಚನೆ ಮಾಡಬಾರದು. ಹಾಸ್ಟೆಲುಗಳಲ್ಲಿ ಎಕ್ವಿಪ್‌ಮೆಂಟ್, ಬಟ್ಟೆ ಬರೆ, ಪೆಟ್ಟಿಗೆ, ಬೇಕಾದ ಸೌಕರ್ಯ ಮುಂತಾದ್ದನ್ನೊದಗಿಸುವುದಕ್ಕಾಗಿದ್ದ ಹಣ ಲ್ಯಾಪ್ಸ್ ಆದರೂ ಒಂದಲ್ಲ ಒಂದು ರೀತಿಯಲ್ಲಿ ಏನು ಅನುಕೂಲ ಬೇಕೋ ಅದನ್ನು ಒದಗಿಸುತ್ತಿದ್ದೇವೆ.

ಇನ್ನು ಪರ್ಸನಲ್ ವಿಚಾರ ಹೇಳುತ್ತೇನೆ. ತಮ್ಮ ಸ್ಥಾನ ಉಳಿಸಿಕೊಳ್ಳುವುದಕ್ಕೆ ಡಿವೈಡ್ ಅಂಡ್ ರೂಲ್ ಪಾಲಿಸಿ ಅನುಸರಿಸುತ್ತಿದ್ದಾರೆ, ಷೆಡೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್‌ಗೆ ಮತ್ತೆ ಅಡ್ವೈಜರಿ ಬೋರ್ಡನ್ನು ಮಾಡಿದರು ಎಂದು ಹೇಳಿದರು. ಕೇಂದ್ರದಲ್ಲಿ ಆ ಬೋರ್ಡನ್ನು ಮಾಡು ತ್ತಿದ್ದೇವೆ. ಆಯಾ ಜನರ ಕಷ್ಟಸುಖ ಕೇಳಿ ಅವರ ಅನುಕೂಲಕ್ಕಾಗಿರುವ ಹಣ ಯಾವರೀತಿ

(ಶ್ರೀಮತಿ ಯಶೋಧರ ದಾಸಪ್ಪ)

ಉಪಯೋಗಮಾಡಬೇಕೆಂದು ನೋಡಿ ಸಮಾಧಾನವಾಗುವ ಹಾಗೆ ಮಾಡುತ್ತೇವೆ. ಅವರೂ ಕೂಡ ತಮಗೆ ಒಂದು ಪ್ರಾಧಾನ್ಯತೆ ಕೊಟ್ಟಿದ್ದಾರೆ ಎಂಬುದನ್ನು ಫೀಲ್ ಮಾಡಬೇಕು. ನಮಗೆ ಎಲ್ಲರೂ ಒಂದೇ, ಇಲಾಖೆಯನ್ನು ಬೇರೆಯವರಿಗೆ ಹಂಚಿಕೊಡಿ ಎಂದು ಹೇಳಿದ್ದಾರೆ; ಸಂತೋಷ ರಾಜ್ಯಾಂಗದ ಪ್ರಕಾರ 1970ರಲ್ಲಿ ಎಲ್ಲಾ ಲೀನವಾಗುತ್ತದೆ ಎಂದು ಹೇಳುವಾಗ ಮುಂಚೆಯೇ ಲೀನವಾಗಲಿ ಎಂದು ಶಿಫಾರ್ಸು ಮಾಡಿದರೆ ಸಂತೋಷ. ವೀಕರ್ ಸೆಕ್ಷನ್ ಕಷ್ಟಸುಖ ನೋಡಿ ಅವರನ್ನು ಇತರರ ಮಟ್ಟಕ್ಕೆ ತರಬೇಕೆಂಬ ಪ್ರಯತ್ನವಿರುವಾಗ ವೆಲ್‌ಫೇರ್ ಮಂತ್ರಿಗಳಿರಬೇಕಾಗಿಲ್ಲ, ಆ ಸ್ಥಾನ ಬೇಕಾಗಿಲ್ಲ ಎಂದು ಹೇಳುತ್ತಿದ್ದಾರೆ. ಸಮಾಜದ ವೆಲ್‌ಫೇರ್, ಸೋಷಿಯಲ್ ವೆಲ್‌ಫೇರ್ ದೇಶದಲ್ಲಿ ಗಮನ ಕೊಡಲೇಬೇಕಾದ ವಿಚಾರ. ಜನರಿಗೆ ಸುಧಾರಣೆ ಮಾಡಲು ವೆಲ್‌ಫೇರ್ ಇಲಾಖೆ ಇದ್ದೇ ಇರುತ್ತದೆ. ಹರಿಜನರ ಉದ್ಧಾರದ ಕೆಲಸ ಈ ಇಲಾಖೆಯ ಆಶ್ರಯದಲ್ಲಿರುವುದು ಬೇಡ, ಅದನ್ನು ಹಂಚಿ ಬೇರೆಯವರಿಗೆ ವಹಿಸಿ, ಮುಖ್ಯಮಂತ್ರಿಗಳಿಗೆ ಕೊಡಿ ಅಥವಾ ಇಲಾಖೆಯನ್ನೇ ತೆಗೆಯಿರಿ ಎಂದು ಹೇಳುವುದು ಎಲ್ಲರ ಇಚ್ಛೆಯಾದರೆ ಅದಕ್ಕಿಂತ ಸ್ವಾಗತಾರ್ಹವಾದ ಕಾರ್ಯ ಬೇರೊಂದಿಲ್ಲ. ಹಿಂದುಳಿದ ಜನಾಂಗಕ್ಕೆ ರಾಜ್ಯಾಂಗದ ಪ್ರಕಾರ ಸೌಕರ್ಯ ಸಿಕ್ಕುತ್ತಿದೆ. ಬೇರೆ ವಿಧವಾಗಿ ಅದು ದೊರೆಯುತ್ತದೆ, ಇದು ಬೇಡವೆಂದರೆ ವಿಚಾರ ಮಾಡಬಹುದು, ಆದರೆ ಸೋಷಿಯಲ್ ವೆಲ್‌ಫೇರ್ ಇಲಾಖೆ ನಾನು ಬಿಟ್ಟರೂ ಇನ್ನೊಬ್ಬರಿಗೆ ಅವಕಾಶವಿದ್ದೇ ಇದೆ. ನಾನು ಹೋಗುವಾಗ ಇನ್ನೊಬ್ಬ ಹೆಣ್ಣುಮಗಳಿಗೆ ಬಿಟ್ಟು ಹೋಗುತ್ತೇನೆಯೇ ವಿನಾ ಬೇರೆಯವರಿಗೆ ಕೊಡುವುದಿಲ್ಲ. ಇದು ಹೆಣ್ಣುಮಕ್ಕಳಿಗೆ ಸಂಬಂಧಪಟ್ಟಿದೆ. ನಾವು ಶೇಕಡ 50 ರಷ್ಟಿದ್ದೇವೆ; ನಮ್ಮ ಜಾಗ ನಾವು ಬಿಟ್ಟುಕೊಡುವುದಿಲ್ಲ. ಹೆಣ್ಣುಮಕ್ಕಳು ಅವರ ಸುಧಾರಣೆಗೆ ಬೇಕಾದ್ದನ್ನು ಮಾಡಿಕೊಳ್ಳುತ್ತಿಲ್ಲ, ಅದು ಬೇರೆ ವಿಷಯ. ನಮ್ಮ ಖಾತೆ ವಿಚಾರದಲ್ಲಿ ಯಾವ ರೀತಿ ಮಾಡಿದರೆ ಈ ಜನಾಂಗಕ್ಕೆ ಒಳ್ಳೆಯದಾಗುತ್ತದೆ ಸರಿಯಾದ ಪ್ರಗತಿ ಸಿಕ್ಕುತ್ತದೆ ಎಂದು ಯೋಚನೆ ಮಾಡಿ ಬೇಕಾದ ಕಾರ್ಯಕ್ರಮ ಕೈಗೊಳ್ಳುವದರಲ್ಲಿ ದೋಷವೇನೂ ಇಲ್ಲ. ಈಗ ಕಡಮೆ ಸ್ಥಾನ ಸಿಕ್ಕಿರಬಹುದು. ಆದರೆ ಟೀಕೆ ಮಾಡಿದ ಮಾತ್ರಕ್ಕೆ ವೆಲ್‌ಫೇರ್ ಸ್ಟೇಟ್ ಎಂಬ ಹೆಸರು ಇದ್ದೇಇರುತ್ತದೆ, ಸಮಾಜ ಕಲ್ಯಾಣ ಎಂಬ ಹೆಸರನ್ನು ತೆಗೆಯುವುದಕ್ಕಾಗುವುದಿಲ್ಲ. ಕಷ್ಟದಲ್ಲಿರುವ ಜನಾಂಗಕ್ಕೆ ಬೇಕಾದ ಸುಧಾರಣೆ ಆಗಲೇಬೇಕು; ನಿರ್ಬಂಧ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಇದಕ್ಕೆ ಬೆಂಬಲ ಕೊಡುವುದನ್ನು ಬಿಟ್ಟು ಕೊಡುವುದು ಮೂರು ಕಾಸು, ಕೋಣೆ ತುಂಬಾ ಹಾಸು ಎಂಬ ಗಾದೆಯಂತೆ ಏನೋ ಹೇಳಿದರೆ ಪ್ರಯೋಜನವಿಲ್ಲ. ಪ್ರತಿಯೊಂದು ಕಾಸನ್ನೂ ಎಚ್ಚರಿಕೆಯಿಂದ ಖರ್ಚು ಮಾಡುತ್ತಿದ್ದಾರೆ. ಹಾಗೆ ಮಾಡುತ್ತಿದ್ದರೂ ಒಂದು ಒಳ್ಳೆಯ ಮಾತನ್ನಾದರೂ ಆಡದೆ ಯಾವುದೂ ಆಗಿಲ್ಲ, ಎಂದು ಹೇಳಿದರೆ ಕೇಂದ್ರ ಸರ್ಕಾರ ಮುಂದೆ ಹಣ ಸಹಾಯ ಮಾಡಲು ಏನು ಹೇಳೀತು ಎಂಬುದನ್ನು ಯೋಚನೆ ಮಾಡಬೇಕು. ಏನು ಕೆಲಸವಾಗಿದೆ, ಏನಾಗಬೇಕು ಎಂಬುವಕ್ಕೆ ಅಂಕಿಅಂಶಗಳನ್ನು ಅಚ್ಚು ಹಾಕಿಸಿ ತಮ್ಮ ಮುಂದಿಡುತ್ತೇನೆ. ಹೊಸ ಸಲಹೆ ಬೇಕಾದರೆ ಕೊಡಿ. ಸ್ಥಳೀಯ ಮುಖಂಡರು, ತಾಲ್ಲೂಕು ಬೋರ್ಡು ಛೇರ್‌ಮನ್ ಮುಂತಾದವರು ತಮ್ಮ ಕ್ಷೇತ್ರಗಳಲ್ಲಿ ಕೊಡುವ ಹಣದಿಂದ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಬೇಕು. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಲ್ಯಾಪ್ಸ್ ಆಗಿ ವಾಪಸು ಬರುವುದೇ ಹೊರತು ಇಲ್ಲಲ್ಲ. ಇದುವರೆಗೆ 800 ಎಕರೆ ಮನೆಗಳಿಗಾಗಿ ಅಕ್ವೈರ್ ಮಾಡಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಕ್ವಿಜಿಷನ್ ಆಗಿ 8 ವರ್ಷವಾಯಿತು, ಮನೆ ಕಟ್ಟುವುದಕ್ಕೆ ಅವಕಾಶವಾಗಿಲ್ಲ, ಜಮೀನುದಾರರಿಗೆ ಹಣವಿಲ್ಲ. ಎಷ್ಟು ಪ್ರಗತಿಯಾಗಿದೆ ಎಂದು ಯೋಚನೆಮಾಡಿ. ಗುಬ್ಬಿ ತಾಲ್ಲೂಕು ಅಮ್ಮಸಂದ್ರದಲ್ಲಿ ಹರಿಜನರಿಗೆ ಮನೆ ಕಟ್ಟಿಲ್ಲ.

ಶ್ರೀಮತಿ ಯಶೋಧರ ದಾಸಪ್ಪ.—ಇಷ್ಟು ಹೇಳಿ ಹೆಚ್ಚು ಸಮಯ ತೆಗೆದುಕೊಳ್ಳದೆ ಸದಸ್ಯರು ಹೇಳಿದ ಪ್ರತಿಯೊಂದು ಪ್ರಶ್ನೆಗೂ ಅಂಕಿ ಅಂಶಗಳೊಡನೆ ಈ ಸಭೆ ಮುಕ್ತಾಯವಾಗುವುದರೊಳಗೆ ಅವರೆದುರಿಗೆ ಇಡಲಾಗುತ್ತದೆ. ಇನ್ನೇನಾದರೂ ಸಲಹೆ ಕೊಡುವುದಿದ್ದರೆ ಅಡ್ವೈಜರಿ ಕಮಿಟಿಯಲ್ಲಿ ಕೊಟ್ಟರೆ ಯಾವ ರೀತಿ ಮಾಡಬೇಕೋ ಆ ರೀತಿ ಮಾಡೋಣ.

ಶ್ರೀ ಬಿ. ದುಗ್ಗಪ್ಪ.—ಅಡ್ವೈಜರಿ ಕಮಿಟಿಯಲ್ಲಿ ಇಲಾಖೆಯ ಕಾರ್ಯದರ್ಶಿ, ಅಂಗ ಸಂಸ್ಥೆಯಲ್ಲಿ ಆಸಕ್ತಿ ವಹಿಸಿರುವವರು ಮುಂತಾದವರಿಗೆ ಅವಕಾಶ ನೀಡಬೇಕೆಂಬ ಸಲಹೆ ಇದೆ. ಆ ವಿಚಾರದಲ್ಲಿ ತಮ್ಮ ಅಭಿಪ್ರಾಯವೇನು ?

ಶ್ರೀಮತಿ ಯಶೋಧರ ದಾಸಪ್ಪ.—ನಮ್ಮ ನಾಯಕರ ಹತ್ತಿರ ಮಾತನಾಡಿ ಅವರ ಸಲಹೆಯ ಪ್ರಕಾರ ಮಾಡೋಣ. ಯಾವ ರೀತಿ ಸುಧಾರಣೆ ಬೇಕೋ ಆ ರೀತಿ ಮಾಡೋಣ. ರಚನಾತ್ಮಕವಾಗಿ ಸಲಹೆ ಕೊಟ್ಟರೆ ತೆಗೆದುಕೊಳ್ಳಲು ಸಿದ್ಧವಾಗಿದ್ದೇವೆ. ಆದರೆ ಕೆಲಸಕಾರ್ಯ, ಹಣದ

ದುರುಪಯೋಗ ಮುಂತಾದ ತಪಶೀಲನ್ನು ಇವ್ಯಾಲ್ಯುಯೇಷನ್ ಕಮಿಟಿ ವರದಿಯು ಬಂದ ಕೂಡಲೆ ತಮ್ಮೆದುರಿಗೆ ಇಡುತ್ತೇನೆ. ಆಗ ಲೋಪದೋಷ ಗೊತ್ತಾಗುತ್ತದೆ. ಯಾವ ರೀತಿ ಸರಿಪಡಿಸ ಬೇಕೋ ಆ ರೀತಿ ಮಾಡೋಣ. ಮೂರನೇ ಬ್ಲಾಕನ್ನು ಸೌತ್ ಕ್ಯಾನರಾ ಜಿಲ್ಲೆಗೆ ಅಲ್ಲಿ ಟ್ರೈಬಲ್ ಜನ ಹೆಚ್ಚಾಗಿರುವುದರಿಂದ ಕೊಡಬೇಕೆಂದು ಇದೆ. ಬ್ಲಾಕುಗಳು ಮಂಜೂರಾಗುವಾಗ ಇಲ್ಲಿಗೆ ಸಾಧ್ಯವಾದಷ್ಟು ಪ್ರಯತ್ನ ಮಾಡಿ ಒಂದು ಬ್ಲಾಕನ್ನು ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಸಂಜೀವನಾಥ ಐಕಲ (ಸೂರತ್ಕಲ್).—ಮೈಸೂರು ಸ್ಟೇಟಿನಲ್ಲಿ ಸೌತ್ ಕ್ಯಾನರಾ ಜಿಲ್ಲೆಯು ಬಗ್ಗೆ ಬಹಳ ಅಲಕ್ಷ್ಯದಿಂದ ಕಾಣುತ್ತಾರೆ. ಅಲ್ಲಿ ಪಕ್ಷಪಾತ ದೃಷ್ಟಿಯಿಂದ ಕೆಲಸ ಮಾಡುತ್ತಿರುವುದರಿಂದ ಅಲ್ಲಿನ ಜನಕ್ಕೆ ಅನುಕೂಲವಾಗ ತ್ತಿಲ್ಲ. ಈಚೆಗೆ ತುರುವೇಕೆರೆ ಕ್ಷೇತ್ರದಲ್ಲಿ ಚುನಾವಣೆ ನಡೆದಾಗ ನಮ್ಮ ಜಿಲ್ಲೆಯಲ್ಲಿದ್ದ ಸಮಾಜ ಕಲ್ಯಾಣ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಉದ್ಯೋಗಿಗಳನ್ನು ಅಲ್ಲಿ ವಿಮೆನ್ಸ್ ವಾಲಂಟೀರುಗಳಾಗಿ ಕೆಲಸ ಮಾಡಿರುದು ಸರಕಾರದ ಗಮನಕ್ಕೆ ಬಂದಿದೆಯೇ.

ಶ್ರೀಮತಿ ಯಶೋಧರಾ ದಾಸಪ್ಪ.—ಅಂತಹುದು ಯಾವುದೂ ಇಲ್ಲವೇ ಇಲ್ಲ. ಅಲ್ಲಿಗೆ ಸಮಾಜ ಕಲ್ಯಾಣ ಶಾಖೆಯ ಬೋರ್ಡಿನವರು ಯಾರೂ ಚುನಾವಣೆಗಾಗಿ ಬಂದಿರಲಿಲ್ಲ. ಚುನಾವಣೆಯಲ್ಲಿ ಯಾವ ವಾಲಂಟೀರುಗಳೂ ಹೋಗಿ ಕೆಲಸ ಮಾಡಿಲ್ಲ. ಅದಕ್ಕಾಗಿ ಹಣವನ್ನೂ ಖರ್ಚು ಮಾಡಿಲ್ಲ.

ಛೇರ್ಮನ್ನರವರು.—ಮಾನ್ಯ ಸದಸ್ಯರು ಹೇಳುವುದು ನಿಜವಾಗಿದ್ದರೆ ಮಾತ್ರ ಇಲ್ಲಿ ಅದನ್ನು ತಾವು ತಿಳಿಸಬಹುದು. ಇಲ್ಲದೇ ಇದ್ದರೆ ಇಲ್ಲ.

Sri SANJEEVANATH AIKALA.—Madam, Rs. 28,000 is given by the Mysore Government to the Mysore State Social Welfare Board which is expected to do some honest welfare work but which it is not doing. Instead of that, it has become an adjunct of the Congress Organistion to undertake electioneering and such other activities. I was not permitted to speak; otherwise, I would have exposed the activities of this Board which is nothing but an organisation consisting of lip-sticked or red-nailed women which is not doing any work.

ಸಭಾಪತಿಯವರು.—ತಾವು ಆ ರೀತಿ ಲಿಪ್‌ಸ್ಟಿಕ್ಡ್ ಮುಂತಾದ್ದು ಎಂದು ಹೇಳುತ್ತ ಇಲ್ಲಿ ಕ್ರಿಟಿಸೈಸ್ ಮಾಡಬಾರದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಈ ಸಭೆಯಲ್ಲಿ ಒಂದು ಗಂಟೆಯ ಕಾಲವನ್ನು ಈ ಡಿಮ್ಯಾಂಡಿಗಾಗಿ ಹೆಚ್ಚಿಸಲಾಗಿತ್ತು. ಅದರಂತೆ ಈಗಾಗಲೇ ಒಬ್ಬರು ಮಂತ್ರಿಗಳು ಉತ್ತರ ಕೊಟ್ಟಾಗಿದೆ. ಇನ್ನೊಬ್ಬರು ಮಂತ್ರಿಗಳು ಚರ್ಚೆಗೆ ಉತ್ತರವನ್ನು ಈಗ ಹೇಳಬೇಕಾಗಿದೆ. ಆದುದರಿಂದ ಈ ಮಾತನಾಡಲು ಮಂತ್ರಿಗಳಿಗೆ ಅವಕಾಶ ಮಾಡಿಕೊಡಬೇಕು ಎಂದು ನನ್ನ ವಿನಂತಿ.

ಛೇರ್ಮನ್ನರವರು.—ನಾನೂ ಅದನ್ನೇ ಮಾನ್ಯ ಸದಸ್ಯರಿಗೆ ಹೇಳುತ್ತಿದ್ದೇನೆ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸದಸ್ಯರು ಈಗ ತಾನೇ ಹೆಂಗಸರು ಲಿಪ್‌ಸ್ಟಿಕ್ಕುಗಳನ್ನು ಉಪಯೋಗಿಸುತ್ತಾರೆಂದು ಹೇಳಿದರು. ಅವು ಸಹಜವಾದ ತುಟಿಗಳೇ ?

ಸಭಾಪತಿಯವರು.—ಅದು ಅವರಿಗೇ ಗೊತ್ತು. ನಮಗೆ ಲಿಪ್‌ಸ್ಟಿಕ್ಕು ಹಚ್ಚಲು ಬರುವುದಿಲ್ಲ. ಅದನ್ನೆಲ್ಲಾ ತಾವು ಗಮನಕ್ಕೆ ತೆಗೆದುಕೊಳ್ಳಬಾರದು.

ಶ್ರೀಮತಿ ಯಶೋಧರ ದಾಸಪ್ಪ.—ಸರಕಾರದ ಕಡೆಯಿಂದ ಆಗಿಂದಾಗ್ಗೆ ಏನು ಸಹಾಯಗಳು ಬೇಕೆಂದು ಬೇಡುತ್ತಾರೋ ಅವುಗಳನ್ನು ನೋಡಿಕೊಂಡು ಸಾಧ್ಯವಾದಷ್ಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಯ್ಯ (ಕೊಳ್ಳೇಗಾಲ).—ಸರ್ಕಾರದವರು 1962-63 ಮತ್ತು 63-64ನೇ ಸಾಲಿನಲ್ಲಿ ಮಕ್ಕಳಿಗಾಗಿ ಸ್ಕಾಲರ್‌ಷಿಪ್ಪುಗಳನ್ನು ವಿದ್ಯಾಭ್ಯಾಸಕ್ಕಾಗಿ ಕೊಡುವುದರ ಬಗ್ಗೆ ಮತ್ತು ಹಾಸ್ಟಲುಗಳ ಬಗ್ಗೆ ನಾನು ಹೇಳಿದ ವಿಚಾರಗಳಲ್ಲಿ ಮಾನ್ಯ ಮಂತ್ರಿಗಳು ವಿಷದಪಡಿಸಲಿಲ್ಲ.

[MR. SPEAKER in the Chair.]

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಾನ್ಯ ಮಂತ್ರಿಗಳು ಇಲ್ಲಿ ಮಾತನಾಡುತ್ತಾ ಇದ್ದಾಗ ಮಾನ್ಯ ಸದಸ್ಯರಾದ ಮುಕ್ಕಣ್ಣಪ್ಪನವರು ದುಗ್ಗಪ್ಪನವರಂತಹ ಮಾನ್ಯ ಸದಸ್ಯರು ಈ ಸಭೆಯ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಸದಸ್ಯರು ಮತ್ತು ಈ ಸಭೆಯಲ್ಲಿರುವ ಯಾವ ಸದಸ್ಯರೂ ಗಾಂಧೀಜಿಯವರ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲ ಎಂದು ಹೇಳಿದ ಮಾತನ್ನು ಅವರು ವಾಪಸು ತೆಗೆದುಕೊಳ್ಳಬೇಕು. ಯೋಗ್ಯತೆ ಇದೆಯೋ ಇಲ್ಲವೇ ಎನ್ನುವುದನ್ನು ಹೇಳಬೇಕಾದರೆ ನಮಗೆ ಯೋಗ್ಯತೆ ಇದೆ ಎಂದು ಇಲ್ಲಿ ಸ್ಪಷ್ಟಪಡಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸದಸ್ಯರು ಒಂದು ಗಂಟೆಯಾದ ಮೇಲೆ ಇಲ್ಲಿ ಇದನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಮಾತನಾಡುವಾಗ ಮಾನ್ಯ ಅಧ್ಯಕ್ಷರಾದ ತಾವು ಇಲ್ಲಿಯೇ ಇದ್ದಿರಿ.

Mr. SPEAKER —I will examine it.

ಶ್ರೀಮತಿ ನಾಗರತ್ನಮ್ಮ ಹೀರೇಮಠ್.—ಇಂತಹ ಮಾತುಗಳನ್ನು ತಾವು ಹೇಳುವುದರಿಂದ ನಾವು ಬೆರಗಾಗುವುದಿಲ್ಲ. ನಾನು ಆಗಲೇ ಹೇಳಿದಂತೆ ಮಾತುಗಳನ್ನು ಪ್ರೊಸೀಡಿಗ್ಸಿನಿಂದ ತೆಗೆದು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

Sri C. J. MUCKANNAPPA.—Is it for the entire day that he has been asked to withdraw ?

Mr. SPEAKER.—The Hon'ble Member may ask him to come to the House but he will have to adhere to the Rules.

† ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಸಚಿವರು).—ಸ್ವಾಮೀ, ಈ ಬೇಡಿಕೆಗಳ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಕಳೆದ ಎರಡು ವರ್ಷಗಳಿಂದಲೂ ಈ ಇಲಾಖೆಯಲ್ಲಿ ಸ್ವಲ್ಪ ಮಟ್ಟಿಗೆ ಪ್ರಗತಿಯಾಗಿದ್ದರೂ ಕೂಡ ಅದಕ್ಕಿಂತಲೂ ಕೂಡ ಹೆಚ್ಚಿನ ಹಣವನ್ನು ಒದಗಿಸಿ ಇನ್ನೂ ಕೆಲಸ ಕಾರ್ಯಗಳು ಆಗಬೇಕಾಗಿವೆ ಎಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಮಾತನಾಡಿದಂತಹ ಅನೇಕ ಸದಸ್ಯರುಗಳು ಏನೇನು ಮಾತನಾಡಿದರು ಅವುಗಳ ಬಗ್ಗೆ ಕೂಲಂಕಷವಾಗಿ, ವಿಸ್ತಾರವಾಗಿ ಉತ್ತರ ಕೊಡಬೇಕೆಂದಿದ್ದೇನೆ. ಮಾನ್ಯ ಸದಸ್ಯರುಗಳೆಲ್ಲರೂ ಕಳುಹಿಸಿರುವ ಖೋತಾ ಸೂಚನೆಗಳನ್ನು ನೋಡಿದ ಹಾಗೆ ಇವನ್ನು ಮೂರು-ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ಇಲಾಖೆಯಲ್ಲಿ ಕೆಲಸಮಾಡಲು ಇರತಕ್ಕಂತಹ ಸಿಬ್ಬಂದಿ ವರ್ಗದಲ್ಲಿ ಇನ್ನೂ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಷ್ಟು ಇನ್ನೂ ಫೈನಲೈಸ್ ಆಗದಿರುವುದರಿಂದ ಬಹುಶಃ ಅಧಿಕಾರಿಗಳಲ್ಲಿ ಅತೃಪ್ತಿಗೆ ಕಾರಣವಾಗಿದೆ, ಇದನ್ನು ಆದಷ್ಟು ಮಟ್ಟಿಗೆ ಬೇಗನೆ ಕಾರ್ಯಗತ ಮಾಡಬೇಕು ಎಂದು. ನಾನಾದರೂ ಮಾನ್ಯ ಸಭೆಯಲ್ಲಿ ತಿಳಿಸುವುದು, ಇಲಾಖೆಯಲ್ಲಿ ಕೆಲಸ ಮಾಡತಕ್ಕ ಪ್ರತಿಯೊಬ್ಬ ನೌಕರರೂ ಕೂಡ ತೃಪ್ತಿಯಿಂದ ಕೂಡಿರತಕ್ಕ ವರ್ಗದವರಿಂದ ದಕ್ಷತೆಯಿಂದ ಕೆಲಸ ಮಾಡುವವರು ಇರಬೇಕು. ಒಂದು ದೃಷ್ಟಿಯಿಂದ ಈ ಅತೃಪ್ತಿಯನ್ನು ದೂರ ಮಾಡುವುದಕ್ಕೆ ಸಾಧ್ಯ ಎಂದು ತೋರುತ್ತೆ. ಎನ್.ಜಿ.ಓ.ಗಳು ನಮ್ಮ ರಾಜ್ಯಕ್ಕೆ ಐದು ಭಾಗಗಳಿಂದ ಬಂದಿರುವುದರಿಂದಾಗಿ ಇವರುಗಳ ಪಟ್ಟಿಯನ್ನು ಪ್ರಕಟಣೆಮಾಡುವ ಕೆಲಸ ಇಷ್ಟರಲ್ಲೇ ಮುಗಿಯುವುದರಲ್ಲಿದೆ. ಇದಕ್ಕಾಗಿ ಇಂಡಿಯಾ ಸರ್ಕಾರದವರೂ ಕೂಡ ಒಂದು ಡೈರೆಕ್ಷನ್ನು ಕೂಡ ಕೊಟ್ಟಿದ್ದಾರೆ. ಆದರೆ ಇದು ಸ್ವಲ್ಪ ನಿಧಾನವಾಗಿ ಬರುತ್ತಿರುವುದರಿಂದಾಗಿ ಹೈಕೋರ್ಟಿಗೆ ಕೆಲವು ರಿಟ್ಟು ಪಿಟಿಷನ್ನುಗಳು ಬಂದುದರಿಂದ ಇದರ ತೀರ್ಮಾನ ಬಂದ ತಕ್ಷಣ ಈ ಪಟ್ಟಿಯನ್ನು ಪೂರ್ಣವಾಗಿ ಸರಕಾರ ಮಾಡಬೇಕೆಂದು ಇದೆ ಎಂದು ಇಷ್ಟು ಮಾತ್ರ ಇಲ್ಲಿ ತಿಳಿಸುತ್ತೇನೆ.

5-30 P.M.

ಇನ್ನು ಶ್ರೀ ರಂಗನಾಥನ್‌ರವರು ಮಾತನಾಡುವಾಗ ಕೆಲವು ಅಧಿಕಾರಿಗಳನ್ನು ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸಿಗೆ ವಿರೋಧವಾಗಿ ನೇಮಕ ಮಾಡಿದ್ದಾರೆಂದು ಹೇಳಿದ್ದರು. ಇವರನ್ನು ಇಂಡಿಪೆಂಡೆಂಟ್ ಛಾರ್ಜಿನಲ್ಲಿಟ್ಟಿದ್ದಾರೆಂದು ಹೇಳಿದರು. ಈ ವಿಚಾರವನ್ನು ಸರ್ಕಾರದವರು ಆದಷ್ಟು ತೀವ್ರವಾಗಿ ಪರಿಶೀಲಿಸಲು ಮನಸ್ಸು ಮಾಡಿದ್ದಾರೆ. ಆದರೆ ಇದರಲ್ಲೂ ಕೂಡ ಒಂದು ರಿಟ್ ಕೇಸಿದೆ. ಆದರೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಯಾವ ವರ್ಗಕ್ಕೂ ಅನ್ಯಾಯವಾಗಿಲ್ಲ. ಪ್ರತಿಯೊಂದು ವರ್ಗಕ್ಕೂ ನ್ಯಾಯ ದೊರಕಿಸಿಕೊಡಬೇಕೆಂಬುದು ನಮ್ಮ ಉದ್ದೇಶ. ಈ ಬಗ್ಗೆ 5 ಪ್ರದೇಶಗಳಿಂದ ಬಂದಿರತಕ್ಕ ಅಧಿಕಾರಿಗಳ ವರ್ಗದಲ್ಲಿ ಕೆಲವರಿಗೆ ಅನ್ಯಾಯವಾಗಿದೆಯೆಂದು

ಕೆಲವರು ಹೇಳಬಹುದು. ಆದರೆ ಈ ವಿಚಾರದಲ್ಲಿ ಸ್ಟೇಟ್ಸ್ ರೀಆರ್ಗನೈಜೇಷನ್ ಆಕ್ಟ್ ಪ್ರಕಾರ ಕೇಂದ್ರ ಸರ್ಕಾರದವರ ತೀರ್ಮಾನವೇ ಅಖೈರುತೀರ್ಮಾನ. ಈ ವಿಚಾರದಲ್ಲಿ ನಮ್ಮ ಸರ್ಕಾರ ಅನೇಕ ಲೋಪದೋಷಗಳನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದಿವೆ ಈ ರಾಜ್ಯಕ್ಕೆ ಯಾವ ಅನ್ಯಾಯ ಗಳೂ ಆಗದಂತೆ ಅವರು ನೋಡಿಕೊಳ್ಳುತ್ತಾರೆಂಬ ಭರವಸೆ ನಮಗಿದೆ. ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಶಿಬ್ಬಂದಿ ವರ್ಗದಲ್ಲಿ 21 ಡಿವಿಜನ್‌ಗಳಿವೆ. ಈ ಎಲ್ಲ ಡಿವಿಜನ್‌ಗಳಿಂದಲೂ ಒಟ್ಟು 39 ಜನ ಡೆಪ್ಯುಟಿ ಕನ್‌ಸರ್ವೇಟರುಗಳೂ 6ಜನ ಕನ್‌ಸರ್ವೇಟರಗಳೂ ಇದ್ದಾರೆ. ನಾವು ಈ ಇಲಾಖೆಯಲ್ಲಿ ವರ್ಷೇ ವರ್ಷೆ ಹೊಸದಾಗಿ ಹುದ್ದೆಗಳನ್ನು ನಿರ್ಮಿಸುತ್ತಿಲ್ಲ. ಶ್ರೀ ಕೇಶವಮೂರ್ತಿಯವರು ಮಾತನಾ ಡುತ್ತಾ: ಈ ಇಲಾಖೆಯಲ್ಲಿ ಇನ್‌ಸೆಂಟೀವ್ ಬಗ್ಗೆ ನ್ಯೂಬ್ಲಡ್ಡಿಗೆ ಅವಕಾಶ ಮಾಡಿಕೊಟ್ಟಿಲ್ಲ ಎಂದು ಹೇಳಿದರು. ಕೊಯಮತ್ತೂರು ಮತ್ತು ಡೆಹರಾಡೂನ್‌ಗಳಿಗೆ ಪ್ರತಿವರ್ಷವೂ ನಮ್ಮ ಅಧಿಕಾರಿಗನ್ನು ತರಪೇತಿಗಾಗಿ ಕಳುಹಿಸುತ್ತಿದ್ದೇವೆ. ಇನ್ನು ಫಾರೆಸ್ಟರ ಟ್ರೈನಿಂಗ್ ಬಗ್ಗೆ ದಾಂಡೇಲಿಯಲ್ಲಿ ಹಾಗೂ ಕುಶಾಲನಗರದಲ್ಲಿ ಸರ್ವೇ ಕೆಲಸ ಇವುಗಳೆಲ್ಲಾ ನಡೆಯುತ್ತಿವೆ. ದಾಂಡೇಲಿಯಲ್ಲಿ ಸರ್ವೇ ಸ್ಕೂಲು ನಡೆಯುತ್ತಿದೆ. ಇನ್ನು ಬೀದಾರಿನಲ್ಲಿ 2 ಸರ್ವೇ ಸ್ಕೂಲುಗಳು ನಡೆಯುತ್ತಿವೆ. ನಾವು ಉಮೇದುವಾರರನ್ನು ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ ಪ್ರಕಾರವೇ ಕರೆದು ಭರ್ತಿ ಮಾಡುತ್ತಿದ್ದೇವೆ. ಈ ದೃಷ್ಟಿಯಿಂದ ಯಾರಿಗೂ ಅನ್ಯಾಯವಾಗುವುದಕ್ಕೆ ಅವಕಾಶವಿಲ್ಲ. ಡೈರೆಕ್ಟ್ ರಿಕ್ರೂಟ್‌ಮೆಂಟ್ ರೂಲ್ಸ್ ಕೇಸುಗಳನ್ನು ಕೊಟ್ಟರೆ ಯಾರಿಗೂ ಅನ್ಯಾಯವಾಗು ವುದಿಲ್ಲ. ಶ್ರೀ ರಂಗನಾಥರವರು ಕೆಲವು ಹರಿಜನರಿಗೆ ಅನ್ಯಾಯವಾಗಿದೆ ಎಂದು ತಿಳಿಸಿದರು. ಈ ದಿವಸ ಈ ಕೋಮಿನ 3 ಜನ ಅಧಿಕಾರಿಗಳನ್ನು ಡೆಹರಾಡೂನಿನಲ್ಲೂ, ಇನ್ನು ಇಬ್ಬರು ಗಾರ್ಡುಗಳ ಟ್ರೈನಿಂಗನ್ನು ಕೊಯಮತ್ತೂರಿನಲ್ಲೂ ಪಡೆಯುತ್ತಿದ್ದಾರೆ. ಇವರಿಗೆ ದೊರೆಯಬೇಕಾಗಿರತಕ್ಕ 18ಪರ್ಸೆಂಟನ್ನು ಭರ್ತಿಮಾಡಲು ನಾವು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಇನ್ನು ಈ ಸಿಬ್ಬಂದಿ ವರ್ಗ ತೃಪ್ತಿಯಿಂದ ಕೆಲಸಮಾಡಲು ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳ ಲಾಗಿದೆ. ಈ ಅರಣ್ಯ ಸಂಪತ್ತಿನಲ್ಲಿ ಇಡೀ ಇಂಡಿಯಾ ದೇಶದಲ್ಲಿ ನಮ್ಮ ಮೈಸೂರು ಒಂದು ಗಣ್ಯ ಸ್ಥಾನವನ್ನುಗಳಿಸಿದೆ. ನಮ್ಮಲ್ಲಿ ಸುಮಾರು ನಮ್ಮ ರಾಜ್ಯದ ವಿಸ್ತೀರ್ಣದಲ್ಲಿ 18.4 ಪರ್ಸೆಂಟಿನಷ್ಟು ಅರಣ್ಯ ಸಂಪತ್ತಿದೆ. ರೆವಿನ್ಯೂ ಇಲಾಖೆಯ ಲೆಕ್ಕದಲ್ಲಿ ಹೇಳುವುದಾದರೆ: ಇದು 1,400 ಚ. ಮೈ. ವಿಸ್ತೀರ್ಣದಲ್ಲಿ ಸುಮಾರು 1,200 ಚ. ಮೈ. ಅರಣ್ಯ ಸಂಪತ್ತಿದೆ.

ಇನ್ನು ಅರಣ್ಯ ಸಂಪತ್ತಿನ ಬಗ್ಗೆ ನಡೆಯತಕ್ಕ ಕಳ್ಳ ಸಾಗಾಣಿಕೆಯ ಬಗ್ಗೆ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಇದು ಸಂಪೂರ್ಣವಾಗಿ ನಿಂತಿದೆ ಎಂದು ಹೇಳಲಾರೆ. ಈ ಕಳ್ಳ ಸಾಗಾಣಿಕೆ ಅಲ್ಲಲ್ಲೇ ಕೆಲವು ರಿಜರ್ವ್ ಫಾರೆಸ್ಟ್ ಏರಿಯಾದಲ್ಲೂ ಇನ್ನು ಕೆಲವು ಕಡೆಗಳಲ್ಲಿ ನಡೆಯುತ್ತಿದೆ. ಆದರೆ ಇದರಲ್ಲಿ ಒಂದು ವಿಚಾರ: ಇಂಥ ಒಂದು ಬೆಂಗಳೂರು ನಗರದಲ್ಲೇ ಬೇಕಾದಷ್ಟು ಪೋಲೀಸ್ ಸಿಬ್ಬಂದಿಯನ್ನು ಇಟ್ಟು ಒಬ್ಬ ಕಮಿಷನರನ್ನೇ ನೇಮಕ ಮಾಡಿದಾಗ್ಯೂ ಇಲ್ಲಿಯೂ ಕಳ್ಳತನಗಳು ನಡದೇ ನಡಿಯುತ್ತವೆ. ಹೀಗಿರುವಾಗ ಇನ್ನೂ ಎಲ್ಲಿಯೋ ಕಾಡಿನಲ್ಲಿ ಒಬ್ಬಿಬ್ಬರು ಗಾರ್ಡುಗಳು ಇರತಕ್ಕಕಡೆ ಕಳ್ಳತನ ನಡೆಯುವುದೇನೂ ಒಂದುಅತಿಶಯವಲ್ಲ. ಆದರೂ ಜನರಲ್ಲಿ ಮಾರಲ್ ಜಾಸ್ತಿಯಾಗದ ವಿನಾ ಯಾರೇನು ಮಾಡಿದರೂ ಇಂಥ ಕೆಲವು ಕೃತ್ಯಗಳು ನಡೆದೇ ನಡೆಯು ತ್ತವೆ. ಜನರಲ್ಲಿ ಬೇಗ ಆದಷ್ಟು ಹೆಚ್ಚಿಗೆ ಹಣವನ್ನು ದುಡಿದು ಶ್ರೀಮಂತರಾಗಬೇಕೆಂಬ ಚಪಲ ಜಾಸ್ತಿ ಯಾಗಿದೆ. ಹೀಗಾಗಿ ಕೆಲವರಿಗೆ ಇದೊಂದು ಖಾಯಂ ಉದ್ಯಮವಾಗಿದೆ. ಈ ವಿಚಾರದಲ್ಲಿ ಇನ್ನು ತಡೆಗಟ್ಟಲು ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂಬುದನು ತಿಳಿಸಲು ನಾನು ಒಂದೆರಡು ಉದಾಹರಣೆಯನ್ನು ಕೊಟ್ಟರೆ ಸರಿಹೋಗಬಹುದೆಂದು ಭಾವಿಸುತ್ತೇನೆ. ಇದಕ್ಕಾಗಿ ಈಗ ಸಮಾರು 11 ಸ್ಕ್ವಾಡುಗಳನ್ನು ನೇಮಕ ಮಾಡಿದ್ದೇವೆ. ಚೆಕ್ ಪೋಸ್ಟ್‌ಗಳನ್ನು ಮಾಡಿದ್ದೇವೆ. ಈ ಕಳ್ಳ ಸಾಗಾಣಿಕೆ ಬಹಳಮಟ್ಟಿಗೆ ಕಡಿಮೆಯಾಗಿದೆ. 61 62 ರಿಂದ 63-64ರವರೆಗೆ ನಾವು ಬುಕ್ ಮಾಡಿರತಕ್ಕ ಕೇಸುಗಳೆಂದರೆ: 69 ಗಂಧದ ಮರದ ಕೇಸುಗಳು, 2,981 ನಾಟಾ ಕೆಲಸ ಗಳು. ಇವುಗಳ ಮೊತ್ತವೆಷ್ಟೆಂದರೆ: 3,78,747 ರೂಪಾಯಿಗಳು. ಇದರಿಂದ ವಸೂಲಾದ ಜುಲ್ಮಾನೆ ಹಣ 1 ಲಕ್ಷ 85 ಸಾವಿರದ 575 ರೂಪಾಯಿಗಳು. ಇನ್ನು 63-64ರಲ್ಲಿ ಹಿಡಿದಿರತಕ್ಕ ಕೇಸುಗಳ ವಿವರ: 44 ಗಂಧದ ಮರದ ಕೇಸುಗಳು, ನಾಟಾ ಕೇಸುಗಳು 1,298. ಇವುಗಳ ಮೊತ್ತ 3 ಲಕ್ಷ 45 ಸಾವಿರದ 412 ರೂಪಾಯಿಗಳು. ಇವರಿಂದ ವಸೂಲಾಗಿರತಕ್ಕ ಜುಲ್ಮಾನೆಯ ಹಣ: 1 ಲಕ್ಷ 39 ಸಾವಿರದ 147 ರೂಪಾಯಿಗಳು. ಇಷ್ಟು ಕೇಸುಗಳನ್ನು ಹಿಡಿದಿದ್ದೇವೆ. ಈಗ ಈ ಕಳ್ಳತನ ಕಡಮೆಯಾಗುತ್ತಿದೆ. ಈ ದುಷ್ಟಕೂಟದ ಬಳಗದವರು ಗಂಧದ ಕಡ್ಡಿಯನ್ನು ತಯಾರಿಸತಕ್ಕವರಿಗೆ ಈ ಕಳ್ಳತನವನ್ನು ನಡೆಸುತ್ತಿದ್ದರು. ಈಗ ಅವರನ್ನು ಬರುಮಾಡಿಕೊಂಡು ಅವರ ಜೊತೆಗೆ ವರ್ತಕ ರನ್ನೂ ಕೂಡ ಬರಮಾಡಿಕೊಂಡು ಅವರಿಗೆ ಬೇಕಾಗತಕ್ಕ ಅಂದರೆ ವರ್ಷಕ್ಕೆ ಎಷ್ಟು ಬೇಕಾಗು ತ್ತದೆಯೋ ಅಷ್ಟನ್ನು ನಾವು ಕಡಮೆ ಬೆಲೆಯಲ್ಲಿ ಕೊಡುವುದಾಗಿ ಹೇಳಿದ್ದರಿಂದ ಅವರೂ ಕೂಡ

(ಶ್ರೀ ಬಿ. ರಾಚಯ್ಯ)

ಸಹಕಾರ ನೀಡುವುದಾಗಿ ಹೇಳಿದ್ದಾರೆ. ಇನ್ನು ಖಾಸಗೀ ಜಮೀನಿನಲ್ಲಿರತಕ್ಕ ಗಂಧದ ಮರಗಳ ರಕ್ಷಣೆಗಾಗಿ ಆ ಮರದ ಬೆಲೆಯಲ್ಲಿ ಶೇಕಡ 50 ರಷ್ಟನ್ನು ಅವರಿಗೆ ವಾಪಸ್ಸು ಮಾಡುವುದಾಗಿ ಹೇಳಿದ್ದೇವೆ. ಇದರಿಂದಲೂ ಕೂಡ ಬಹಳ ಉತ್ತಮ ಫಲಿತಾಂಶ ಕಂಡುಬಂದಿದೆ. ಇನ್ನು ಹಳ್ಳೀ ಜನರಿಗೆ ಬೇಕಾಗತಕ್ಕ ಗಾಡಿ ಪಟ್ಟಿ, ಚಕ್ರ, ಉಳುಮೆ ಸಾಮಾನುಗಳ ಪೂರೈಕೆಗಾಗಿ ಅಲ್ಲಲ್ಲೇ ನಮ್ಮ ಡಿಪೋಗಳಲ್ಲಿ ಒದಗಿಸುವಂತೆ ತಿಳಿಸಿದ್ದೇವೆ. ಇದರಿಂದಲೂ ಕಳ್ಳ ಸಾಗಾಣಿಕೆ ಕಡಿಮೆಯಾಗಿದೆ.

ಈ ಒಂದು ದೃಷ್ಟಿಯಿಂದ ಹೇಳುವ ಪಕ್ಷದಲ್ಲಿ ಅರಣ್ಯಗಳಲ್ಲಿ ಕಳ್ಳ ಸಾಗಾಣಿಕೆ ಕಡಿಮೆಯಾದರೂ ಅದನ್ನು ಸಂಪೂರ್ಣವಾಗಿ ತೊಡೆದು ಹಾಕಬೇಕಾದರೆ ಇಲಾಖೆಯಲ್ಲಿ ಒಳ್ಳೆಯ ತರಹೇತನ್ನು ಪಡೆದಂಥ ಅಧಿಕಾರಿಗಳುಬೇಕು. ಅದಕ್ಕೆ ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಟ್ ಮಾಡುವವರು ಬೇಕಾಗಿದ್ದಾರೆ. ಕೋರ್ಟಿನ ಮುಂದೆ ಸರಿಯಾದ ರೀತಿಯಲ್ಲಿ ನಮ್ಮ ವಾದವನ್ನು ಇಡಬೇಕಾದರೆ ಇವತ್ತು ಏನಿದ್ದರೂ ಪೋಲೀಸ್ ಆಶ್ರಯದಲ್ಲಿ ಕೇಸುಗಳು ನಡೆಯಬೇಕಾದ್ದರಿಂದ ನಮ್ಮ ಸ್ಕ್ವಾಡ್ ಹೋಗಿ ಕೇಳಿಕೊಂಡಂಥ ಸಂದರ್ಭದಲ್ಲಿ ಕೆಲವು ವಿಷಯಗಳು ಹೊರಬಿದ್ದು ಎಷ್ಟೋ ಕೇಸುಗಳು ಹೊರಟು ಹೋಗತಕ್ಕ ಪರಿಸ್ಥಿತಿ ಬಂದಿದೆ. ಈ ಒಂದು ದೃಷ್ಟಿಯಿಂದ ಇಲಾಖೆಯಲ್ಲಿ ಸ್ಪೆಷಲ್ಲಾಗಿ ನಮ್ಮ ಪ್ರಾಸಿಕ್ಯೂಟರ್ ಅವರನ್ನು ನೇಮಕಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಇನ್ನು ಅರಣ್ಯಕ್ಕೆ ಸಂಬಂಧಪಟ್ಟ ಕಾನೂನುಗಳು ಈಗಾಗಲೇ ಮಾನ್ಯ ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆದು ಬಂದಿರುವುದರಿಂದ ಅದಕ್ಕೆ ಸಂಬಂಧಪಟ್ಟ ಹಾಗೆ ರೂಲ್ಸ್ ಮತ್ತು ಮ್ಯಾನ್ಯುಯಲ್ಸ್ ತಯಾರು ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಕಳೆದ 6-7 ತಿಂಗಳುಗಳಲ್ಲಿ ಒಬ್ಬ ಡಿವಿಜನಲ್ ಫಾರೆಸ್ಟ್ ಆಫೀಸರನ್ನು ನೇಮಕಮಾಡಿ ಫೈನಲೈಜ್ ಆಗುವಾಗ ಏಕಕಾಲದಲ್ಲಿ ಈ ಕಾನೂನು ಜಾರಿಗೆ ಬರುವುದಕ್ಕೆ ಏನೇನು ರೂಲ್ಸ್ ಮಾಡಬೇಕಾಗಿವೆಯೋ ಅವನ್ನು ಸರ್ಕಾರದವರು ತ್ವರಿತವಾಗಿ ಮಾಡಬೇಕಾಗಿದೆ ಇದರಿಂದ ಎಲ್ಲಾ ಕಡೆಗಳಲ್ಲೂ ಏಕರೂಪವಾದ ಕಾನೂನುಗಳು ಬರುವುದರಿಂದ ಒಂದೊಂದು ಕಡೆ ಒಂದೊಂದು ರೀತಿಯ ಕಾನೂನುಗಳು ಇರುವುದು ತಪ್ಪಿಹೋಗಿ ಆಡಳಿತದಲ್ಲಿ ಸಡಿಲತೆ ಇದ್ದುದು ಇನ್ನು ಮೇಲೆ ಇರಲಾರದು ಮತ್ತು ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿಸುತ್ತೇನೆ. ಇನ್ನೊಂದು ಬಹು ಮುಖ್ಯವಾದಂಥ ವಿಷಯಗಳನ್ನು ಶ್ರೀಮಾನ್ ಸುಂತಣಕರ್ ಅವರು ಮತ್ತು ಇತರ ಮಾನ್ಯ ಸದಸ್ಯರು ತಿಳಿಸಿದ್ದಾರೆ. ವರ್ಷಂಪ್ರತಿ ಈ ಅರಣ್ಯ ಇಲಾಖೆಯಲ್ಲಿ 20-30 ರೂಪಾಯಿಗಳು ಹೆಚ್ಚು ಅದರೂ ಕೂಡ ಅದೇ ಪ್ರಮಾಣದಲ್ಲಿ ಖರ್ಚಾಗುತ್ತಿದೆ. ಖರ್ಚನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಮತ್ತು ಇನ್ನೂ ಹೆಚ್ಚು ಉತ್ಪತ್ತಿಯನ್ನು ಮಾಡಬಹುದು ಎಂಬುದಾಗಿ ಹೇಳಿದರು. ಆ ವಿಷಯದಲ್ಲಿ ಅಂಕಿಅಂಶಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕೆಂದು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೇಳುತ್ತೇನೆ. ಕಳೆದವರ್ಷ ನಮ್ಮ ಹುಟ್ಟುವಳಿ ಸುಮಾರು 9 ಲಕ್ಷ ರೂಪಾಯಿಗಳಷ್ಟು ಬರುತ್ತದೆಂದು ನಾವು ನಿರೀಕ್ಷೆ ಮಾಡಿಕೊಂಡಿದ್ದೆವು. ಅದು ಈ ವರ್ಷವೂ ಅಷ್ಟೇ ಬರುತ್ತದೆ. ಆದರೆ ಕಳೆದ ವರ್ಷಗಳಿಗೂ ಈ ವರ್ಷಕ್ಕೂ ಹುಟ್ಟುವಳಿ ಮತ್ತು ಖರ್ಚನ್ನು ಲೆಕ್ಕಹಾಕಿದರೆ ಈ ರೀತಿ ಇರುತ್ತದೆ.

	ಹುಟ್ಟುವಳಿ	ಖರ್ಚು
	ರೂ.	ರೂ.
1961—62	8,04,76,000	3,69,70,000
1962—63	8,79,21,000	4,53,81,000
1963—64	8,85,00,000	4,91,00,000

ಇನ್ನು ಎಸ್ಟಾಬ್ಲಿಷ್‌ಮೆಂಟಿಗಾಗಿ ಜಾಸ್ತಿಯಾಗಿ ಖರ್ಚು ಮಾಡುತ್ತಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಅದರ ಅಂಕಿ ಅಂಶ ಈ ರೀತಿ ಇವೆ.

1961—62	ಶೇಕಡ 7.9
1962—63	ಶೇಕಡ 7.2
1963—64	ಅಷ್ಟೇ ಇದೆ.

ಆದರೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಕಾನೂನುಗಳ ಪ್ರಕಾರ ಡೀಜಲ್ ಖರ್ಚು ವೆಚ್ಚಗಳನ್ನು ನೋಡಿದರೆ ಅದು ಹೆಚ್ಚಾಗುತ್ತದೆ. ಅದರೂ ಕೂಡ ಇಲಾಖೆಯಲ್ಲಿ ಖರ್ಚನ್ನು ಕಡಿಮೆ ಮಾಡಿದ್ದಾರೆ. ಅದೇ ರೀತಿ ಖರ್ಚು ಶೇಕಡಾ 18 ಮೊದಲು ಇತ್ತು. ಈಗ ಶೇಕಡ 14 ಆಗಿದೆ. ಮತ್ತೆ ಶೇಕಡ

14 ಮಾಡಿಕೊಂಡು ಬಂದಿದ್ದಾರೆ. ಇದಲ್ಲದೆ ಮಾನ್ಯ ಸುಂತಣಕರ್ ಅವರು ಹೇಳಿದ ಹಾಗೆ ಒಂದು ಎಕರೆ ಅರಣ್ಯದ ಉತ್ಪತ್ತಿ ಕೇರಳಾದಲ್ಲಿ ಸುಮಾರು ಶೇಕಡ 13 ರಷ್ಟಿದೆ. ನಮ್ಮ ಸಂಸ್ಥಾನದಲ್ಲಿ ಶೇಕಡ 7ರಷ್ಟಿದೆ ಎಂಬುದಾಗಿ ಹೇಳಿದರು. ಅದು ಸರಿಯಾದುದು ಅಲ್ಲ. ಒಂದು ಎಕರೆಯ ಉತ್ಪತ್ತಿ ಈ ರೀತಿ ಇದೆ.

1961—62	8.77 ರೂಪಾಯಿಗಳು.
1962—63	9.26 ರೂಪಾಯಿಗಳು.
1963—64	10.00 ರೂಪಾಯಿಗಳು.

ಇಡೀ ಇಂಡಿಯಾ ದೇಶದಲ್ಲಿರತಕ್ಕ ಇತರ ಪ್ರಾಂತಗಳಲ್ಲಿ ಒಂದು ಚದುರಮೈಲಿಗೆ ಏನು ಉತ್ಪನ್ನ ವಾಗುತ್ತದೆ, ಅದಕ್ಕಿಂತಲೂ ಅತ್ಯಂತ ಉತ್ಪನ್ನ ಎಲ್ಲಿ ಆಗುತ್ತದೆಂಬ ಬಗ್ಗೆ ಇಂಡಿಯನ್ ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ಇಕನಾಮಿಕ್ ರಿಸರ್ಚ್‌ನಲ್ಲಿರತಕ್ಕ ಶ್ರೀಮಾನ್ ಲೋಗನಾಥನ್ ಅವರು ಕೆಲವು ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ನೋಡಿದರೆ ಮೈಸೂರು ಸಂಸ್ಥಾನ ದಲ್ಲಿಯೇ ಎಲ್ಲಾ ಪ್ರಾಂತಗಳಿಗಿಂತಲೂ ಹೆಚ್ಚಿಗೆ ಉತ್ಪನ್ನವಾಗುತ್ತದೆ. ಇದರಿಂದ ಆಲ್ ಇಂಡಿಯಾ ಅವರೇಜ್, ಫೈನಾನಿಷಿಯಲ್ ರಿಟರ್ನ್ ಆಫ್ ಸ್ಕ್ವೇರ್ ಮೈಲ್ಸ್. ಎಲ್ಲಾ ವಿಧದ ಅರಣ್ಯಗಳಲ್ಲಿ 1.541 ಮತ್ತು ಫೈನಾನಿಷಿಯಲ್ ರಿಟರ್ನ್ ಪರ್ ಸ್ಕ್ವೇರ್‌ಮೈಲ್ ಆಫ್ ಆರ್ಗನೈಜ್ಡ್ ಫಾರೆಸ್ಟ್ 2.506. ಮೈಸೂರಿನಲ್ಲಿ ಅನ್ ಆರ್ಗನೈಜ್ಡ್ ಫಾರೆಸ್ಟ್ 4.542 ಮತ್ತು ಆರ್ಗನೈಜ್ಡ್ ಫಾರೆಸ್ಟ್ 6.724. ಆದ್ದರಿಂದ ಲಾಕಿಂಗ್ ಸಿಸ್ಟಂನಲ್ಲಿ ಟಿಂಬರನ್ನು ಎಕ್ಸ್‌ಟ್ರಾಕ್ಟ್ ಮಾಡುತ್ತಿದ್ದಾರೆ. ಈಗ ಎರಡು ಪದ್ಧತಿಗಳಿವೆ. ಒಂದು ಇಲಾಖೆಯ ಮೂಲಕ, ಇನ್ನೊಂದು ಕಂಟ್ರಾಕ್ಟುದಾರರುಗಳಿಂದ ಕೂಪನ್ನುಗಳನ್ನು ತೆಗೆದುಕೊಂಡು ಅವರ ಮುಖಾಂತರ ಟಿಂಬರನ್ನು ಎಕ್ಸ್‌ಟ್ರಾಕ್ಟ್ ಮಾಡುತ್ತಿದ್ದಾರೆ. ಈ ಎರಡು ದೃಷ್ಟಿಗಳನ್ನು ನೋಡಿದ ಪಕ್ಷದಲ್ಲಿ ಮೈಸೂರು ಸಂಸ್ಥಾನದಲ್ಲಿ ಪ್ರತಿವರ್ಷವೂ ಕೂಡ ಖರ್ಚನ್ನು ಕಡಿಮೆಮಾಡಿ ಉತ್ಪನ್ನ ಹೆಚ್ಚಿಗೆ ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡಿ ಕೊಂಡು ಬರುತ್ತಿದ್ದೇವೆ. ಆ ಪ್ರಕಾರ ಈ ಇಲಾಖೆಯಲ್ಲಿ ಇನ್ನೂ ಕೂಡ ಖರ್ಚನ್ನು ಕಡಿಮೆಮಾಡಿ ಉತ್ಪನ್ನವನ್ನು ಹೆಚ್ಚು ಮಾಡಲಿಕ್ಕೆ ಅವಕಾಶವಿದೆ. ಕೇವಲ ಮರಗಳನ್ನು ಕಡಿದು ಮಾರಾಟ ಮಾಡುವದಾಗಿದ್ದರೆ ಒಂದೇ ವರ್ಷದಲ್ಲಿಯೇ 50 ಕೋಟಿ ರೂಪಾಯಿಗಳನ್ನು ಉತ್ಪನ್ನ ಮಾಡಬಹು ದಿತ್ತು. ಇದು ಈ ಇಲಾಖೆಯ ಉದ್ದೇಶವಲ್ಲ. ಎಷ್ಟು ಪ್ರಮಾಣದಲ್ಲಿ ಮರಗಳನ್ನು ಕಡಿಯುತ್ತೇವೋ ಅಷ್ಟೇ ಪ್ರಮಾಣದಲ್ಲಿ ಅರಣ್ಯ ಸಂಪತ್ತನ್ನು ಬೆಳೆಸಿಕೊಂಡು ಹೋಗಬೇಕಾಗಿದೆ. ಅದರ ಒಂದು ಉಪ ಯೋಗವನ್ನು ಹೊಸದಾಗಿ ಹೇಳಬೇಕಾಗಿಲ್ಲ. ಅದು ಎಲ್ಲರಿಗೂ ಗೊತ್ತಿರತಕ್ಕ ವಿಷಯ. ಈ ದೃಷ್ಟಿ ಯಿಂದ ವರ್ಷಂಪ್ರತಿ ಅಫಾರ್‌ಸ್ಟೇಷನ್ ಹೆಚ್ಚಿಗೆ ಮಾಡುತ್ತಿದ್ದೇವೆ. ಕೇವಲ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 61 ಸಾವಿರದ 375 ಎಕರೆಗಳಷ್ಟು ಗಿಡಗಳನ್ನು ಹಾಕಿದ್ದಾರೆ. ಮೂರನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಮೂರು ವರ್ಷಗಳಿಗೆ 75,960 ಎಕರೆಗಳಲ್ಲಿ ಗಿಡಗಳನ್ನು ಬೆಳೆಸಿದ್ದಾರೆ. ಇದರಲ್ಲಿ ಸಾಗವಾನಿ, ರೋಜ್‌ವುಡ್, ಮತ್ತು ಸ್ಯಾಂಡಲ್ ಸ್ಯಾಪ್ಲಿಂಗ್ಸ್ ಇವೆಲ್ಲವನ್ನೂ ಕೂಡ ಮಾಡುತ್ತಾ ಇದ್ದೇವೆ. ಜೊತೆಗೆ ಮೈಸೂರು ಸಂಸ್ಥಾನದಲ್ಲಿ ಎಣ್ಣೆ ಬರತಕ್ಕ ಗಿಡಗಳನ್ನು ಹಾಕುತ್ತಾ ಇಲ್ಲವೆಂದು ಕೆಲವರು ಹೇಳಿದರು. ಯೂಕಲಿಪ್ಟಸ್ ಮತ್ತು ಸೀಡೋರ ಗಿಡಗಳನ್ನು ಇತ್ತೀಚೆಗೆ ಬಹಳವಾಗಿ ಹಾಕುತ್ತಿದ್ದೇವೆ. ಸಾವಿರಾರು ರೂಪಾಯಿಗಳ ವರಮಾನ ಬರತಕ್ಕ ಯೂರೋನಿಯಾ ಎಂಬ ಗಿಡಗಳನ್ನು ಸಹ ಬೆಳೆಯುತ್ತಿದ್ದೇವೆ. ರಬ್ಬರ್ ಪ್ಲಾಂಟೇಷನ್ ಸುಳ್ಯ ತಾಲ್ಲೂಕಿನಲ್ಲಿ 1500 ಎಕರೆಗಳಷ್ಟು ಮಾಡುತ್ತಾ ಇದ್ದೇವೆ. ಔಷಧಿಗಳಿಗೆ ಸಂಬಂಧಪಟ್ಟ ಸರ್ಪಗಂಧಿ ಇತರ ಪ್ಲಾಂಟೇಷನ್ ಕೂಡ ನಡೆಯುತ್ತಾ ಇದೆ. ಆದರೂ ಕೂಡ ಶ್ರೀಮಾನ್ ರಂಗನಾಥನ್ ಅವರು ಮಾತನಾಡುತ್ತಾ 1963ನೇ ಆಡಿಟ್ ವರದಿ ಪ್ರಕಾರ 6 ಲಕ್ಷ ರೂಪಾಯಿಗಳನ್ನು ಉಳಿಸಿಬಿಟ್ಟಿದ್ದಾರೆ, ಆ ರೀತಿ ಉಳಿಸಬಾರದು ಎಂಬುದಾಗಿ ಹೇಳಿದರು. ನಿಜವಾಗಿ ನಮ್ಮ ಉದ್ದೇಶ ಖರ್ಚುಮಾಡ ಬೇಕೆಂದು ಇದ್ದರೂ ಕೂಡ ಈ ಬಾಬಿಗೆ ಒದಗಿಸುವ ಹಣ ಕೊನೆಯಲ್ಲಿ ಮಂಜೂರಾಗುವುದರಿಂದ ಖರ್ಚುಮಾಡುವುದಕ್ಕೆ ಆಗಲಿಲ್ಲ. ಇಲಾಖೆಯಿಂದ ಎಕ್ಸ್‌ಪ್ಲನೇಷನ್ ಕೊಟ್ಟಿದ್ದಾರೆ. ಆದರೆ ಪ್ರಸ್ತುತಃ ವರ್ಷದ ಆದಿಯಲ್ಲಿ ಇಂತಹ ಯೋಜನೆಗಳಿಗೆ ಮಂಜೂರಾತಿ ಕೊಡಬೇಕು. ಆಗ ಕೆಲಸ ಚೆನ್ನಾಗಿ ಆಗುತ್ತದೆ. ಆದರೆ ಮಳೆ ಸಾಮಾನ್ಯವಾಗಿ ಎಲ್ಲಾ ಕಾಲದಲ್ಲೂ ಬರುವುದಿಲ್ಲ. ಪ್ರಕೃತಿ ಚೌಕಟ್ಟಿನಲ್ಲಿ ಯಾವಾಗ ಮಳೆ ಬರುತ್ತದೋ ಆ ಸಂದರ್ಭವನ್ನು ಉಪಯೋಗಿಸಿಕೊಂಡು ಕೆಲಸ ಕಾರ್ಯಗಳನ್ನು ಮಾಡಬೇಕಾಗುತ್ತದೆ. 1962-63ನೇ ಸಾಲಿನಲ್ಲಿ ಮಳೆ ಚೆನ್ನಾಗಿ ನಡೆಯಿತು ಆದರೆ 1963-64ನೇ ಸಾಲಿನಲ್ಲಿ ಅಷ್ಟೇ ರೀತಿಯಾಗಿ ಮಳೆಯಾಗಲಿಲ್ಲ.

ಈ ಒಂದು ದೃಷ್ಟಿಯಿಂದ ಕೂಡ ಕೆಲವು ಸಂದರ್ಭಗಳಲ್ಲಿ ಅಡ್ವಾನ್ಸ್ ಪ್ಲಾಂಟ್‌ಗಳನ್ನು ಮಳೆ ಬಂದಾಗ ಹಾಕಿದ್ದೇವೆ. ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಹೇಳಿದರು ಪ್ರಕೃತಿ ದತ್ತವಾದ

(ಶ್ರೀ ಬಿ. ರಾಚಯ್ಯ)

ಮರಗಳನ್ನು ಕಡಿದು ಹೊಸದಾಗಿ ಮರಗಳನ್ನು ಹಾಕುವುದಕ್ಕೆ ಹೋಗಬೇಡಿ ಎಂದು. ಅರಣ್ಯದಲ್ಲಿ ವರ್ಕಿಂಗ್ ಪ್ಲಾನು ಏನಿದೆ ಅದರ ಪ್ರಕಾರ ಇಂಥಿಂತಾ ಭಾಗದಲ್ಲಿ ಇಷ್ಟಿಷ್ಟು ಮರಗಳನ್ನು ಕಡಿಯ ಬೇಕು; ಇಷ್ಟಿಷ್ಟು ಮರಗಳನ್ನು ಇಂಥಿಂತಾ ಭಾಗದಲ್ಲಿ ಹಾಕಬೇಕು ಎಂದು ಯೋಜನಾಬದ್ಧವಾದ ಕೆಲಸ ಕಾರ್ಯಗಳು ನಡೆಯುತ್ತವೆ. ಹೆಚ್ಚು ಸ್ವಾಭಾವಿಕವಾಗಿರತಕ್ಕ ಅರಣ್ಯ ಏನಿದೆಯೋ ಅದರಲ್ಲಿ ಬಹಳ ಎಕನಾಮಿಕ್ ಪ್ಲಾಂಟ್ ಏನಿದೆ ಅದು ಎಲ್ಲೂ ಕೂಡ ಇರುವುದಿಲ್ಲ. ಆಮೇಲೆ ಎವರ್ ಗ್ರೀನ್ ಫಾರೆಸ್ಟ್ ಎಂದು ಏನು ಹೇಳುತ್ತಾರೆಯೋ ಅದರಲ್ಲಿಯೂ ಸಹ ಆರ್ಥಿಕ ದೃಷ್ಟಿಯಿಂದ ಲಾಭ ದಾಯಕವಾದ ಮರಗಳು ಇರುವುದಿಲ್ಲ. ಡ್ರೈಡೆಸಿಡೇರಸ್ ಫಾರೆಸ್ಟ್‌ನಲ್ಲಿ, ಟೀಕ್‌ವುಡ್, ರೋಜ್ ವುಡ್ ಸಾಗವಾನಿ ಮರಗಳು ಬಹಳ ಚೆನ್ನಾಗಿ ಬೆಳೆದಿರುತ್ತವೆ. ಮತ್ತು ಗಂಧದ ಮರಗಳೂ ಸಹ ಬಹಳ ಹೆಚ್ಚಾಗಿವೆ. ಎಕನಾಮಿಕ್ ಪಾಯಿಂಟ್ ಆಫ್ ವ್ಯೂನಿಂದ ಸರಿಯಾದ ಉತ್ಪತ್ತಿ ಬರತಕ್ಕ ಗಿಡ ಗಳನ್ನೂ ಸಹ ನಾವು ಹಾಕಿದ್ದೇವೆ. ಶ್ರೀಮತಿ ರತ್ನಮ್ಮ ಮಾಧವರಾವ್ ಅವರು ಹೇಳಿದರು ಸಾಗ ವಾನಿ ಮತ್ತು ಯೂಕ್ಲಿಪ್ಸ್ ಗಿಡಗಳನ್ನು ಹಾಕುವುದನ್ನು ಕಡಿಮೆ ಮಾಡಬೇಕು ಎಂದು ಯೂಕ್ಲಿಪ್ಸ್ ಮರಗಳಿಂದ 5-6 ರೀತಿಯ ಉಪಯುಕ್ತತೆ ಇದೆ. ಬಹುಭಾಗ ಇದನ್ನು ಬೆಳೆಯತಕ್ಕದ್ದು ಸೌದೆ ಗೋಸ್ಕರವಾಗಿ, ಮತ್ತು ಎಣ್ಣೆಗೋಸ್ಕರ ಉಪಯೋಗಿಸುತ್ತಾರೆ. ಆದಕ್ಕೋಸ್ಕರ ಅದನ್ನು ನಾವು ಅದನ್ನ ಹೆಚ್ಚಿಗೆ ಬೆಳೆಸುತ್ತಿದ್ದೇವೆ. ಸ್ವಾಭಾವಿಕವಾಗಿ ಕೆಲವು ಜಾತಿಯ ಮರಗಳು ಕಾಕನಕೋಟೆ, ದಾಂಡೇಲಿ ಮುಂತಾದ ಪ್ರದೇಶಗಳಲ್ಲಿ ಬೆಳೆಯುತ್ತವೆ. ಅಲ್ಲಿ ಕೆಲವು ರಿಜರ್ವ್ ಮರಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅದರ ಬಗ್ಗೆ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ಮಾನ್ಯ ಸದಸ್ಯರಿಗೆ ಅರ್ಥವಾಗುತ್ತದೆ ಪ್ಲಾಂಟೇಷನ್ ಆಫ್ ವಾಸ್ಟ್ ಗ್ರೋಯಿಂಗ್ ಸ್ಪೀಸಿಸ್ 1962-63ರಲ್ಲಿ 3528, 1963-64 4225. ಸಾಯಿಲ್ ಕನ್‌ಸರ್‌ವೇಷನ್ ಅನ್ನು 601 ಎಕರೆ ಯಲ್ಲಿ ಮಾಡಿದ್ದೇವೆ. ಟೀಕ್ ಪ್ಲಾಂಟೇಷನ್ 1962 63ರಲ್ಲಿ 6733 ಎಕರೆಯಲ್ಲಿ ಮಾಡಿದ್ದೇವೆ.

1963-64 ರಲ್ಲಿ 8817 ಎಕರೆಯಲ್ಲಿ ಹಾಕಿದ್ದೇವೆ. ಮ್ಯಾಚ್ ವುಡ್ ಪ್ಲಾಂಟೇಷನ್ ಅನ್ನು 1962-63 ರಲ್ಲಿ 2586 ಎಕರೆಗಳಲ್ಲಿ ಮಾಡಿದ್ದೇವೆ. 1963-64 ರಲ್ಲಿ 2887 ಎಕರೆಗಳಲ್ಲಿ ಮಾಡಿ ದ್ದೇವೆ. ಮೈನರ್ ಫಾರೆಸ್ಟ್ ರೋಡ್‌ಸೈಡ್ ಸಾಯಿಲ್ ಕನ್‌ಸರ್‌ವೇಷನ್ ಮತ್ತು ಸರ್ವೆ ಪ್ಲಾಂಟೇಷನ್ ಇವುಗಳೆಲ್ಲವನ್ನೂ ಕಳೆದವರ್ಷಕ್ಕಿಂತ ಹೆಚ್ಚಾಗಿ ಮಾಡಿದ್ದೇವೆ. ಮುಂದಿನ ವರ್ಷವೂ ಇನ್ನೂ ಹೆಚ್ಚಿಗೆ ಮಾಡಬೇಕು ಎಂದು ಯೋಜನೆಯನ್ನು ಸರ್ಕಾರದವರು ಇಟ್ಟುಕೊಂಡರೆ ಈ ಮಾನ್ಯ ಸಭೆಯವರನ್ನು ಇನ್ನೂ ಹೆಚ್ಚಿನ ಹಣವನ್ನು ಕೇಳುತ್ತೇವೆ. ಈಗ ನಾವು ಈ ಬೇಡಿಕೆಯಲ್ಲಿ ಕೇಳಿರತಕ್ಕ ಹಣವನ್ನು ಮರಗಳನ್ನು ಕಡಿದು ಮಾರಾಟ ಮಾಡುವುದಕ್ಕೋಸ್ಕರ ಕೇಳುತ್ತಾ ಇಲ್ಲ. ಫಾರೆಷ್ಟ್ ಪ್ಲಾಂಟೇಷನ್ ಗೋಸ್ಕರ ಖರ್ಚು ಹೆಚ್ಚಾಗುತ್ತಿದೆ. ಮತ್ತು ಕೆಲವು ಫಾರೆಸ್ಟ್ ಇಂಡಸ್ಟ್ರಿಗೋಸ್ಕರ ನಾವು ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದೇವೆ. ಕೆಲವು ಸಾಮಿಲ್‌ಗಳಿವೆ. ವುಡ್‌ಪ್ರಿಜರ್ವೇಷನ್ ಪ್ಲಾಂಟ್ಸ್ ಇವೆ. ಇನ್ನು ಕೆಲವು ಫರ್‌ನಿಚರ್ ಡಿಪೋಗಳಿವೆ. ಇವುಗಳೆಲ್ಲವೂ ಫಾರೆಸ್ಟ್ ಇಲಾಖೆಯ ಮುಖಾಂತರ ನಡೆಯುತ್ತಿವೆ. ಇನ್ನೂ ಏನೇನೋ ಕೆಲಸಗಳು ಈ ಫಾರೆಸ್ಟ್ ಇಲಾಖೆಯ ಮುಖಾಂತರ ನಡೆಯುತ್ತಿವೆ. ಅದಕ್ಕೋಸ್ಕರ ಸರ್ಕಾರದವರು ಹಣವನ್ನು ಖರ್ಚುಮಾಡಬೇಕಾಗಿದೆ. ಈ ಫಾರೆಸ್ಟ್ ಇಲಾಖೆಯ ಮುಖಾಂತರ ನಡೆಸತಕ್ಕಂಥ ಮಿಲ್ಲುಗಳ ಪೈಕಿ ಎರಡು ಮಿಲ್ಲುಗಳನ್ನು ಬಿಟ್ಟರೆ ಉಳಿದ ಎಲ್ಲಾ ಮಿಲ್ಲುಗಳೂ ಲಾಭದಾಯಕವಾಗಿ ನಡೆಯುತ್ತಿವೆ. ಆ ಮಿಲ್ಲುಗಳಲ್ಲಿ ಆಗುತ್ತಿದ್ದಂತಹ ನಷ್ಟ ವನ್ನೂ ಸಹ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ನಾನು ತಿಳಿಸುತ್ತೇನೆ. ಅನ್ ಎಕನಾಮಿಕ್ ಪ್ಲಾಂಟ್ ಏನಿದೆ ಅದನ್ನು ಯಾವುದನ್ನು ಟ್ರೀಟ್ ಮಾಡುವುದಕಾಗುವುದಿಲ್ಲ ಎಂದು ಮೊದಲು ಕೈಬಿಟ್ಟಿದ್ದರು. ಈಗ ನಾವು ಅದನ್ನು ಟ್ರೀಟ್ ಮಾಡಿ ಅದರಿಂದಲೂ ಸಹ ಹೆಚ್ಚಿಗೆ ಹಣವನ್ನು ಪಡೆಯುತ್ತಿದ್ದೇವೆ. ಈ ಸಂಬಂಧದಲ್ಲಿ ವುಡ್ ಪ್ರಿಜರ್ವೇಷನ್ ಪ್ಲಾಂಟ್ ಎಂದು ಶಿವಮೊಗ್ಗ, ಮಂಗಳೂರು, ಮತ್ತು ಭದ್ರಾವತಿ ಈ ಸ್ಥಳಗಳಲ್ಲಿ ಸ್ಥಾಪನೆಮಾಡಿ ಅಲ್ಲಿ ಕೆಲಸ ನಡೆಯು ತ್ತಿದೆ. ಈ ರೀತಿಯಾಗಿ ಯಾವುದು ಅಷ್ಟೊಂದು ಲಾಭದಾಯಕವಲ್ಲ ಎಂದು ಕೈಬಿಟ್ಟುಹೋಗಿತ್ತೋ ಅಂಥಾದ್ದೂ ಕೂಡ ಉಪಯೋಗ ಮಾಡಿಕೊಂಡು ಅದರಿಂದ ಲಾಭವನ್ನು ಪಡೆಯುತ್ತಿದ್ದೇವೆ. ಮತ್ತು ಈ ಇಲಾಖೆಯಲ್ಲಿ ಸಾಕಷ್ಟು ವುಡ್ ಸೀಜನಿಂಗ್ ಪ್ರಿಜರ್ವೇಷನ್ ಪ್ಲಾಂಟ್ ಹಾಕುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಕಾರ್ಖಾನೆಗಳಿಗೆ ರೈಲ್ವೆಗೆ ಸ್ಲೀಪರುಗಳನ್ನು ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನ ವರಿಗೇ ಬೇಕಾಗಿರತಕ್ಕ ಪೋಲುಗಳನ್ನೂ ಡಿಫೆನ್ಸ್ ಬಿಲ್ಡಿಂಗ್‌ಗಳಿಗೆ ಬೇಕಾಗಿರತಕ್ಕ ಮರಗಳನ್ನು ವರ್ಷೇ ವರ್ಷೇ ಹೆಚ್ಚಿನ ಮಟ್ಟದಲ್ಲಿ ಒದಗಿಸಿಕೊಟ್ಟಿದ್ದೇವೆ. ಕಳೆದವರ್ಷಕೂಡ ಯಾವ ಸಂಸ್ಥಾನ ದಲ್ಲಿಯೂ ಸಪ್ಲೈ ಮಾಡದೆ ಇರುವಷ್ಟು ರೈಲ್ವೆ ಸ್ಲೀಪರುಗಳನ್ನು ಅಧಿಕಮಟ್ಟದಲ್ಲಿ ನಮ್ಮ ಸಂಸ್ಥಾನ ದವರು ಇಂಡಿಯಾ ಸರ್ಕಾರದವರಿಗೆ ಸಪ್ಲೈಮಾಡಿ ಇಂಡಿಯಾ ಸರ್ಕಾರದವರ ಮೆಚ್ಚಿಗೆಯನ್ನು

ಪಡೆದಿದ್ದೇವೆ- ಅಮೇಲೆ ಸ್ಯಾಂಡಲ್ ವುಡ್ ಕಾರ್ಖಾನೆಯಲ್ಲಿ ಈ ವರ್ಷ ಸ್ವಲ್ಪ ಉತ್ಪತ್ತಿ ಕಡಿಮೆಯಾಗಿದೆ. ಏತಕ್ಕೆಂದರೆ ಹೋದವರ್ಷ ಈ ಫ್ಯಾಕ್ಟರಿಗೆ ಸಪ್ಲೈ ಮಾಡಿರತಕ್ಕ ಗಂಧದಮರಗಳನ್ನು ಉಪಯೋಗಿಸಿಲ್ಲ ಅವು ಹಾಗೆಯೇ ಇವೆ. ಇಂಟರ್ ನ್ಯಾಷನಲ್ ಮಾರ್ಕೆಟ್ಟಿನಲ್ಲಿ ಈ ಸ್ಯಾಂಡಲ್ ವುಡ್ ಆಯಿಲ್ಲಿನ ಬೆಲೆ ಸ್ವಲ್ಪ ಬಿದ್ದಿರುವುದರಿಂದ ಅಲ್ಲಿನ ಕೈಗಾರಿಕೆಗಳವರು ಇಲ್ಲಿನ ಮಾಲನ್ನು ಅಲ್ಲಿಗೆ ಕಳುಹಿಸುವುದನ್ನು ಸ್ವಲ್ಪ ನಿಲ್ಲಿಸಬೇಕೆಂದು ಕೇಳಿಕೊಂಡಿರುವುದರಿಂದ ಸಾಂಡಲ್‌ವುಡ್ ಉಪಯೋಗ ಸ್ವಲ್ಪ ಕಡಿಮೆಯಾಗಿ ಅದರ ಉತ್ಪತ್ತಿ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಇನ್ನೂ ಉಳಿದ ಎಲ್ಲಾ ಭಾಗದಲ್ಲಿಯೂ ಈ ಇಲಾಖೆ ಒಂದು ಹೆಚ್ಚಿನ ಮಟ್ಟದಲ್ಲಿ ಕೆಲಸಗಳನ್ನು ಸಾಧಿಸಿದೆ. ಈಗ ನಾವು ಈ ಇಲಾಖೆಗೆ ಕೇಳಿರತಕ್ಕಂಥ ಹಣ ಏನಿದೆ ಅದು ಈ ಹಣವೆಲ್ಲಾ ಸಾಮಾನ್ಯವಾಗಿ ಫಾರೆಸ್ಟ್ ಕಮ್ಯುನಿಕೇಷನ್ಸ್, ಫಾರೆಸ್ಟ್ ಸ್ಯಾಂಗ್‌ಚುಯರಿ, ಫಾರೆಸ್ಟ್ ಇಂಡಸ್ಟ್ರೀಸ್, ಮತ್ತು ಅಫಾರೆಸ್ಟೇಷನ್ ಕೆಲಸ ಇವುಗಳಿಗಾಗೆಯೇ ಹಣ ಖರ್ಚಾಗುತ್ತಿದೆ. ಯಾವ ಹಣವು ಸಹ ಈ ಇಲಾಖೆಯಲ್ಲಿ ದುರುಪಯೋಗವಾಗುತ್ತಿಲ್ಲ. ಈಗ ಈ ಮಾನ್ಯ ಸಭೆಯವರು ಕೊಟ್ಟಿರತಕ್ಕ ಹಣವನ್ನು ಎಲ್ಲಾ ಖರ್ಚುಮಾಡಿದೆ ಸ್ವಲ್ಪ ಮಟ್ಟಿಗ ಉಳಿತಾಯಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ಬೇಡಿಕೆಗಳ ಮೇಲೆ ಬಂದಿರತಕ್ಕ ಖೋತಾ ನಿರ್ಣಯಗಳ ಮೇಲೆ ಏನು ಮಾನ್ಯಸದಸ್ಯರು ಸಲಹೆಗಳನ್ನು ಮಾಡಿದ್ದಾರೆಯೋ ಅವುಗಳಿಗೆ ಕೆಲವು ವಿಷಯಗಳಿಗೆ ಪೂರ್ಣವಾದ ಜವಾಬನ್ನು ಕೊಡುವುದಕ್ಕೆ ಆಗದೆ ಇದ್ದರೂ ಕೂಡ ಅವರು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡು ಈ ಇಲಾಖೆಯಲ್ಲಿ ಇನ್ನೂ ಹೆಚ್ಚಿನ ಒಂದು ಪ್ರಗತಿಯನ್ನು ಸಾಧನೆಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ತಿಳಿಸಿ ಈಗ ಈ ಬೇಡಿಕೆಗಳಿಗೆ ಮಾನ್ಯ ಸದಸ್ಯರು ತಮ್ಮ ಅಂಗೀಕಾರವನ್ನು ಕೊಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri SANJEEVANATH AIKALA.—Does the Government propose to approach the World Bank for financial assistance to exploit the forest wealth and if so, what is the proposal?

Mr. SPEAKER.—This Government cannot approach the World Bank.

Sri SANJEEVANATH AIKALA.—I hear that there is a proposal like that From authoritative sourees, I heard that the Government proposes to approach the World Bank for certain financial assistance through the Government of India......

Mr. SPEAKER.—A suggestion.

Sri SANJEEVANATH AIKALA.—To exploit forest wealth.

Mr. SPEAKER.—It is more for the Finance Minister than for the Forest Minister.

Sri B. RACHIAH.—This question was not raised during the course of discussion. If the Hon ble Member wants clarification, let him meet me and I wi.l answer him.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾನು ಈ ಆರಣ್ಯದ ವಿಷಯದಲ್ಲಿ ಕೆಲವು ವಿಷಯ ಗಳನ್ನು ಹೇಳಿದ್ದೆ, ಮಾನ್ಯ ಮಂತ್ರಿಗಳು ಅವಕ್ಕೆ ಉತ್ತರವನ್ನು ಹೇಳಲಿಲ್ಲ.

ಶ್ರೀ ಬಿ. ರಾಚಯ್ಯ.—ಶ್ರೀಮಾನ್ ರೇವಣ್ಣಸಿದ್ದಪ್ಪನವರು ಈ ಅರಣ್ಯಕ್ಕೆ ಸಂಬಂಧ ಪಟ್ಟ ಹಾಗೆನೋ ಕೆಲವು ವಿಷಯಗಳನ್ನು ಹೇಳಿದ್ದರು. ನಾನು ಅವರಿಗೆ ಪರ್ಟಿಕ್ಯುಲರ್ ಆಗಿ ಇಂಥಿಂತಾದ್ದು ನಡೆಯುತ್ತದೆ ಎಂಬುದನ್ನು ಬರೆದುಕೊಡಿ ಅದರಮೇಲೆ ನಾವು ಆಕ್ಷನ್ ತೆಗೆದು ಕೊಳ್ಳುತ್ತೇವೆಂದು ಹೇಳಿದ್ದೆನು. ಆದರೆ ಅವರು ಅದನ್ನು ಬರೆದುಕೊಡಲಿಲ್ಲ. ಆದರೂ ಸಹ ಸರ್ಕಾರದವರು ಅಂಥಾ ಕೇಸುಗಳ ಬಗ್ಗೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ನನಗೆ ತಿಳಿಸಿದ ಹಾಗೆ ಒಂದೆರಡು ಕಡೆ ಕಳ್ಳತನ ನಡೆದಿದೆ, ಅದರಮೇಲೆ ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ.

ಯಾರೇ, ಅಧಿಕಾರಿಗಳಿರಲಿ, ಯಾವ ಮಟ್ಟದಲ್ಲಿಯೇ ಆಗಿರಲಿ, ನೇರವಾಗಿ ಲಂಚ ತೆಗೆದು ಕೊಂಡಿದ್ದಾರೆ, ಅದರಿಂದ ಕಳ್ಳ ಸಾಗಾಣಿಕೆಯಾಗುತ್ತಿದೆ ಎಂಬುದು ರುಜುವಾತು ಆದರೆ ಯಾರ ಪ್ರಭಾವಕ್ಕೂ ಒಳಗಾಗದೆ ಅವರ ಮೇಲೆ ತಕ್ಕ ಕಾರ್ಯಕ್ರಮ ತೆಗದುಕೊಳ್ಳುತ್ತೇನೆಂದು ಹೇಳುತ್ತೇನೆ.

(ಶ್ರೀ ಬಿ. ರಾಚಯ್ಯ)

ಸ್ವಾಮಿ, ನಾಲ್ಕು ಕೇಸುಗಳ ಸಂಬಂಧದಲ್ಲಿ ಫೈನ್ ಹಾಕಿ ಪ್ರಾಪರ್ಟಿ ಕಾನ್‌ಫಿಸ್‌ಕೇಟ್ ಮಾಡಿಕೊಂಡಿದ್ದೇವೆ. ಇನ್ನು ಎರಡು ಕೇಸುಗಳು ಪೆಂಡಿಂಗ್‌ನಲ್ಲಿವೆ. ಇವರ ಮೇಲೆ ಕೂಡ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ಅವರು ಒಂದು ಚೀಟಿಯನ್ನು ಕಳಿಸಿದ್ದಾರೆ. ಬಹುಶಃ ಈಗಾಗಲೇ ಅಲ್ಲಿಗೆ ಸಂಬಂಧಪಟ್ಟವರು ಹೋಗಿದ್ದಾರೆಂದು ಹೇಳುತ್ತೇನೆ.

ಶ್ರೀ ಸಂಜೀವನಾಥ ಐಕಳ.—ಸಂಡೂರು ಅರಣ್ಯದಲ್ಲಿ 10 ಲಕ್ಷ ರೂಪಾಯಿ ಗಂಧದ ಮರ ದುರುಪಯೋಗವಾಗಿರುವುದಕ್ಕೆ ಏನು ಕಾರ್‍ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಅಧ್ಯಕ್ಷರು.—ಹನ್ನೊಂದು ಸ್ಕ್ವಾಡ್‌ಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ.

ಶ್ರೀ ಸಂಜೀವನಾಥ ಐಕಳ.—ಸರ್ಕಾರಕ್ಕೆ ಆದಾಯ ತರುತ್ತಿದ್ದ ದೊಡ್ಡ ಕಾರ್ಯಕ್ರಮವನ್ನು ಕಬ್ಬಿನಿ ಪ್ರಾಜೆಕ್ಟ್ ತೆಗೆದುಕೊಂಡಿರುವುದರಿಂದ ಇನ್ನು ಮುಂದೆ ನಡೆಸುವುದಕ್ಕಾಗುವುದಿಲ್ಲ ಎಂದು ಗೊತ್ತಾಗಿದೆ. ಈ ಕಾರ್ಯಕ್ರಮವನ್ನು ಮುಂದುವರಿಸುವುದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು ಎಂದು ಸೂಚನೆ ಕೊಡುತ್ತೇನೆ, ಸ್ವಾಮಿ.

Sri B. D. JATTI (Minister for Finance).—It is a very good suggestion and we will consider it.

Sri S. RAJAGOPAL.—Sir, May I know some thing about the reversion of 17 officers?

Mr. SPEAKER.—The Government have replied to that point. If the member is not satisfied with the reply, I cannot help it.

I will now put the Demands to the vote of the House. The question is:

> "That the respective sums not exceeding the amount shown in the list of demands circulated to the members be granted to defray the charges which will come in course of payment during the financial year ending with 31st day of March 1965 in respect of demands Nos. 27, 38 and 51."

The motion was adopted.

As directed by the chair, the motion for Demands for Grants which were adopted by the House are reproduced below:—

DEMAND. NO. 27.—MISCELLANEOUS SOCIAL AND DEVELOPMENTAL ORGANISATIONS.

39. *Miscellaneous Social and Developmental organisations.*

> "That a sum not exceeding Rs. 1,87,60,000 be granted to the Government to defray the charges which will come in course of payment during the financial year for the period ending 31 st day March 1965, in respect of 'Miscellaneous Social and Developmental Organissations'."

DEMAND NO. 38.—FOREST

70. *Forest.*

" That a sum not exceeding Rs. 5,46,29,000 be granted to to the Government to defray the charges which will come in course of payment during the financial year for the period ending 31st day of March 1965, in respect of 'Forest'."

DEMAND NO. 51.—CAPITAL OUTLAY ON FORESTS ACCOUNT.

119. *Capital Outlay on Forests.*

"That a sum not exceeding Rs. 14,00,000 be granted to Government to defray the charges which will come in course of payment during the financial year for the period ending 31st day of March 1965, in respect of 'Capital Outlay on Forests'."

Mr. SPEAKER.—The House will now adjourn and meet tomorrow at 12 NOON.

The House adjourned at Five Minutes past Six of the Clock to meet again at Twelve of the Clock on Wednesday, the 25th March 1964.

WD 2538—GPB—900—12-6-64